# ಅಧ್ಯಾಯ 9

# ಆಡಳಿತ*

ಕೊಡಗು ತನ್ನದೇ ಸ್ವತಂತ್ರ ಆಡಳಿತವನ್ನು ಹೊಂದುವ ಮೊದಲು ಗಂಗ, ಹೊಯ್ಸಳ ಹಾಗೂ ವಿಜಯನಗರದ ಆಡಳಿತಕ್ಕೆ ಒಳಪಟ್ಟಿದ್ದ ಸಂಗತಿಯನ್ನು ಹಿಂದೆಯೇ ಗಮನಿಸಿದೆ. ಗಂಗರ ಕಾಲದಿಂದಲೂ ಗ್ರಾಮ, ಅದರ ಮೇಲೆ ನಾಡು; ಹಲವು ನಾಡುಗಳ ಮೇಲೆ ಸಾರ್ವಭೌಮ ರಾಜರು ನೇಮಿಸಿದ್ದ ಅಧಿಕಾರಿಗಳು ಇಲ್ಲವೇ ಪರಂಪರಾಗತ ಪಾಳಯಗಾರರು ಆಡಳಿತವನ್ನು ನಿರ್ವಹಿಸುತ್ತಿದ್ದ ವ್ಯವಸ್ಥೆ ಇರುತ್ತಿತ್ತು. ನಾಡುಗಳ ಗಡಿಗಳನ್ನು ಗುರುತಿಸಲು ಕೊಡಗಿನಲ್ಲಿ ಕಡಂಗ ಎಂದು ಪರಿಚಿತವಾದ ಕಂದಕಗಳು ಇದ್ದ ವಿಚಾರ ಒಂಬತ್ತನೇಯ ಶತಮಾನದ ಒಂದು ಗಂಗ ಶಾಸನದಲ್ಲಿನ 'ಪೆಣ್ಣಗಡಂಗ' ಎಂಬ ಶಬ್ದದಿಂದ ತಿಳಿದು ಬರುತ್ತಿದ್ದು, ಇಂಥ ಕಂದಕಗಳು ಈಗಲೂ ಉಳಿದುಕೊಂಡು ಬಂದಿವೆ. ಕಡಂಗಗಳನ್ನು ದಾಟಲು ಬಕ್ಕಬಾಗಿಲು ಎಂಬ ದಾರಿಗಳಿದ್ದು ಅಲ್ಲಿ ಪಹರೆಯುವರು ಇರುತ್ತಿದ್ದರು. ಇದೇ ಶಾಸನದಲ್ಲಿ 'ಕಿಗ್ಗಟ್ಟುನಾಡು' ಎಂಬ ನಾಡಿನ ಉಲ್ಲೇಖವಿದೆ. ಇನ್ನೊಂದು ಗಂಗ ಶಾಸನದಲ್ಲಿ ಈ ಪ್ರದೇಶದಲ್ಲಿ ಇದ್ದ ಐದು ಸಾಮಂತ ಅರಸರ ಹಾಗೂ ನಾಲ್ಕು ಮಲೆಪತಿಗಳ (ಹೊಯ್ಸಳರ ಶಾಸನಗಳ 'ಮಲೆಪ' ಗಮನಿಸಬಹುದು) ಉಲ್ಲೇಖವಿದೆ. ಇವರು ಗಂಗರಿಗೆ ಅಧೀನರಾದ ಈ ಭಾಗದ ಕಿರು ರಾಜವಂಶಗಳಿರಬಹುದು. ಮುಳ್ಳೂರುನಾಡು ಈ ರೀತಿ ಕಾಣಬರುವ ಇನ್ನೊಂದು ಘಟಕ.

ಏಳು ಸಾವಿರ ಸೀಮೆ (ಎಂದರೆ ಬಹುಶಃ ಏಳು ಸಾವಿರ ಗದ್ಯಾಣ ಉತ್ಪನ್ನವಿರುವ ಒಂದು ಪ್ರದೇಶ. ಇದರಲ್ಲಿ ಏಳು ನಾಡುಗಳಿದ್ದು ಮೂಲತಃ 28 ನಾಡುಗಳಿದ್ದ ಕೊಡಗಿನ ಒಡೆಯರ ರಾಜ್ಯಕ್ಕೆ ಇದು ಸೇರಿತ್ತು) ಎಂದು ಪರಿಚಿತವಾದ ಏಳು ನಾಡುಗಳನ್ನು ಹೊಸದಾಗಿ ಸೇರಿಸಿ ಮುಂದೆ 17ನೇಯ ಶತಮಾನದ ಕೊನೆಗೆ ಕೊಡಗಿನಲ್ಲಿ 35 ನಾಡುಗಳಾದುವೆಂದೂ ತಿಳಿಯುತ್ತದೆ. ಏಳುಸಾವಿರ ಸೀಮೆಯಲ್ಲಿ ಏಳು ನಾಡುಗಳಿದ್ದವು ಎಂದು ಗಮನಿಸಿದಾಗ ಒಂದು ಸಾವಿರ ಗದ್ಯಾಣ (ವರಹ – ಸುಮಾರು 52 ಗ್ರೇನ್ ತೂಕದ ಬಂಗಾರದ ನಾಣ್ಯ) ಕಂದಾಯ ಬರುವ ಪ್ರದೇಶವನ್ನು ಒಂದು ನಾಡಾಗಿ ಗುರುತಿಸಿರುವ ಸಾಧ್ಯತೆಯಿದೆ.

ಕೊಂಗಾಳ್ವರ ಶಾಸನಗಳಲ್ಲಿ ಮುಳ್ಳುನಾಡು, ಗುಂಡನಾಡು (ಕುನಾಡು?) ಎಂಬ ನಾಡುಗಳ ಉಲ್ಲೇಖವಿದೆ. ಅದೇ ಕಾಲಕ್ಕೆ ಚಂಗಾಳ್ವರ ಶಾಸನಗಳಲ್ಲಿ ಯಡವನಾಡನ್ನು ಹೇಳಿದೆ. ಚಂಗಾಳ್ವರ ಸಾಮಂತನೊಬ್ಬನು ಮುನಿವರಾದಿತ್ಯ ನಾಡು ಎಂಬ ಹಲವು ನಾಡುಗಳ ಸಮುಚ್ಚಯವನ್ನು ಆಳುತ್ತಿದ್ದ. ಇವರ 1296ರ ಒಂದು ಶಾಸನದಲ್ಲಿ ಈ ಮುನಿವರಾದಿತ್ಯ ನಾಡು, ಬಿಳುಹುನಾಡಿನ ಜೊತೆಗೆ ನಿಡಿತ, ಮೇಣಸ ನಾಡುಗಳು ಅಸ್ತಿತ್ವದಲ್ಲಿ ಇದ್ದಂತೆ ತೋರುತ್ತದೆ. ಹೊಯ್ಸಳರ ಸಿರಹ ಶಾಸನದಲ್ಲಿ (1175) ಬಿಳುಹುನಾಡು ಉಲ್ಲೇಖಿತವಾಗಿದೆ.

---

* ಈ ಅಧ್ಯಾಯದಲ್ಲಿ ಸಾಮಾನ್ಯ ಹಾಗೂ ಕಂದಾಯ ಆಡಳಿತಗಳು ಸೇರಿವೆ.

ಈ ಎಲ್ಲ ನಾಡುಗಳ ಕಲ್ಪನೆ ವ್ಯವಸ್ಥಿತವಾಗಿ ವಿಜಯನಗರದ ಕಾಲದಲ್ಲಿ ರೂಪುತಾಳಿ, ಕೊಡಗಿನ ಒಡೆಯರ ಕಾಲದಲ್ಲಿ ಆರಂಭದಲ್ಲಿ ಇವುಗಳ ಸಂಖ್ಯೆ 27, ಮುಂದೆ ಏಳುಸಾವಿರ ಸೀಮೆ ಸೇರಿ 35 ನಾಡು ಎಂಬ ಸ್ವರೂಪ ಬಂತು. ಅಧ್ಯಾಯ ಎರಡರಲ್ಲಿ ನೋಡಿದಂತೆ, ತಾವುನಾಡು–ಒಬ್ಬ ಕಿರು ಪಾಳಯಗಾರನ ಆಡಳಿತಕ್ಕೆ ಒಳಪಟ್ಟು ವಿಜಯನಗರದ ಆರಂಭದ ಕಾಲದಲ್ಲಿ ಇತ್ತು. ಇದಲ್ಲದೆ ಅಂಜಿಗೇರಿನಾಡಲ್ಲಿ ಇನ್ನೊಬ್ಬ ಪಾಳಯಗಾರನಿದ್ದ. 'ನಾಡ್‌ಕಟ್' ಎಂಬ ಕೊಡವ ಹಾಡಿನಲ್ಲಿ ನೋಡಿದ್ದಂತೆ, ಕೊಡಗಿನ ಒಡೆಯರ ಕಾಲದಲ್ಲಿ ಮೂವತ್ತೈದು ನಾಡುಗಳಿದ್ದು ಇವುಗಳು ಎಂಟು ಸೀಮೆಯಲ್ಲಿ ವಿಭಜಿತವಾದುವು. (ನಾಡನ್ನು ಇಂದಿನ ಹೋಬಳಿ ಎಂದು ಭಾವಿಸಿದರೆ ಸೀಮೆಯು ತಾಲೂಕೆಂದು ಭಾವಿಸಬಹುದು).

ಅರಮನೆಯಲ್ಲಿ ಕೇಂದ್ರ ಸರಕಾರದಲ್ಲಿ (ದಿವಾನ್ ಕಚೇರಿ) ರಾಜನಿಗೆ ಆಡಳಿತದಲ್ಲಿ ದಿವಾನರೆಂಬ ಮಂತ್ರಿಗಳಿದ್ದು ಇವರು ಸಲಹೆಗಾರರೂ ರಾಜಾಜ್ಞೆಗಳನ್ನು ಕಾರ್ಯಾಚರಣೆಗೆ ತರತಕ್ಕವರೂ ಆಗಿದ್ದರು. ಸರಕಾರೆಕಾರ ('ಕಾರ್ಯಕಾರ') ಈಗಿನ ಮುಖ್ಯ ಕಾರ್ಯದರ್ಶಿಯಂಥ ಎಂಬ ಒಂದು ಹುದ್ದೆ ಇದ್ದು 1807ರಲ್ಲಿ ಬೋಪು ಎಂಬಾತ ಆ ಹುದ್ದೆಯಲ್ಲಿ ಇದ್ದ. ಪ್ರತೀ ಸೀಮೆ ಅಥವಾ ತಾಲೂಕಿಗೆ ಒಬ್ಬ ಸುಬೇದಾರನಿದ್ದು ನಾಡು (ಅಥವಾ ಹೋಬಳಿಗೆ) ಒಬ್ಬ ಪಾರುಪತ್ತೆಗಾರನಿದ್ದನು. ಪ್ರತೀ ಗ್ರಾಮ (ಅಥವಾ ಗ್ರಾಮಗಳ ಗುಂಪಿಗೆ) ಪಟೇಲ (ಗೌಡ)ನೂ ಶಾನುಭೋಗನೂ ಇರುತ್ತಿದ್ದರು.

ನಾಡಿನಲ್ಲಿ ಪಾರುಪತ್ಯಗಾರ (ಮುಂದಿನ ಶೇಕದಾರನಿಗೆ ಸಮ ; ರೆವಿನ್ಯೂ ಇನ್ಸ್‌ಪೆಕ್ಟರ್) ನ ಕಚೇರಿ ಇರುತ್ತಿದ್ದು ಅವನ ಕೈಕೆಳಗೆ ಶಾನುಭೋಗರು (ಕಾರಕೂನರು) ಇರುತ್ತಿದ್ದರು. ದಿವಾನ್ (ಅರಮನೆ) ಕಚೇರಿಯಿಂದ ಪಾರುಪತ್ಯಗಾರನಿಗೆ ಕಳುಹಿಸಿದ ಯಾವುದೇ ಪತ್ರಕ್ಕೆ ಅದೇ ದಿನ ಉತ್ತರ ಕಳುಹಿಸಬೇಕೆಂದು ಎರಡನೇಯ ಲಿಂಗರಾಜೇಂದ್ರನ ಹುಕುಂನಾಮೆ ತಿಳಿಸುತ್ತದೆ. ಕಳುಹಿಸಿದ್ದಂಥ ಪತ್ರ ಅಥವಾ ನಿರೂಪದ ಸಾರಾಂಶವನ್ನು ನಾಡಕಚೇರಿಯ ದಫ್ತರದಲ್ಲಿ ಬರೆದಿಡಬೇಕೆಂದು ನಿಯಮವಿತ್ತು. ಪಾರುಪತ್ಯಗಾರನು ಒಂದು ತಿಂಗಳಲ್ಲಿ 20 ದಿನ ಕಚೇರಿಯಲ್ಲಿ ಪ್ರತೀ ದಿನಕ್ಕೆ ಹನ್ನೊಂದು ತಾಸಿನಂತೆ ಚಾಕರಿ ಮಾಡಿದ ನಂತರ ಉಳಿದ 10 ದಿನ ರಜೆ ಪಡೆಯಬಹುದಾಗಿತ್ತು. ಪ್ರತೀ ನಾಡಿಗೂ ಹೀಗೆ ಇಬ್ಬರು ಪಾರುಪತ್ಯಗಾರರು 20 ದಿನಗಳ ಸರ್ತಿಯಂತೆ ಕಾರ್ಯ ನಿರ್ವಹಿಸಬೇಕಾಗಿತ್ತು. "ಈ ನಾಡು ಪಾರುಪತ್ಯವನ್ನು ಎರಡು ಜನಕ್ಕೆ ಅಪ್ಪಣೆ ಕೊಡಿಸಿ ಇರುವುದರಿಂದ ನೀವಿಬ್ಬರು ಅರಮನೆ ಚಾಕ್ರಿಯಲ್ಲು ಇರುವಾಗ್ಯೆ ನಿಮ್ಮ ಪಾರುಪತ್ಯದಲ್ಲು ಅರಮನೆಯಿಂದ ಬಂದ ನಿರೂಪ, ಕಚೇರಿಯಿಂದ ಬಂದ ಉತ್ತರಗಳು, ರಶೀತಿ, ಕೈಕಾಗದ ಮುಂತಾಗಿ ಮಡಗತಕ್ಕ ಬಗ್ಯೆ ಒಂದು ಪೆಟ್ಟಿಗೆಯನ್ನು ಗೊತ್ತು ಮಾಡಿಕೊಂಡು ನಿರೂಪ, ಕಾಗದಪತ್ರ ಉತ್ತರ, ರಶೀದಿ, ಕೈಕಾಗದ ಸಹ ಕವಲತ್ತು ಮಾಡಿ ಅದರ ಮೇಲೆ ಇಂಥಿಂಥ ಕಾಗದ ಪತ್ರ ಉತ್ತರ ರಶೀತಿಯೆಂಬುದಾಗಿ ಅದರ ಮೇಲೆ ಬರೆದು ಮಡಗಿಕೊಂಡು ಈ ಬಗ್ಯೆ ನೀವಿಬ್ಬರೂ ಅರಮನೆ ಚಾಕ್ರಿಯಲ್ಲು ತಿಂಗಳು 1ಕ್ಕೆ 20 ದಿವಸ ಇದ್ದು 10 ದಿವಸದ ಮೇಲೆ ನಿಮ್ಮ ಸರತಿಗೆ ಹೋಗಿ ಬರುತ್ತಾ ನಿಮಗೆ ನೇಮಿಸಿ ಇರುವ ಚಾಕ್ರಿಯನ್ನು ತೂಗಿಸುವುದು." ಅದಲ್ಲದೆ ನಾಡಪಾರುಪತ್ಯಗಾರನು ಇತರ ಎಲ್ಲ ಚಾಕರರಿಗಿಂತ ಮೊದಲೇ, ಬೆಳಗ್ಗೆ ಆರುಗಂಟೆಗೇ ಕಚೇರಿಗೆ ಹೋಗಿ ಪ್ರತೀ ನಿತ್ಯ ರಾಜನ ಹುಕುಂ ನಾಮೆಯನ್ನು (ಆಡಳಿತದ ಕೈಪಿಡಿ 'ಮ್ಯಾನ್ಯುವಲ್') ಓದಿಕೊಳ್ಳಬೇಕು. ಏಳು ಗಂಟೆಗೆ ಬರುವ ಇತರ ತೈನಾತಿ (ಅಧೀನ) ನೌಕರರಿಂದ ಕೆಲಸ ಮಾಡಿಸಬೇಕು. ಹತ್ತು ಗಂಟೆಗೆ ಇವರೆಲ್ಲ ಊಟಕ್ಕೆ ಹೋಗಿ ಮುಂದೆ ಮಧ್ಯಾಹ್ನ ಒಂದು ಗಂಟೆಗೆ ತಿರುಗಿ ಕಚೇರಿಗೆ ಬಂದು, ರಾತ್ರಿ ಒಂಬತ್ತರವರೆಗೆ ಕೆಲಸ ಮಾಡಬೇಕೆಂದು ಹುಕುಂನಾಮೆಯು ಒಂದನೇಯ ಅಪ್ಪಣೆ ತಿಳಿಸುತ್ತದೆ.

ಬ್ರಿಟಿಷರ ಆಳ್ವಿಕೆ ಬಂದಾಗ 1834 ರಲ್ಲಿ ಆಡಳಿತ ತೀವ್ರ ಬದಲಾವಣೆ ಆಗಲಿಲ್ಲ. ಅರಸನ ಬದಲಿಗೆ ಕಮೀಷನರ್ ಆಡಳಿತವನ್ನು ವಹಿಸಿಕೊಂಡನು. ಮೊದಲು ಈ ಹುದ್ದೆಯನ್ನು ಕ|| ಫ್ರೇಜರ್ ಹೊಂದಿದ್ದು ಮುಂದೆ ಲೀ ಹಾರ್ಡಿ ಸೂಪರಿಂಟೆಂಡೆಂಟ್ ಎಂದು ಅಧಿಕಾರ ವಹಿಸಿಕೊಂಡನು. ಅರಮನೆ (ಕೇಂದ್ರ ಕಚೇರಿ)ಯಲ್ಲಿದ್ದ ದಿವಾನರ ಹುದ್ದೆಗಳೂ ತಾಲೂಕಿನ ಸುಬೇದಾರರ ಹುದ್ದೆಗಳೂ ಹಾಗೇ ಮುಂದುವರಿದವು. ಅಮರಸುಳ್ಯ, ಪುತ್ತೂರುಗಳು ಪ್ರತ್ಯೇಕಿಸಿದ ನಂತರ ಕೊಡಗಿನಲ್ಲಿ 508 ಗ್ರಾಮಗಳು ಉಳಿದವು. ಕೊಡಗನ್ನು ಆರು ತಾಲೂಕುಗಳಾಗಿ ವಿಭಜಿಸಲಾಯಿತು. ಇವುಗಳಲ್ಲಿ 24 ಹೋಬಳಿ (ನಾಡುಗಳಿದ್ದು) ನಾಡಿಗೊಬ್ಬ ಪಾರುಪತ್ಯಗಾರನಿದ್ದ. ಅವುಗಳ ವಿವರ ಹೀಗಿದೆ : 1) ಮಡಿಕೇರಿ ತಾ|| (ಕೇಂದ್ರ – ಮಡಿಕೇರಿ); ಮಡಿಕೇರಿ ತಾಲೂಕಿನಲ್ಲಿ ಐದು ನಾಡುಗಳಿದ್ದು ಪ್ರತೀ ನಾಡಿನ ಕೇಂದ್ರವನ್ನು ಕಂಸದಲ್ಲಿ ಕೊಟ್ಟಿದೆ. ಹಾಲೇರಿನಾಡು (ಮಡಿಕೇರಿ), ಕಗ್ಗೋಡ್ಲುನಾಡು (ತಳತಮನೆ), ಹೊರೂರು ನೂರೊಕ್ಕಲನಾಡು(ಬೋಯಿಕೇರಿ), ಹುದಿಕೇರಿ – ಕಾಂತಮೂರ್ನಾಡು (ಮೂರ್ನಾಡು) ಮತ್ತು ಉಲುಗಲಿ–ಮೂಡುಗೇರಿನಾಡು (ಸುಂಟಿಕೊಪ್ಪ). 2) ಪಾಡಿನಾಲ್ಕುನಾಡು ತಾ|| (ಕೇಂದ್ರ – ನಾಪೋಕ್ಲು); ಇದರಲ್ಲಿನ

ನಾಡುಗಳು ಇವು : ಪಾಡಿನಾಲ್ಕುನಾಡು (ನಾಲ್ಕುನಾಡು ಅರಮನೆ), ಕಡಿಯತ್‌ನಾಡು (ಬಾವುಲಿ), ತಾವುನಾಡು (ಭಾಗ ಮಂಡಲ), ಬೇಂಗನಾಡು (ಕೊಳಗದಾಳು) ಮತ್ತು ಕುಯಿಂಗೇರಿನಾಡು (ಪಾಲೂರು). 3) ಯೆಡೆನಾಲ್ಕುನಾಡು ತಾ||(ಕೇಂದ್ರ – ವೀರರಾಜಪೇಟೆ); ಯೆಡೆನಾಲ್ಕುನಾಡು (ವೀರ ರಾಜಪೇಟೆ), ಬೆಪ್ಪುನಾಡು (ಅರಮೇರಿ) ಮತ್ತು ಅಮ್ಮತ್ತಿ ನಾಡು (ಅಮ್ಮತ್ತಿ; ಅಗ ಕೋಲ್‌ಪೇಟೆ) ಈ ತಾಲೂಕಿನ ನಾಡುಗಳು. 4) ಕಿಗ್ಗಟ್ಟುನಾಡು ತಾ|| (ಕೇಂದ್ರ ಹುದಿ ಕೇರಿ); ಅಂಜಿಗೇರಿನಾಡು (ಹುದಿಕೇರಿ), ತಾವಳಗೇರಿನಾಡು (ತಾವಳಗೇರಿ), ಹತ್ತುಗಟ್ಟುನಾಡು (ಪೊನ್ನಂಪೇಟೆ) ಮತ್ತು ಬೆಟ್ಟಿಯತ್ನಾಡು (ಕುಂತಗ್ರಾಮ). 5) ನಂಜರಾಜಪಟ್ಟಣ ತಾ|| (ಕುಶಾಲನಗರ – ಅಗ ಫ್ರೇಜರ್‌ಪೇಟೆ); ಸೂರ್ಲಬ್ಬಿ ಗಡಿನಾಡು (ಮಾದಾಪುರ), ಯಡವನಾಡು (ಸೋಮವಾರ ಪೇಟೆ), ನಂಜರಾಜಪಟ್ಟಣ ಹೋಬಳಿ (ಫ್ರೇಜರ್‌ಪೇಟೆ) ಮತ್ತು ರಾಮಸ್ವಾಮಿ ಕಣಿವೆ ಹೋಬಳಿ (ಕಂಪೂರು) ಈ ತಾಲೂಕಿನ ನಾಡುಗಳು. 6) ಏಳುಸಾವಿರ ಸೀಮೆ ತಾ|| (ಕೇಂದ್ರ – ಶನಿವಾರಸಂತೆ)ನಲ್ಲಿ ಕೊಡಲಿ ಹೋಬಳಿ (ಕೊಡ್ಲಿ ಪೇಟೆ), ಬಿಲಹ ಹೋಬಳಿ (ಶನಿವಾರಸಂತೆ) ಮತ್ತು ನಿಡ್ತ ಹೋಬಳಿ (ಗೌಡಳ್ಳಿ) ಇದ್ದವು. ನಾಡುಗಳ ಪೈಕಿ ಕಗ್ಗೊಡ್ಲು ನಾಡಿನಲ್ಲಿ ಅತಿ ಕಡಿಮೆ, ಎಂದರೆ ಅರು ಗ್ರಾಮಗಳಿದ್ದರೆ ನಿಡ್ತ ಹೋಬಳಿಯಲ್ಲಿ 73 ಗ್ರಾಮಗಳಿದ್ದವು.

1894ರಲ್ಲಿ ಏಳುಸಾವಿರ ಸೀಮೆ ತಾಲೂಕನ್ನು ನಂಜರಾಜ ಪಟ್ಟಣ ತಾ||ನಲ್ಲಿ ವಿಲೀನಗೊಳಿಸಿದರು. 1916ರಲ್ಲಿ ಕಿಗ್ಗಟ್ಟು ನಾಡಿನ ವಿನಾ ಉಳಿದ ತಾಲೂಕುಗಳಲ್ಲಿ ಕೆಲವು ಬದಲಾವಣೆ ಗಳನ್ನು ಮಾಡಿದರು. 1921 ರಲ್ಲಿ ಪಾಡಿನಾಲ್ಕುನಾಡು ಮತ್ತು ಯೆಡೆನಾಲ್ಕು ನಾಡು ತಾಲೂಕುಗಳನ್ನು ಒಗ್ಗೂಡಿಸಿ ಪಾಡಿಯೆಡೆನಾಲ್ಕು ನಾಡು ತಾಲೂಕನ್ನು ಸೃಷ್ಟಿಸಿ ತಾಲೂಕು ಗಳ ಸಂಖ್ಯೆಯನ್ನು ನಾಲ್ಕಕ್ಕೆ ಇಳಿಸಿದರು. ನಾಡಪಾರುಪತ್ಯ ಗಾರರ ಸಂಖ್ಯೆ 11 ಕ್ಕೆ ಇಳಿಯಿತು. 1926 ರಲ್ಲಿ ಮಡಿಕೇರಿ ಮತ್ತು ನಂಜರಾಜಪಟ್ಟಣಗಳನ್ನು ಒಗ್ಗೂಡಿಸಿ ಅರು ನಾಡುಗಳ ಉತ್ತರ ಕೊಡಗು ತಾಲೂಕು, ಹಾಗೂ ಉಳಿದ ಎರಡು ತಾಲೂಕುಗಳನ್ನು ಒಗ್ಗೂಡಿಸಿ ಐದು ನಾಡುಗಳ ದಕ್ಷಿಣ ಕೊಡಗು ತಾಲೂಕು ಹೀಗೆ ಎರಡೇ ತಾಲೂಕುಗಳಾಗಿ ಕೊಡಗನ್ನು ವಿಭಜಿಸಿದರು. ಈ ತಾಲೂಕುಗಳ ಗಡಿಗಳಲ್ಲಿ ಕೆಲವೊಂದು ಬದಲಾವಣೆಗಳನ್ನು ಅಗಾಗ ಮಾಡಿದರು. 1926 ರಲ್ಲಿ ಉತ್ತರ ಕೊಡಗು ತಾ|| 760 ಚ. ಮೈಲಿ ವಿಸ್ತಾರವಾಗಿದ್ದರೆ 1931 ರಲ್ಲಿ ಇದರ ಗಾತ್ರ 833 ಚ. ಮೈಲಿ, ಹಾಗೂ 1941 ರಲ್ಲಿ 980 ಚ. ಮೈಲಿಗಳಾಗಿತ್ತು. ದಕ್ಷಿಣ ಕೊಡಗು 1926 ರಲ್ಲಿ 822 ಚ. ಮೈಲಿಗಳಿದ್ದರೆ 1931 ರಲ್ಲಿ 760 ಚ. ಮೈಲಿ ಹಾಗೂ 1941 ರಲ್ಲಿ 613 ಚ. ಮೈಲಿಗಳಾಗಿತ್ತು. 1953 ರಲ್ಲಿ ಸೋಮವಾರಪೇಟೆ ತಾಲೂಕು ನಾಲ್ಕುನಾಡುಗಳನ್ನು ಒಳಗೊಂಡಿದ್ದು, ಮಡಿಕೇರಿ ತಾಲೂಕು (ಮೂರು ನಾಡುಗಳು) ಹಾಗೂ ವೀರರಾಜಪೇಟೆ ತಾಲೂಕು (ನಾಲ್ಕು ಹೋಬಳಿಗಳು) ಹೀಗೆ ವ್ಯವಸ್ಥೆ ಯಾಯಿತು.

ಎರಡನೇಯ ಅಧ್ಯಾಯದಲ್ಲಿ ಕಂಡಂತೆ, 1869 ರಲ್ಲಿ ಕೊಡಗಿನ ಸೂಪರಿಂಟೆಂಡೆಂಟ್‌ನಿಗೆ ಕಮಿಷನರ್ ಎಂದು ನಾಮ ಕರಣ ಮಾಡಿದರು. ಇವರು ಮೈಸೂರಿನ ಚೀಫ್ ಕಮಿಷನರ್‌ರ ಅಧೀನರಾಗಿದ್ದರು. ಬೆಂಗಳೂರಲ್ಲಿ ಇರುತ್ತಿದ್ದ ಚೀಫ್ ಕಮಿಷನರ್ ಕೊಡಗಿನ ಪೋಲೀಸ್ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಅರಣ್ಯ ಇಲಾಖೆಗೆ ಮುಖ್ಯಸ್ಥರೂ ಆಗಿದ್ದರು. ಕೊಡಗಿನಲ್ಲಿ ಜಿಲ್ಲಾ ಬೋರ್ಡ್ (1902) ಮತ್ತು ಶಾಸನಸಭೆ (1924) ಇವುಗಳನ್ನು ಜಾರಿಗೆ ತಂದ ವಿಚಾರ ಎರಡನೇಯ ಅಧ್ಯಾಯದಲ್ಲಿ ಹೇಳಿದೆ. ಸ್ವಾತಂತ್ರ್ಯ ಬಂದ ನಂತರ ಕೊಡಗಿನಲ್ಲಿ 1952 ರಿಂದ ಚೀಫ್ ಕಮಿಷನರ್ ಇಬ್ಬರು ಮಂತ್ರಿಗಳ ನೆರವಿನಿಂದ ರಾಜ್ಯ ಪುನರ್ಘಟನೆಯ ವರೆಗೆ ಆಡಳಿತ ನಡೆಸಿದರು. 1952 ರ ಸುಧಾರಣೆಯಂತೆ ಕೊಡಗಿನಲ್ಲಿ ಚೀಫ್ ಕಮಿಷನರ್ (1940 ರಲ್ಲಿ ಕೊಡಗಿಗೇ ಚೀಫ್ ಕಮಿಷನರ್‌ರ ಕಚೇರಿಯನ್ನು ವರ್ಗಾಯಿಸಿ ಕೊಡಗಿ ನಲ್ಲಿದ್ದ ಕಮಿಷನರ್‌ರ ಸ್ಥಾನವನ್ನು ರದ್ದುಮಾಡಿದ್ದರು) ಅವರ ಅಧೀನದಲ್ಲಿ ಅಸಿಸ್ಟಂಟ್ ಕಮಿಷನರನ್ನು ನೇಮಿಸಲಾಗಿದ್ದು ಅವರೇ ಜಿಲ್ಲಾ ದಂಡಾಧಿಕಾರಿ (ಮ್ಯಾಜಿಸ್ಟ್ರೇಟ್) ಆಗಿದ್ದರು. ಅವರ ಕೈಕೆಳಗೆ ಇಬ್ಬರು ಸುಬೇದಾರರು (ತಹಸಿಲ್ದಾರರು) ಹಾಗೂ 11 ನಾಡು (ಹೋಬಳಿ) ಪಾರುಪತ್ಯಗಾರರು (ಶೇಕ್‌ದಾರ ಅಥವಾ ಮಣೆಗಾರ) ಇದ್ದರು. ಹಲವು ಗ್ರಾಮ ಗಳಿಗೆ ಒಬ್ಬರಂತೆ ಕೊಡಗಿನಲ್ಲಿ 50 ಶಾನುಭೋಗರಿದ್ದರು. ಚೀಫ್ ಸೆಕ್ರೆಟರಿ ಹಾಗೂ ಇತರ ಮೂವರು ಕಾರ್ಯದರ್ಶಿಗಳು ಮುಂತಾದ ಹುದ್ದೆಗಳು ಸೃಷ್ಟಿಯಾದವು. ಮುಂದೆ 1956ರ ನವೆಂಬರ್ 1ಕ್ಕೆ ಕೊಡಗು ಕರ್ನಾಟಕ ರಾಜ್ಯದಲ್ಲಿ ವಿಲೀನ ವಾದಾಗ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯನ್ನು ನೇಮಿಸಿ ಇತರ ಜಿಲ್ಲೆಗಳಲ್ಲಿದ್ದಂತೆ ಆಡಳಿತವನ್ನು ಪುನರ್ಘಟಿಸಿದರು. ತಾಲೂಕು ಮಟ್ಟದಲ್ಲಿ ತಹಸಿಲ್ದಾರರು, ಹೋಬಳಿ (ನಾಡು) ಮಟ್ಟದಲ್ಲಿ ಶೇಕ್‌ದಾರರು ಇರುವಂತೆ, ಬ್ರಿಟಿಷರ ಇತರ ಜಿಲ್ಲೆಗಳಲ್ಲಿ ಇದ್ದ ಸ್ವರೂಪದ ಆಡಳಿತ ಕೊಡಗಿನಲ್ಲಿ 1947 ಕ್ಕೂ ಮೊದಲೇ ರೂಪು ತಾಳಿತ್ತು.

ಕೊಡಗಿನ ಗಡಿಗಳನ್ನು 1860ರಲ್ಲಿ ಅಂತಿಮಗೊಳಿಸಿ, 1873ರಿಂದ ಗಡಿಯುಕ್ಕಡ (ಟೋಲ್‌ಗೇಟ್)ಗಳನ್ನು ಸ್ಥಾಪಿಸಿದರು. ಕ್ಯಾಪ್ಟನ್ ಇ. ಷಾ. ಕೊಡಗಿನ ಸೂಪರಿಂಟೆಂಡೆಂಟ್ ಆಗಿದ್ದಾಗ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ನಡುವಿನ ಗಡಿಗಳನ್ನು 1876ರಲ್ಲಿ ಅಂತಿಮಗೊಳಿಸಲಾಯಿತು.

## ಜಿಲ್ಲಾಧಿಕಾರಿ

1956 ರಿಂದ ರೂಢಿಗೆ ಬಂದ ವ್ಯವಸ್ಥೆಯಂತೆ ಜಿಲ್ಲಾಧಿಕಾರಿ (ಡೆಪ್ಯುಟಿ ಕಮೀಷನರ್) ಜಿಲ್ಲೆಯ ಮುಖ್ಯ ಕಾರ್ಯಕಾರಿ ಅಧಿಕಾರಿ. ಜಿಲ್ಲೆಯ ಆಡಳಿತ ಯಂತ್ರದ ಚಾಲಕ ಶಕ್ತಿಯಾದ ಇವರ ಅಧಿಕಾರ ವ್ಯಾಪಕವಾದುದು. ಜಿಲ್ಲಾಧಿಕಾರಿಯು ಜಿಲ್ಲೆಯ ವಾಸ್ತವ ಮುಖ್ಯಸ್ಥರಾಗಿದ್ದು ಆಡಳಿತಕ್ಕೆ ಇವರಿಂದಲೇ ಚಾಲನೆ ಸಿಗಬೇಕು. ಕಂದಾಯ, ನ್ಯಾಯಾಡಳಿತ ಮತ್ತು ಶಾಂತಿಪಾಲನಾ ಸಂಬಂಧೀ ಅಧಿಕಾರಗಳು ಇವರಲ್ಲಿ ಕೇಂದ್ರೀಕೃತವಾಗಿವೆ. ಬೇರೆ ಬೇರೆ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸಾಮೂಹಿಕವಾಗಿ ಇಲ್ಲವೆ ವೈಯುಕ್ತಿಕವಾಗಿ ಸಂಪರ್ಕಿಸಿ ಆಡಳಿತದಲ್ಲಿ ಸಮನ್ವಯ ರೂಪಿಸುವುದು ಇವರ ಜವಾಬ್ದಾರಿ. ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಸಮಿತಿಗಳು ಇವುಗಳ ಕೆಲಸದಲ್ಲಿ ಮಾರ್ಗದರ್ಶನ ನೀಡುವ ಅಧಿಕಾರವೂ ಇವರಿಗಿದೆ. ಆದರೆ ಸ್ಥಳೀಯ ಸಂಸ್ಥೆಗಳು ಈಗ ಜಿಲ್ಲಾ ಪರಿಷತ್ತಿನ ಕಕ್ಷೆಗೆ ಒಳಪಟ್ಟಿವೆ. ಸಾಮೂಹಿಕ ಸಂಪರ್ಕ ಸರಕಾರ ಪ್ರೇರಿತ ಕಾರ್ಯಕ್ರಮಗಳು ಮುಂತಾದ ವಿವಿಧ ಚಟುವಟಿಕೆಗಳ ಮೇಲೆ ಅವರು ಉಸ್ತುವಾರಿ ಮಾಡಬೇಕು. ಹಿಂದೆ ಸಾಮೂಹಿಕ ಅಭಿವೃದ್ಧಿ ಬ್ಲಾಕ್‌ಗಳಲ್ಲಿದ್ದ ಬ್ಲಾಕ್ ಅಭಿವೃದ್ಧಿ ಅಧಿಕಾರಿಯ ಮೇಲೂ ಅವರು ಉಸ್ತುವಾರಿ ಹೊಂದಿದ್ದರು. ಈಗ ಈ ಅಧಿಕಾರವು ಜಿಲ್ಲಾ ಪರಿಷತ್ತಿಗೆ ಸಂದಿದೆ.

ಪಡಿತರ ವಿತರಣೆ, ಆಹಾರ ಧಾನ್ಯ ಹಾಗೂ ಬಳಕೆ ವಸ್ತುಗಳ ನಿಯಂತ್ರಣ, ಶಾಂತಿಭಂಗದ ಪ್ರಕರಣಗಳು, ಪ್ರವಾಹ, ಬೆಂಕಿ ಅನಾಹುತ, ಕ್ಷಾಮ ಮತ್ತು ಸಾಂಕ್ರಾಮಿಕ ರೋಗಗಳ ಕಾಣಿಸುವಿಕೆ ಮುಂತಾದ ತುರ್ತು ಪ್ರಸಂಗಗಳಲ್ಲಿ ಎಲ್ಲ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು ಅವರ ಜವಾಬ್ದಾರಿ. ಆಡಳಿತ ನಡೆಸುವುದರ ಜೊತೆಗೆ ಸರಕಾರದ ನೀತಿ ನಿಯಮಗಳನ್ನು ಆಡಳಿತದಲ್ಲಿರುವವರಿಗೂ ಜನರಿಗೂ ವಿವರಿಸಿ ಕಾರ್ಯಾಚರಣೆಗೆ ತರುವುದು, ಚುನಾವಣೆಗಳನ್ನು ನಡೆಸುವುದು ಅವರ ಹೊಣೆಗಾರಿಕೆ. ಜಿಲ್ಲೆಯ ಸಮೃದ್ಧಿ ಮತ್ತು ಪ್ರಗತಿಯ ತಳಹದಿಗಳಾದ ಪಂಚವಾರ್ಷಿಕ ಯೋಜನೆಗಳ ಸಕಲ ಕಾರ್ಯಚಟುವಟಿಕೆಗಳ ಸಮರ್ಪಕ ಅನುಷ್ಠಾನ ಅವರ ಆಡಳಿತ ಕಾರ್ಯಗಳಲ್ಲಿ ಮುಖ್ಯವಾದುದು.

ಈ ಮೇಲೆ ಹೇಳಿದ ಕೆಲಸ ಕಾರ್ಯಗಳಲ್ಲದೆ ಅವರು ಸರಕಾರದ ಸಾಮಾಜಿಕ ಮತ್ತು ಆರ್ಥಿಕ ನೀತಿಗಳಿಗನುಗುಣವಾಗಿ ಭೂ ಸುಧಾರಣಾ ಕಾಯಿದೆ, ಭೂ ಮಂಜೂರಾತಿ ಕಾಯಿದೆ, ಕೆಲವು ಜಮೀನುಗಳ ಪರಭಾರೆ ನಿಷೇದ ಕಾಯಿದೆ, ಋಣ ಪರಿಹಾರ ಕಾಯಿದೆ, ತುಂಡು ಹಿಡುವಳಿ ನಿಷೇದ ಕಾಯಿದೆ, ವೃದ್ಧಾಪ್ಯವೇತನ, ವಿಧವಾ ವೇತನ, ಅಂಗವಿಕಲ ವೇತನ, ಸ್ವಾತಂತ್ರ್ಯ ಹೋರಾಟಗಾರರ ಪಿಂಚಣಿ, ಪಡಿತರ ಚೀಟಿ ಇವುಗಳ ಪೂರ್ವಭಾವಿ ಕೆಲಸ ಹಾಗೂ ವಿತರಣೆ, ಆಶಾಕಿರಣ ಯೋಜನೆ, ಬೆಂಕಿ ಅನಾಹುತ, ಪ್ರವಾಹ ಮುಂತಾದ ಪ್ರಕೃತಿ ವಿಕೋಪಕ್ಕೆ ತುತ್ತಾದ ಕಡೆಗಳಲ್ಲಿ ಮುಂಜಾಗರೂಕತೆ ವಹಿಸಿ ಪರಿಹಾರ ವಿತರಣೆ, ಬರಗಾಲ, ಕ್ಷಾಮ ಮುಂತಾದ ಕಡೆಗಳಲ್ಲಿ ತುರ್ತು ಪರಿಹಾರ ಒದಗಿಸುವುದಲ್ಲದೆ, ಆಗ ದನ ಕರುಗಳಿಗೆ ಮೇವು, ಕುಡಿಯುವ ನೀರಿನ ಪೂರೈಕೆ ವ್ಯವಸ್ಥೆ ಮುಂತಾದವುಗಳು ಇವರ ಮುಖಾಂತರ ನಿರ್ವಹಿಸಲ್ಪಡುತ್ತದೆ. ಸಾರ್ವಜನಿಕ ಉಪಯುಕ್ತ ಕೆಲಸಗಳಾದ ಭೂ ಸ್ವಾಧೀನ, ಗೋಮಾಳ ರಕ್ಷಣೆ, ಜನ, ಜಾನುವಾರುಗಳ ಗಣತಿ, ಆರೋಗ್ಯ ಇಲಾಖೆಯ ವ್ಯಾಪ್ತಿಯ ಕುಟುಂಬ ಕಲ್ಯಾಣ ಯೋಜನೆಯಲ್ಲಿ ಸಕ್ರೀಯ ಪಾತ್ರ, ರಾಷ್ಟ್ರೀಯ ಸಣ್ಣ ಉಳಿತಾಯ ಯೋಜನೆ ಇಂತಹ ಮಹತ್ವ ಕಾರ್ಯಗಳನ್ನು ಇವರ ಕಚೇರಿಯ ವತಿಯಿಂದ ನಿರ್ವಹಿಸಲಾಗುತ್ತದೆ.

ಅಭಿವೃದ್ಧಿ ಯೋಜನೆ, ಅಬಕಾರಿ, ಮುಜರಾಯಿ, ಸಮಾಜ ಕಲ್ಯಾಣ ಮುಂತಾದ ಅನೇಕ ಇಲಾಖೆಗಳು ಇತ್ತೀಚೆಗೆ ಕಂದಾಯ ಇಲಾಖೆಯಿಂದ ಪ್ರತ್ಯೇಕಗೊಂಡ ಇಲಾಖೆಗಳಾಗಿದ್ದರೂ ಸಹ ಕಂದಾಯ ಇಲಾಖೆಯ ಸಹಭಾಗಿತ್ವದಲ್ಲಿಯೇ ಕಾರ್ಯ ನಿರ್ವಹಿಸುತ್ತವೆ. ಈ ಮೇಲಿನ ಕಾರಣಗಳಿಂದ ಜಿಲ್ಲಾಧಿಕಾರಿಯ ನೇತೃತ್ವದ ಕಂದಾಯ ಇಲಾಖೆಯು ಅತೀ ಹೆಚ್ಚಿನ ಜವಾಬ್ದಾರಿಯುತ ಕರ್ತವ್ಯಗಳನ್ನು ನಿರ್ವಹಿಸುತ್ತಿರುವ ಏಕೈಕ ಇಲಾಖೆಯಾಗಿದ್ದು ಸರ್ಕಾರದ ನೀತಿಗಳನ್ನು ಜಾರಿಗೊಳಿಸುವಲ್ಲಿಯೂ ಹಾಗೂ ಸಾರ್ವಜನಿಕ ಸೇವೆಯಲ್ಲಿಯೂ ಸಹ ಮಹತ್ವಪೂರ್ಣ ಪಾತ್ರವನ್ನು ವಹಿಸುತ್ತಾ ಬಂದಿರುತ್ತದೆ.

ಜಿಲ್ಲಾಧಿಕಾರಿಯ ಮುಖ್ಯ ಜವಾಬ್ದಾರಿಗಳನ್ನು ಹೀಗೆ ಪಟ್ಟಿ ಮಾಡಬಹುದು : 1) ಕಾನೂನು, ಶಿಸ್ತು ಹಾಗೂ ಶಾಂತಿಪಾಲನೆ. 2) ಭೂ ದಾಖಲೆಗಳ ರಕ್ಷಣೆ ಹಾಗೂ ಹಕ್ಕು

ಬದಲಾವಣೆ ಮತ್ತು ನಿರ್ವಹಣೆ. 3) ಭೂ ಕಂದಾಯ ಮತ್ತು ಸರ್ಕಾರಿ ಬಾಕಿಗಳ ವಸೂಲಾತಿ. 4) ಸರ್ಕಾರದ ಸಾಮಾಜಿಕ ಹಾಗೂ ಆರ್ಥಿಕ ನೀತಿಗಳನ್ನು ಅನುಷ್ಠಾನಕ್ಕೆ ತರುವುದು. 5) ಆಹಾರ ಧಾನ್ಯ ಸಂಗ್ರಹಣೆ ಮತ್ತು ಅಗತ್ಯ ಸಾಮಗ್ರಿಗಳ ವ್ಯವಸ್ಥಿತ ವಿತರಣೆ. 6) ಲೋಕಸಭೆ, ವಿಧಾನ ಸಭೆ, ಪುರಸಭೆ ಜಿಲ್ಲಾ ಪರಿಷತ್, ಮಂಡಲ ಪಂಚಾಯತ್, ವ್ಯವಸಾಯೋತ್ಪನ್ನ ಮಾರಾಟ ಸಮಿತಿ ಮತ್ತು ಸ್ಥಳೀಯ ಸಹಕಾರ ಸಂಘಗಳ ಚುನಾವಣೆ ನಿರ್ವಹಣೆ. 7) ಪ್ರಕೃತಿ ವಿಕೋಪಕ್ಕೆ ತುತ್ತಾದ ಕಡೆಗಳಲ್ಲಿ ಪರಿಹಾರ ಕಾರ್ಯಗಳನ್ನು ಹಾಗೂ ಕಾಮಗಾರಿಗಳನ್ನು ನಿರ್ವಹಿಸುವುದು. 8) ಕೋಮು ಗಲಭೆ ಪೀಡಿತ ಪ್ರದೇಶಗಳಲ್ಲಿ ಪರಿಹಾರ ಹಾಗೂ ಮರುವಸತಿ ಸೌಕರ್ಯ ಕಲ್ಪಿಸುವುದು. 9) ಜನಗಣತಿ, ಜಾನುವಾರು ಗಣತಿ ಮುಂತಾದ ಗಣತಿ ಕಾರ್ಯ ನಿರ್ವಹಿಸುವುದು. 10) ಸಾರ್ವಜನಿಕ ಉಪಯೋಗಕ್ಕೆ ಅಗತ್ಯವಿರುವ ಜಮೀನುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳುವುದು ಮತ್ತು ಪರಿಹಾರ ನೀಡುವುದು. 11) ಭೂಹೀನರಿಗೆ ಲಭ್ಯವಿರುವ ಸರ್ಕಾರಿ ಜಮೀನುಗಳನ್ನು ಆದ್ಯತೆಯಿಂದ ಮಂಜೂರು ಮಾಡುವುದು. 12) ಭೂಸುಧಾರಣಾ ಕಾಯಿದೆಯನ್ನು ಜಾರಿಗೊಳಿಸುವುದು. 13) ಇನಾಂ ರದ್ದತಿ ಕಾಯಿದೆಯನ್ನು ಜಾರಿಗೊಳಿಸುವುದು. 14) ಆದಾಯ, ಜಾತಿ, ವಾಸ್ತವ್ಯ ಮತ್ತು ಸಾಲ್ವೆನ್ಸಿ ದೃಢೀಕರಣ ಪತ್ರಗಳನ್ನು ನೀಡುವುದು. 15) ಚಲನಚಿತ್ರ ನಾಟಕ ಮತ್ತು ಮನರಂಜನೆ ಪ್ರದರ್ಶನಗಳಿಗೆ ಪರವಾನಗಿ ನೀಡುವುದು. 16) ಧಾರ್ಮಿಕ ಮತ್ತು ದತ್ತಿ ಸಂಸ್ಥೆಗಳ ಉಸ್ತುವಾರಿ. 17) ಆಯುಧಗಳನ್ನು ಹೊಂದಲು ಪರವಾನಗಿ ನೀಡುವುದು. 18) ವೃದ್ಧಾಪ್ಯ ವೇತನ ವಿಧವಾ ವೇತನ, ಅಂಗವಿಕಲರ ವೇತನ, ಸ್ವಾತಂತ್ರ್ಯ ಹೋರಾಟಗಾರರ ಪಿಂಚಣಿ ಮಂಜೂರಾತಿ. 19) ಸಾರ್ವಜನಿಕ ಆಡಳಿತ ನಿರ್ವಹಣೆ. 20) ಕುಟುಂಬ ಕಲ್ಯಾಣ ಯೋಜನೆ ಅನುಷ್ಠಾನಗೊಳಿಸುವುದು. 21) ರಾಷ್ಟ್ರೀಯ ಸಣ್ಣ ಉಳಿತಾಯ ಯೋಜನೆಯನ್ನು ಅನುಷ್ಠಾನಕ್ಕೆ ತರುವುದು. 22) ಗಡಿ ಪ್ರದೇಶಾಭಿವೃದ್ಧಿ ಯೋಜನೆ ಅನುಷ್ಠಾನ. 23) ನೆಹರೂ ರೋಜ್‌ಗಾರ್ ಯೋಜನೆ ಅನುಷ್ಠಾನ ಹಾಗೂ ಈ ಕೆಳಕಂಡ ಕೆಲವು ಕಾಯಿದೆ ನಿಯಮ ಹಾಗೂ ಅಧಿನಿಯಮಗಳನ್ನು ಕಂದಾಯ ಇಲಾಖೆಯು ಜಾರಿಗೊಳಿಸುತ್ತದೆ.

1) ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ನಿಯಮ 1966. 2) ಕರ್ನಾಟಕ ಭೂ ಮಂಜೂರಾತಿ ನಿಯಮ 1969. 3) ಕೊಡಗು ಭೂ ಕಂದಾಯ ರೆಗ್ಯುಲೇಷನ್ 1899. 4) ಕರ್ನಾಟಕ ಭೂಸುಧಾರಣಾ ಅಧಿನಿಯಮ 1961 ಮತ್ತು ಇದರ ನಿಯಾಮಾವಳಿಗಳು. 5) ಕರ್ನಾಟಕ ಋಣ ಪರಿಹಾರ ಕಾಯಿದೆ 1978. 6) ಕರ್ನಾಟಕ ಪರಿಶಿಷ್ಟ ಜಾತಿ–ಪಂಗಡಗಳ (ಕೆಲವು ಜಮೀನುಗಳ ಪರಭಾರೆ ನಿಷೇಧ ಕಾಯಿದೆ (1978). 7) ಕರ್ನಾಟಕ ತುಂಡು ಹಿಡುವಳಿ ನಿಷೇಧ ಕಾಯಿದೆ ಮತ್ತು ಹಿಡುವಳಿ ಸಂಯೋಜನೆ ಕಾಯಿದೆ 1966 ಮತ್ತು ನಿಯಮಾವಳಿಗಳು. 8) ಕರ್ನಾಟಕ ಗ್ರಾಮಾಧಿಕಾರಿಗಳ ರದ್ದತಿ ಕಾಯಿದೆ 1961 9) ಕರ್ನಾಟಕ ನೀರಾವರಿ ಅಧಿನಿಯಮ 1965. 10) ಕರ್ನಾಟಕ ನೀರು ಶುಲ್ಕ ಮತ್ತು ಅಭಿವೃದ್ಧಿ ಕರ ಅಧಿನಿಯಮ 1967. 11) ಕರ್ನಾಟಕ ಅರಣ್ಯ ಅಧಿನಿಯಮ. 12) ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮ ಮತ್ತು ನಿಯಮಾವಳಿಗಳು. 13) ಕರ್ನಾಟಕ ಇನಾಂ ರದ್ದತಿ ಕಾಯಿದೆ 1977. 14) ಕರ್ನಾಟಕ ಧಾರ್ಮಿಕ ದತ್ತಿ ಹಾಗೂ ಇನಾಂ ರದ್ದತಿ ಕಾಯಿದೆ 1955. 15) ಕರ್ನಾಟಕ ಜಿಲ್ಲಾ ಪರಿಷತ್‌ಗಳ ತಾಲೂಕು ಪಂಚಾಯಿತಿ ಮಂಡಲ ಪಂಚಾಯಿತಿ ಮತ್ತು ನ್ಯಾಯ ಪಂಚಾಯಿತಿಗಳ ಅಧಿನಿಯಮ 1983 ಮತ್ತು ನಿಯಮ 1986. 16) ಕೊಡಗು ಜಿಲ್ಲೆಯಲ್ಲಿ ಮಾಜಿ ಯೋಧರ ಪುನರ್‌ವಸತಿ ಯೋಜನೆ ಅನುಷ್ಠಾನ. 17) ಅಗತ್ಯ ವಸ್ತುಗಳ ಕಾಯಿದೆ 1855 ಮತ್ತು ಕಾಯಿದೆಯಡಿಯಲ್ಲಿನ ನಿಯಂತ್ರಣ ಕಾಯಿದೆಗಳು. 18) ಭೂಸ್ವಾಧೀನ ಕಾಯಿದೆ ಮತ್ತು ತಿದ್ದುಪಡಿ ಕಾಯಿದೆ 1984. 19) ಜನತಾ ಪ್ರಾತಿನಿಧ್ಯ ಕಾನೂನು. 20) ಕರ್ನಾಟಕ ರೈಸ್ ಮಿಲ್ಲಿಂಗ್ ಇಂಡಸ್ಟ್ರೀಸ್ ಕಾಯಿದೆ. 21) ಕರ್ನಾಟಕ ವಕ್ಫ್ ಕಾಯಿದೆ. 22) ಕರ್ನಾಟಕ ಪೋಲೀಸ್ ಕಾಯಿದೆ 1963 ಮತ್ತು ನಿಯಮಾವಳಿ. 23) ಕರ್ನಾಟಕ ಸಿನಿಮಾ ರೆಗ್ಯೂಲೇಷನ್ ಕಾಯಿದೆ 1964 ಮತ್ತು ನಿಯಮಾವಳಿ 1971. 24) ಕರ್ನಾಟಕ ಟ್ರೆಜರಿ ಕಾಯಿದೆ. 25) ಸಿಮೆಂಟ್ ನಿಯಂತ್ರಣ ಕಾಯಿದೆ. 26) ಇಂಡಿಯನ್ ಎಮರ್ಜನ್ಸಿ ಕಾಯಿದೆ. 27) ಸಿವಿಲ್ ಪ್ರೊಸೀಜರ್ ಕೋಡ್ 28) ಕ್ರಿಮಿನಲ್ ಪ್ರೊಸೀಜರ್ ಕೋಡ್. 29) ಸಿಟಿಜನ್ ಶಿಪ್ ಕಾಯಿದೆ 1955 ಮತ್ತು ನಿಯಮ 1956. 30) ಪೆಟ್ರೋಲಿಯಂ ಕಾಯಿದೆ. 31) ಕರ್ನಾಟಕ ಸೀಮೆ ಎಣ್ಣೆ ಲೈಸೆನ್ಸ್ ಆದೇಶ 1986. 32) ಕರ್ನಾಟಕ ಅವಶ್ಯ ವಸ್ತು ವ್ಯಾಪಾರಗಳ ಲೈಸೆನ್ಸ್ ಆದೇಶ 1986. 33) ಭಾರತದ ಬಂದೂಕು ಕಾಯಿದೆ 1959 ಮತ್ತು ನಿಯಮಾವಳಿ 34) ಸಿಡಿಮದ್ದುಗಳ ಕಾಯಿದೆ 1884 ಮತ್ತು ನಿಯಮಾವಳಿ 1981. 35) ಕರ್ನಾಟಕ ಮುನ್ಸಿಪಲ್ ಕಾಯಿದೆ 1964 ಮತ್ತು ನಿಯಮಾವಳಿಗಳು. 36) ಇಂಡಿಯನ್ ಲ್ಯುನಸಿ (ಮನೋವಿಕಲರ) ಆ್ಯಕ್ಟ್ 1912. 37) ಪ್ರೆಸ್ ಮತ್ತು

ರಿಜಿಸ್ಟ್ರೇಷನ್ ಆಫ್ ಬುಕ್ಸ್ ಕಾಯಿದೆ. 38) ಟ್ರಾನ್ಸ್‌ಫರ್ ಆಫ್ ಪಾರ್ಟನರ್ಸ್ ಕಾಯಿದೆ. 39) ಮುಜರಾಯಿ ವರ್ಗಾವಣೆಯ ಕೈಪಿಡಿ. 40) ಕೊಡಗು ಟೆಂಪಲ್ ಫಂಡ್ ಕಾಯಿದೆ. 41) ವೃದ್ಧಾಪ್ಯ ವೇತನ, ಅಂಗವಿಕಲರ ವೇತನ ವಿಧವಾ ವೇತನ, ಸ್ವಾತಂತ್ರ್ಯ ಹೋರಾಟಗಾರರ ಪಿಂಚಣಿ ನಿಯಮಗಳು. 42) ಭಾರತದ ಕಾಫಿ ಕಾಯಿದೆ 1942. 43) ಏಲಕ್ಕಿ ರಿಜಿಸ್ಟ್ರೇಶನ್ ಕಾಯಿದೆ ಮತ್ತು 44) ಜೀತ ಪದ್ಧತಿ ನಿರ್ಮೂಲನ ಕಾಯಿದೆ 1976.

ಜಿಲ್ಲಾಧಿಕಾರಿಯು ಜಿಲ್ಲೆಯ ಕಂದಾಯ ಸಂಗ್ರಹ ವ್ಯವಸ್ಥೆಯ ಮುಖ್ಯಸ್ಥರು. ಕಂದಾಯ ಇಲಾಖೆಯ ಸಿಬ್ಬಂದಿ ಹಾಗೂ ಇಲಾಖೆಯ ಭೂ ಸಂಬಂಧಿ ದಸ್ತಾವೇಜಗಳ ನಿರ್ವಹಣೆ ಇವರ ಜವಾಬ್ದಾರಿ. ಇಲ್ಲಿನ ಸಿಬ್ಬಂದಿಯನ್ನು ಸರಕಾರದ ಸೇವಾನಿಯಮಗಳಂತೆ ಶಿಸ್ತಿಗೆ ಒಳಪಡಿಸುವುದು, ದಂಡಿಸುವುದು, ವರ್ಗಾಯಿಸುವುದು, ಇವೆಲ್ಲ ಇವರ ಹೊಣೆಗಾರಿಕೆ. ಕಂದಾಯ ವಸೂಲಿಯಲ್ಲಿ ಕೃಷಿಭೂಮಿ, ಕೃಷಿಗೆ ಹೊರತಾದ ಭೂಮಿ ಹಾಗೂ ಇತರ ಆದಾಯಗಳ ಉಸ್ತುವಾರಿ ನೋಡುವುದು, ಮಳೆ, ಬೆಳೆ ಹಾಗೂ ಈ ವಸೂಲಾತಿಯ ವಿಚಾರಗಳಲ್ಲಿ ಸರಕಾರಕ್ಕೆ ಕಾಲಕಾಲಕ್ಕೆ ವರದಿ ನೀಡುವುದು ಹಾಗೂ ಕಂದಾಯ ವಸೂಲಿ ಬಗೆಗೆ ಅಧೀನ ಅಧಿಕಾರಿಗಳ ನಿರ್ಣಯದ ವಿರುದ್ಧ ಮೇಲ್ಮನವಿಗಳನ್ನು ಆಲಿಸುವುದು ಇವರ ಕರ್ತವ್ಯಗಳಲ್ಲಿ ಸೇರಿದೆ. ಭೂಕಂದಾಯ ಅಧಿನಿಯಮ ಮತ್ತು ನಿಯಮಗಳಂತೆ ಅವರಿಗೆ ವ್ಯಾಪಕ ಅಧಿಕಾರಗಳಿವೆ. ಭೂ ಕಂದಾಯದ ಜೊತೆಗೇ ಬೇರೆ ಬೇರೆ ಅಧಿನಿಯಮ (ಕಾನೂನು) ಗಳಂತೆ ವಸೂಲಾಗಬೇಕಾದ ಫೀಜುಗಳು, ಛಾಪಾಕಾಗದ ಮತ್ತು ನೋಂದಣಿ ದರಗಳು, ನೀರಾವರಿ ಶುಲ್ಕ ಇಂಥವುಗಳ ವಸೂಲಾತಿಯೂ ಅವರ ಸುಪರ್ದಿಗೆ ಬರುತ್ತದೆ. ಭೂ ಸುಧಾರಣಾ ಅಧಿನಿಯಮ, ಭೂಸ್ವಾಧೀನ ಅಧಿನಿಯಮ, ಧಾರ್ಮಿಕ ಮತ್ತು ದತ್ತಿಗಳ ಅಧಿನಿಯಮ, ನೀರಾವರಿ ಅಧಿನಿಯಮಗಳು, ಸಾರ್ವಜನಿಕ ಆರೋಗ್ಯ ಅಧಿನಿಯಮ ಅಬಕಾರಿ ಅಧಿನಿಯಮ, ಅಗತ್ಯ ವಸ್ತುಗಳ ಅಧಿನಿಯಮ ಹಾಗೂ ಇವುಗಳಿಗೆ ಸಂಬಂಧಿಸಿದ ಇತರ ನಿಯಮಗಳಂತೆ ಅವರು ಅಧಿಕಾರ ಚಲಾಯಿಸಬಲ್ಲರು. ವೃದ್ಧರಿಗೆ ನೀಡುವ ಪಿಂಚಣಿ ನಿಯಮ, ಸ್ವಾತಂತ್ರ್ಯಯೋಧರ ಕಲ್ಯಾಣ ನಿಯಮಗಳು, ಸರಕಾರೀ ನೌಕರರ ಕಲ್ಯಾಣ ನಿಯಮಗಳು, ಇವುಗಳ ಕಾರ್ಯಾಚರಣೆಗೂ ಅವರಿಗೆ ಅಧಿಕಾರವಿದೆ. ಅವರು ಎಲ್ಲ ಮುಜರಾಯಿ ಸಂಸ್ಥೆಗಳ ಪಾಲಕರು, ನ್ಯಾಯಾಂಗ ಮತ್ತು ಪೋಲೀಸ್ ಇಲಾಖೆಗಳನ್ನು ಹೊರತು ಪಡಿಸಿ ಜಿಲ್ಲೆಯ ಇನ್ನೆಲ್ಲ ಸರಕಾರೀ ಕಚೇರಿಗಳನ್ನು ತನಿಖೆ ಮಾಡುವ ಅಧಿಕಾರವೂ ಅವರಿಗೆ ಇತ್ತೀಚೆಗೆ ದತ್ತವಾಗಿದೆ.

ಕಂದಾಯ ಇಲಾಖೆಗೆ ಸಂಬಂಧಿಸಿದ ಅಧಿಕಾರಗಳ ಜೊತೆಗೇ ಜಿಲ್ಲಾಧಿಕಾರಿಯಾಗಿ ಕೆಳಕಂಡ ಪದನಿಮಿತ್ತ ('ಎಕ್ಸ್ ಅಫಿಷಿಯೋ') ಅಧಿಕಾರಗಳು ಅವರಿಗೆ ಇವೆ. ಉಪನೋಂದಣಿ (ಸಬ್ ರಿಜಿಸ್ಟ್ರಾರ್) ಅಧಿಕಾರಿಗಳ ಮೇಲೆ ಉಸ್ತುವಾರಿ ನಡೆಸುವ, ಜಿಲ್ಲಾ ರಾಷ್ಟ್ರೀಯ ಉಳಿತಾಯ ಯೋಜನಾ ಸಲಹಾ ಸಮಿತಿಯ ಸಹ-ಅಧ್ಯಕ್ಷರಾಗಿ, ಸ್ಥಳೀಯ ಸಾರಿಗೆ ಪ್ರಾಧಿಕಾರದ ಅಧ್ಯಕ್ಷರಾಗಿ, ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ಅಧ್ಯಕ್ಷರಾಗಿ ಜಿಲ್ಲಾ ಸಂಪೂರ್ಣ ಸಾಕ್ಷರತಾ ಆಂದೋಲನದ ಶಿಕ್ಷಣ ಸಮಿತಿಯ ಸಹ ಅಧ್ಯಕ್ಷರಾಗಿ ಅವರು ಅಧಿಕಾರ ಚಲಾಯಿಸುತ್ತಾರೆ. ವಿದೇಶಿಯರ ಅಧಿನಿಯಮದಂತೆ ವೀಸಾ ಮತ್ತು ಪಾಸ್‌ಪೋರ್ಟ್ ನೀಡುವ ಬಗ್ಗೆ ಕಾಲಕಾಲಕ್ಕೆ ನೀಡಿದ ಸೂಚನೆಗಳನ್ನು ಪಾಲಿಸುವುದು ಇವರ ಕರ್ತವ್ಯಗಳಲ್ಲಿ ಒಂದು.

ಜಿಲ್ಲಾಧಿಕಾರಿಯು ಜಿಲ್ಲಾ ದಂಡಾಧಿಕಾರಿಯಾಗಿದ್ದರೂ ನ್ಯಾಯಾಂಗ ಮತ್ತು ಕಾರ್ಯಾಂಗದ ವಿಂಗಡಣೆಯ ನಂತರ ಜಿಲ್ಲಾಧಿಕಾರಿಯು ತಾನೇ ವಿಚಾರಣೆ ನಡೆಸಿ ನ್ಯಾಯ ವಿತರಣೆ ಮಾಡುವುದಿಲ್ಲ. ಜಿಲ್ಲೆಯಲ್ಲಿ ಶಾಂತಿ ಮತ್ತು ಕಾನೂನು ವ್ಯವಸ್ಥೆಗಳ ಪಾಲನೆಯಲ್ಲಿ ಜಿಲ್ಲಾಧಿಕಾರಿಗೆ ಪೋಲೀಸ್ ಅಧಿನಿಯಮ ಮತ್ತು ದಂಡ ಪ್ರಕ್ರಿಯಾ ಸಂಹಿತೆ (ಕೋಡ್ ಆಫ್ ಕ್ರಿಮಿನಲ್ ಪ್ರೊಸಿಜರ್) ಯಂತೆ ಜಿಲ್ಲೆಯ ಎಲ್ಲ ದಂಡಾಧಿಕಾರಿಗಳ ಮುಖ್ಯಸ್ಥರಾಗಿ ಅಧಿಕಾರಗಳಿವೆ. ಸಾರ್ವಜನಿಕ ಶಾಂತಿ ಪಾಲನೆಯ ಸಂದರ್ಭದಲ್ಲಿ ಅವರು ಜಿಲ್ಲೆಯ ಪೋಲೀಸ್ ದಳದ ಮೇಲೆ ಹತೋಟಿ ಹೊಂದಬಹುದು. ಜಿಲ್ಲೆಯಲ್ಲಿರುವ ಬಂಧಿಖಾನೆ ಮತ್ತು ಸೆರೆಮನೆಗಳ ಮೇಲೆ ಅವರಿಗೆ ಮೇಲುಸ್ತುವಾರಿ ಅಧಿಕಾರವಿದೆ. ಸಾರ್ವಜನಿಕ ಶಾಂತಿಯ ಹಿತದೃಷ್ಟಿಯಿಂದ ಯಾವುದೇ ವ್ಯಕ್ತಿಯನ್ನು ಪ್ರತಿಬಂಧಕ ಸ್ಥಾನಬದ್ಧತೆ ಅಥವಾ ದಿಗ್ಬಂಧನದಲ್ಲಿ ಇಡಲು ಅವರು ಅಧಿಕಾರ ಹೊಂದಿದ್ದಾರೆ. ಭಾರತೀಯ ಶಸ್ತ್ರಗಳ ಅಧಿನಿಯಮ ಹಾಗೂ ಭಾರತೀಯ ಸ್ಫೋಟಕ ವಸ್ತುಗಳ ಅಧಿನಿಯಮದಂತೆ ಯಾವುದೇ ವ್ಯಕ್ತಿಗೆ ಲೈಸನ್ಸ್ ನೀಡುವ ಮತ್ತು ಈ ಅಧಿನಿಯಮಗಳ ಕಾರ್ಯಾಚರಣೆಯ ವೀಕ್ಷಣೆ ಮಾಡುವ ಅಧಿಕಾರ ಅವರದು. ಚಲನಚಿತ್ರ ಪ್ರದರ್ಶನಗಳ ಅಧಿನಿಯಮದಂತೆ ಲೈಸನ್ಸ್ ನೀಡುವುದು, ಇಂಥ ಪ್ರದರ್ಶನಕಾರರು ನಿಯಮಗಳನ್ನು ಪಾಲಿಸುವರೇ ಎಂದು ತನಿಖೆ ನಡೆಸುವುದು, ಅಸ್ಪೃಶ್ಯತಾ ನಿವಾರಣಾ ಅಧಿನಿಯಮದಂತೆ ಇರುವ ಅಧಿಕಾರ

ಗಳನ್ನು ಚಲಾಯಿಸುವುದು, ಇವೆಲ್ಲವೂ ಜಿಲ್ಲಾಧಿಕಾರಿಯ ಕರ್ತವ್ಯಗಳು.

ಜಿಲ್ಲಾಧಿಕಾರಿಯ ಕಚೇರಿಯಲ್ಲಿ ಅವರಿಗೆ ಎಲ್ಲ ವಿಧದಲ್ಲಿ ನೆರವಾಗಲು ಒಬ್ಬ ಕೇಂದ್ರ ಸ್ಥಾನಿಕ ಸಹಾಯಕ(ಎಚ್.ಕ್ಯೂ.ಎ.) ರಿದ್ದು 'ಎ' ವೃಂದದ ಅಧಿಕಾರಿಯಾಗಿರುವ ಇವರು ಜಿಲ್ಲಾ ಹೆಚ್ಚುವರಿ ದಂಡಾಧಿಕಾರಿಯೂ ಆಗಿದ್ದಾರೆ. ಇವರು ಜಿಲ್ಲಾಧಿಕಾರಿಯ ಎಲ್ಲ ಕೆಲಸಗಳಿಗೆ ಸಂಬಂಧಿಸಿ–ಕಂದಾಯ, ನ್ಯಾಯಾಡಳಿತ, ಶಾಂತಿಪಾಲನೆ ಇತ್ಯಾದಿ– ಅವರಿಗೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಾರೆ. ಇವರು ಬಾಡಿಗೆ ನಿಯಂತ್ರಣ ಅಧಿಕಾರಿಗಳೂ ಹೌದು. 'ಎ' ವೃಂದದ ಅಧಿಕಾರಿಯಾಗಿರುವ ಒಬ್ಬ ಉಪ ನಿರ್ದೇಶಕರು ಆಹಾರ ವಸ್ತುಗಳ ಎತ್ತುವಳಿ ಮತ್ತು ವಿತರಣೆಗೆ ನೆರವಾಗಲು (ಆಹಾರ ಮತ್ತು ನಾಗರಿಕ ಸರಬರಾಜು ಸಹಾಯಕರಾಗಿ) ಇರುತ್ತಾರೆ.

ಇತರ ಜಿಲ್ಲೆಗಳಲ್ಲಿ ಒಬ್ಬ ವಿಶೇಷ ಜಿಲ್ಲಾಧಿಕಾರಿ ಇರುವಂತೆ ಕೊಡಗಿನಲ್ಲಿ ವಿಶೇಷ ಜಿಲ್ಲಾಧಿಕಾರಿ ಹುದ್ದೆ ಇರುವುದಿಲ್ಲ. ಅದರಂತೆ ಜಿಲ್ಲಾಧಿಕಾರಿಗಳ ಕಚೇರಿ ಸಹಾಯಕರ ಹುದ್ದೆ, ಜಿಲ್ಲಾಧಿಕಾರಿಗಳ ಆಹಾರ ಶಾಖೆಯಲ್ಲಿ ಆಹಾರ ತಹಶೀಲ್ದಾರರ ಹುದ್ದೆ ಇರುವುದಿಲ್ಲ. ವಿಶೇಷ ಜಿಲ್ಲಾಧಿಕಾರಿಯು ಮಾಡುವ ಕಾರ್ಯನಿರ್ವಾಹಿಗಳಾದ ಭೂ ಸ್ವಾಧೀನ, ಕಂಪನಿಗಳ ನೋಂದಣಿ, ಭೂ ಹಿಡುವಳಿಗಳ ಗಣತಿ, ಸೇವಾ ಸಂಸ್ಥೆಗಳ ನೋಂದಣಿ, ಭೂ ಅಭಿವೃದ್ಧಿ ಕಾನೂನು (1963), ಕೃಷಿ ಸಾಲದ ಕಾನೂನು (1963), ಕೃಷಿಯೇತರ ಸಾಲಗಳ ಕಾನೂನು (1958), ಇವುಗಳ ಕಾರ್ಯಾಚರಣೆ ಇವೆಲ್ಲವನ್ನೂ ಜಿಲ್ಲಾಧಿಕಾರಿಗಳ ಕಚೇರಿಯೇ ನಿರ್ವಹಿಸುತ್ತದೆ. ಭೂ ಸುಧಾರಣೆ, ಬಾಡಿಗೆ ನಿಯಂತ್ರಣ, ಅರಣ್ಯಗಳ ಹತೋಟಿ, ಹಾಗೂ ನೀರಾವರಿಗಳಿಗೆ ಸಂಬಂಧಿಸಿದ ಆಡಳಿತಾತ್ಮಕ ಕ್ರಮ ಇವುಗಳನ್ನು ಇದೇ ಕಚೇರಿ ನೋಡಿಕೊಳ್ಳುತ್ತದೆ.

1987 ರಿಂದ ಜಿಲ್ಲಾ ಪರಿಷತ್ತು ಕಾಯ್ದೆ ಅಸ್ತಿತ್ವಕ್ಕೆ ಬಂದ ಬಳಿಕ ಹಿಂದೆ ಜಿಲ್ಲಾಧಿಕಾರಿಗಳ ವ್ಯಾಪ್ತಿಯಲ್ಲಿದ್ದ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಕಲ್ಯಾಣ ವಿಭಾಗ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ವಿಭಾಗ, ಯೋಜನಾ ವಿಭಾಗ, ಸಮಾಜ ಕಲ್ಯಾಣ ವಿಭಾಗ, ಕೃಷಿ ಇಲಾಖೆ ಮತ್ತಿತರ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದ ಇಲಾಖೆ ಮತ್ತು ಕಚೇರಿಗಳು ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬಂದಿವೆ. ಆದರೂ ಈ ಇಲಾಖೆಗಳ ಕೆಲವು ಕಾಯಕಗಳಲ್ಲಿ ಕಂದಾಯ ಇಲಾಖೆಯ ಪ್ರತ್ಯಕ್ಷ ಹಾಗೂ ಪರೋಕ್ಷ ಸಹಭಾಗಿತ್ವ ಜಿಲ್ಲಾಧಿಕಾರಿಗಳ ಮೂಲಕ ಇದ್ದೇ ಇರುತ್ತದೆ.

## ಉಪ ಆಯುಕ್ತರು

ರಾಜ್ಯದ ಕಂದಾಯ ಉಪ ವಿಭಾಗ (ಸಬ್-ಡಿವಿಜನ್) ಗಳಲ್ಲೆಲ್ಲ ಒಬ್ಬ ಉಪ ಆಯುಕ್ತರು ಅಸಿಸ್ಟಂಟ್ ಕಮಿಷನರ್ ಇರುವಂತೆ ಕೊಡಗಿನಲ್ಲೂ ಇಡೀ ಕೊಡಗಿಗೆ (ಮೂರು ತಾಲೂಕುಗಳಿಗೆ) ಒಬ್ಬ ಉಪ ಆಯುಕ್ತರು ಇದ್ದಾರೆ. ಈ ಅಧಿಕಾರಿಯ ಕಚೇರಿ ಮಡಿಕೇರಿಯಲ್ಲಿ ಇದ್ದು ಜಿಲ್ಲಾಧಿಕಾರಿಗಳ ಅಧೀನರಾಗಿಯೂ ತಹಶೀಲ್ದಾರರಿಗೆ ಮೇಲ್ಪಟ್ಟವರಾಗಿಯೂ ಇರುವ ಇವರು ಪುರಸಭೆ (ಮುನಿಸಿಫಲ್ ಕೌನ್ಸಿಲ್) ಗಳಿಗೆಲ್ಲ ಮುಖ್ಯಾಧಿಕಾರಿಯೂ ಆಗಿದ್ದಾರೆ. ಇವರು ತಮ್ಮ ಕಚೇರಿಯ ಆಡಳಿತದ ಉಸ್ತುವಾರಿ ನೋಡಿಕೊಳ್ಳುವುದರ ಜೊತೆಗೆ ಜಿಲ್ಲೆಯಲ್ಲಿನ ಕಂದಾಯ ಸಂಗ್ರಹಣೆ ಮತ್ತು ಅಭಿವೃದ್ಧಿ ಕಾರ್ಯಗಳ ಉಸ್ತುವಾರಿ ನೋಡಿಕೊಳ್ಳಬೇಕು. ಕರ್ನಾಟಕ ಭೂಕಂದಾಯ ಅಧಿನಿಯಮ (1864) ದಂತೆ ಜಿಲ್ಲಾಧಿಕಾರಿಯು ಚಲಾಯಿಸುವ ಅಧಿಕಾರಗಳಲ್ಲಿ ಅನೇಕ ಪ್ರಕರಣಗಳಿಗೆ (ಸೆಕ್ಷನ್ಸ್) ಸಂಬಂಧಿಸಿದಂಥ ಅಧಿಕಾರಗಳನ್ನು ಉಪ ಆಯುಕ್ತರೇ, ಚಲಾಯಿಸಬಹುದು. ಕಂದಾಯ ನಿರ್ಣಯಕ್ಕೆ ಸಂಬಂಧಿಸಿದ ತಕರಾರುಗಳಲ್ಲಿ ಅವರೇ ಮೊದಲ ಮೇಲ್ಮನವಿ ಅಧಿಕಾರಿಯಾಗಿದ್ದು ಕರ್ನಾಟಕ ಭೂ ಕಂದಾಯ ಅಧಿನಿಯಮ (1964)ದ 56ನೇಯ ಪ್ರಕರಣದಂತೆ ಪರಿಷ್ಕರಣದ ಅಧಿಕಾರವುಳ್ಳ ಮೊದಲ ಅಧಿಕಾರಿಯೂ ಅವರೇ. ಭೂಸ್ವಾಧೀನ ಅಧಿಕಾರಿ ಹಾಗೂ ಅಭಿವೃದ್ಧಿ ತೆರಿಗೆ (ಬೆಟರ್ಮೆಂಟ್ ಟ್ಯಾಕ್ಸ್) ವಿಧಿಸುವ ಅಧಿಕಾರಿಯೂ ಅವರೇ ಆಗಿದ್ದಾರೆ. ಕರ್ನಾಟಕ ಭೂ ಸುಧಾರಣಾ ಕಾನೂನಿನಂತೆ (1961) ಅಸ್ತಿತ್ವಕ್ಕೆ ಬಂದ ಭೂ ನ್ಯಾಯಾಲಯ (ಲ್ಯಾಂಡ್ ಟ್ರಿಬ್ಯುನಲ್)ಗೆ ಉಪ ಆಯುಕ್ತರೇ ಅಧ್ಯಕ್ಷರು. ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬರುವ (1987) ಮೊದಲು ಸಮುದಾಯ ಅಭಿವೃದ್ಧಿ ಅಧಿಕಾರಿಯ ಮೇಲುಸ್ತುವಾರಿ ನೋಡುವವರೂ ಇದೇ ಅಧಿಕಾರಿಯಾಗಿದ್ದರು. ತಮ್ಮ ಉಪ ವಿಭಾಗದಲ್ಲಿ ನಡೆಯುವ ವಿಧಾನಸಭೆ ಚುನಾವಣೆಗಳಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಿಗೆ ಅವರು ಚುನಾವಣಾ (ರಿಟರ್ನಿಂಗ್) ಅಧಿಕಾರಿ ಆಗಿರುತ್ತಾರೆ.

ಉಪ ಆಯುಕ್ತರ ದಂಡಾಧಿಕಾರಿಯಾಗಿ ಕೂಡ (ಮೆಜಿಸ್ಟೀರಿಯಲ್) ಕೆಲವು ಅಧಿಕಾರಗಳನ್ನು ಹೊಂದಿದ್ದಾರೆ. ಅವರು ಉಪ ವಿಭಾಗದ ದಂಡಾಧಿಕಾರಿ. ಅವರು ಕಾನೂನು

ಪ್ರಕರಣವನ್ನು ತಾವಾಗಿ ತನಿಖೆ ಮಾಡಬಹುದು, ಮತ್ತು ಇಂಥ ತನಿಖಾ ಕಾರ್ಯಕ್ಕೆ ಜಿಲ್ಲಾಧಿಕಾರಿ, ಇಲ್ಲವೇ ವಿಭಾಗಾಧಿಕಾರಿ ಇವರನ್ನು ನೇಮಿಸಬಹುದು. ತಾಲೂಕು ಮಟ್ಟದ ಹಲವು ಸಮಿತಿಗಳಿಗೆ ಅವರೇ ಅಧ್ಯಕ್ಷರು. ಜಿಲ್ಲಾ ಮಟ್ಟದ ಹಲವು ಸರಕಾರೀ ಸಮಿತಿಗಳಿಗೆ ಅವರೇ ಸದಸ್ಯರು. ಉಪ ಆಯುಕ್ತರಿಗೆ ಕಚೇರಿಯ ಉಸ್ತುವಾರಿ ನೋಡಿಕೊಳ್ಳಲು ಒಬ್ಬ ಶಿರಸ್ತೇದಾರ (ಮ್ಯಾನೇಜರ್) ಹಾಗೂ ನಾಲ್ವರು ಸಹಾಯಕರು ಮತ್ತು ಇತರ ಸಿಬ್ಬಂದಿ ಇರುತ್ತಾರೆ.

### ತಹಶಿಲ್ದಾರ

ತಾಲೂಕು ಮಟ್ಟದಲ್ಲಿ ಹಿಂದೆ ಸುಬೇದಾರ ಅಥವಾ ಅಮಲ್ದಾರ ಎಂದಿದ್ದ ಹುದ್ದೆಯು ತಹಶಿಲ್ದಾರ ಎಂಬ ಪದ ನಾಮವನ್ನು ಪಡೆದಿದ್ದು ಪ್ರತೀಯೊಂದು ತಾಲೂಕಿಗೂ ಒಬ್ಬ ತಹಶಿಲ್ದಾರರು ಇರುತ್ತಾರೆ. ಅವರು ಜಿಲ್ಲಾಧಿಕಾರಿ ಹಾಗೂ ಉಪ ಆಯುಕ್ತರ ಅಧೀನರು. ತಾಲೂಕಿನಲ್ಲಿ ಸರಕಾರದ ಪ್ರತಿನಿಧಿಯಾಗಿರುವ ಇವರು ತಾಲೂಕಿನ ಕಂದಾಯ ಸಂಗ್ರಹಣೆಯ ಉಸ್ತುವಾರಿ ನಡೆಸುವರು. ಕಂದಾಯ ಸಂಬಂಧಿ ಪರಿವರ್ತನೆ (ಮ್ಯುಟೇಶನ್), ಹಾಗೂ ತಕರಾರಿನ ಪ್ರಕರಣಗಳ ಮನವಿಯ ಬಗ್ಗೆ ವಿಚಾರಣೆ ನಡೆಸಿ ತೀರ್ಮಾನ ಮಾಡುವುದು, ಹಕ್ಕುಪತ್ರ (ಪಟ್ಟಾ)ಗಳ ತನಿಖೆ, ಹಾಗೂ ಗ್ರಾಮಗಳಲ್ಲಿನ ಬೆಳೆಯ ಪರಿಸ್ಥಿತಿಯನ್ನು ಪರಿಶೀಲಿಸುವುದು ಈ ಎಲ್ಲ ಕರ್ತವ್ಯಗಳನ್ನು ಇವರು ನಿರ್ವಹಿಸಬೇಕಾಗುತ್ತದೆ. ಗ್ರಾಮ ಲೆಕ್ಕಿಗರು ಹಾಗೂ ಹೋಬಳಿ ಮಟ್ಟದ ಕಂದಾಯ ವೀಕ್ಷಕರು ಇವರಿಗೆ ಅಧೀನರಾಗಿದ್ದು ಕಾರ್ಯನಿರ್ವಹಿಸುತ್ತಾರೆ. ಸರಕಾರಿ ಭೂಮಿಗಳ ಮೇಲೆ ಆಗುವ ಒತ್ತುವರಿಗಳನ್ನು ಪರಿಹರಿಸಲು ಅವರು ವಿಶೇಷ ಗಮನ ನೀಡಬೇಕು. ಭೂಸುಧಾರಣಾ ಕಾನೂನಿನ ಭಂಗವಾದ ಪ್ರಸಂಗಗಳಲ್ಲಿ ಕ್ರಮ ಕೈಗೊಳ್ಳುವುದು ಕೃಷಿಯ ಭೂಮಿಯ ಅಭಿವೃದ್ಧಿಗಾಗಿ ನೀಡುವ ಸಾಲದ ಬಳಕೆಯ ಹಾಗೂ ಮಂಜೂರಾತಿಯ ಪ್ರಕರಣಗಳ ಬಗ್ಗೆ ತನಿಖೆ ನಡೆಸುವುದು, ಭೂಕಂದಾಯದ ಜೊತೆ ತಗಾಯಿ, ನೀರಾವರಿ ಶುಲ್ಕ, ಪೋಟ್‌ಹಿಸ್ಸಾ ಅಳತೆಯ ವೆಚ್ಚ ಮುಂತಾದ ಸರಕಾರಕ್ಕೆ ಬರಬೇಕಾದ ಆದಾಯದ ಅಂಶಗಳನ್ನು ವಸೂಲಿ ಮಾಡುವುದು ಇವೆಲ್ಲ ತಹಶೀಲ್ದಾರರ ಜವಾಬ್ದಾರಿಗಳು. ಭೂಕಂದಾಯ ಅಧಿನಿಯಮ, ಭೂಸುಧಾರಣಾ ಅಧಿನಿಯಮ ಹಾಗೂ ತಾಲೂಕಿನ ಆಡಳಿತಕ್ಕೆ ಸಂಬಂಧಿಸಿದ ಇತರ ಕಾನೂನುಗಳನ್ನು ತಹಶಿಲ್ದಾರರೇ ಕಾರ್ಯಗತಗೊಳಿಸಬೇಕು. ಅವರು ತಾಲೂಕಿನ ಮುಖ್ಯಸ್ಥರಾಗಿದ್ದು ಆಹಾರ ಧಾನ್ಯ ಎತ್ತುವಳಿ (ಲೆವಿ), ನ್ಯಾಯಬೆಲೆ ಅಂಗಡಿಗಳ ಮೂಲಕ ಆಹಾರ ಬಳಕೆ ವಸ್ತುಗಳ ಸೂಕ್ತ ವಿತರಣೆ ಇವುಗಳ ಜೊತೆಗೆ ಬತ್ತದ ಗಿರಣಿಗಳ ಮಾಲಿಕರ ಹಾಗೂ ಸಹಕಾರೀ ಮಾರಾಟ ಸಂಘಗಳ ಬಳಿ ಇರುವ ದಾಸ್ತಾನಿನ ತನಿಖೆ ನಡೆಸುವ ಹೊಣೆಗಾರಿಕೆಯೂ ಇವರದು. ಅವಶ್ಯಕ ವಸ್ತುಗಳ ಅಧಿನಿಯಮ ಮತ್ತು ಅದರ ಅಡಿಯ ಇತರ ನಿಯಮಗಳಂತೆ ಅವರಿಗೆ ಅನೇಕ ಅಧಿಕಾರಗಳು ಪ್ರಾಪ್ತವಾಗಿವೆ. ವೃದ್ಧರಿಗೆ ಮಾಸಾಶನ ಮಂಜೂರು ಮಾಡುವ ಅಧಿಕಾರಿಯೂ ತಹಶಿಲ್ದಾರರೇ. ತಮ್ಮ ಆಡಳಿತಕ್ಕೆ ಒಳಪಟ್ಟ ಪ್ರದೇಶದಲ್ಲಿ ಕಾನೂನು ಸುವ್ಯವಸ್ಥೆಗಳನ್ನು ಕಾಪಾಡಲು ಕೆಲವೊಂದು ದಂಡಾಧಿಕಾರ (ಮೆಜಿಸ್ಟೀರಿಯಲ್) ಸಂಬಂಧಿ ಜವಾಬ್ದಾರಿಗಳೂ ಅವರಿಗಿವೆ. ಚುನಾವಣಾ ಉಪ ಅಧಿಕಾರಿಯಾಗಿ ಅವರು ಮತದಾರರ ಪಟ್ಟಿಯನ್ನು ತಯಾರಿಸಬೇಕಲ್ಲದೆ ಚುನಾವಣಾ ಉಪ-ಅಧಿಕಾರಿಯಾಗಿ ಚುನಾವಣಾ ಯಂತ್ರದ ಉಸ್ತುವಾರಿ ನೋಡಿಕೊಳ್ಳಬೇಕು. ತಹಶಿಲ್ದಾರರಿಗೆ ನೆರವಾಗಲು ಅವರ ಕಚೇರಿಯಲ್ಲಿ ಶಿರಸ್ತೆದಾರ (ಉಪ-ತಹಶಿಲ್ದಾರ)ರೂ ಇತರ ಸಿಬ್ಬಂದಿಯೂ ಇರುವಲ್ಲದೆ, ಕಂದಾಯ ನಿರೀಕ್ಷಕರು, ವಿಶೇಷ ಕಂದಾಯ ನಿರೀಕ್ಷಕರು, ಕಾಗದಪತ್ರಗಳ ನಿರ್ವಾಹಕರು (ರಿಕಾರ್ಡ್ ಕೀಪರ್ಸ್) ಮತ್ತು ಇತರ ನೌಕರರು ಇರುತ್ತಾರೆ.

ಪ್ರತೀ ತಾಲೂಕೂ ಒಂದು ಸಮುದಾಯ ಅಭಿವೃದ್ಧಿ ಘಟಕ (ಬ್ಲಾಕ್) ವಾಗಿದ್ದು ಅದಕ್ಕೆ ಒಬ್ಬ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ (ಬಿ.ಡಿ.ಓ. ; ಸಮುದಾಯ ಅಭಿವೃದ್ಧಿ ಅಧಿಕಾರಿ) ಇರುತ್ತಾರೆ. ತಾಲೂಕಿನ ಸಕಲ ಅಭಿವೃದ್ಧಿ ಚಟುವಟಿಕೆಗಳು ಇವರ ಉಸ್ತುವಾರಿಯಲ್ಲಿ ನಡೆಯುತ್ತವೆ. ಹಿಂದೆ ಇದ್ದ ತಾಲೂಕು ಅಭಿವೃದ್ಧಿ ಮಂಡಳಿಗೆ ಈ ಅಧಿಕಾರಿಯೇ ಕಾರ್ಯನಿರ್ವಾಹಕರಾಗಿದ್ದರು. ಈಗ ಜಿಲ್ಲಾ ಅಭಿವೃದ್ಧಿ ಮಂಡಳಿಗೆ ಅಧೀನರಾಗಿ ಕಾರ್ಯ ನಿರ್ವಹಿಸುವ ಇವರು ತಾಲೂಕು ಪಂಚಾಯತಿ ಸಮಿತಿಯ ಕಾರ್ಯದರ್ಶಿಯಾಗಿ ಇರುತ್ತಾರೆ. ಇವರಿಗೆ ನೆರವಾಗಲು ಒಬ್ಬ ಕಚೇರಿ ನಿರ್ವಾಹಕರೂ (ಮ್ಯಾನೇಜರ್) ಇತರ ಸಿಬ್ಬಂದಿಯೂ ಇರುತ್ತಾರೆ.

### ಕಂದಾಯ ನಿರೀಕ್ಷಕ

ತಹಶಿಲ್ದಾರರಿಗೆ ಕಂದಾಯ ವಸೂಲಿ ವಿಚಾರಗಳಲ್ಲಿ ನೆರವಾಗಲು ಪ್ರತೀ ಹೋಬಳಿಗೆ ಒಂದರಂತೆ ಕಂದಾಯ ನಿರೀಕ್ಷಕರು (ರೆವಿನ್ಯೂ ಇನ್ಸ್‌ಪೆಕ್ಟರ್) ಇರುತ್ತಾರೆ. ಜಿಲ್ಲೆಯಲ್ಲಿ ಇವರ ಸಂಖ್ಯೆ 16. ಹಿಂದೆ ಇವರಿಗೆ ಶೇಕ್‌ದಾರ್ ಅಥವಾ ಪಾರುಪತ್ಯಗಾರ ಎನ್ನುತ್ತಿದ್ದರು. ಜಿಲ್ಲೆಯ ಪ್ರತೀ ತಾಲೂಕಿನಲ್ಲಿ ಎರಡರಂತೆ ಆರು ಕಡೆ ಹೊಸದಾಗಿ ತೆರೆದ ನಾಡ ಕಚೇರಿಗಳಿದ್ದು ಅಲ್ಲಿ ಕಂದಾಯ ವೀಕ್ಷಕರ ಬದಲಿಗೆ ಶಿರಸ್ತೇ

ದಾರ ಅಥವಾ ಉಪ ತಹಶೀಲ್ದಾರರೆಂಬ ಅಧಿಕಾರಿಗಳಿದ್ದು ತಾಲೂಕು ಮಟ್ಟದಲ್ಲಿ ನಡೆಯುವ ಅನೇಕ ಕೆಲಸ ಕಾರ್ಯಗಳನ್ನು ಅವರು ಹೋಬಳಿ ಮಟ್ಟದಲ್ಲಿ ನಿರ್ವಹಿಸುತ್ತಾರೆ. ಭಾಗಮಂಡಲ, ನಾಪೋಕ್ಲು, ಪೊನ್ನಂಪೇಟೆ, ಶ್ರೀಮಂಗಲ, ಕುಶಾಲನಗರ ಮತ್ತು ಶನಿವಾರ ಸಂತೆಗಳಲ್ಲಿ ನಾಡು ಕಚೇರಿಗಳಿವೆ.

ಶಿರಸ್ತೆದಾರ ಅಥವಾ ಕಂದಾಯ ನಿರೀಕ್ಷಕರು ತಮ್ಮ ಹೋಬಳಿಯ ಕಂದಾಯ ಆಡಳಿತಕ್ಕೆ ತಹಶೀಲ್ದಾರರಿಗೆ ಜವಾಬ್ದಾರರಾಗಿದ್ದು ಗ್ರಾಮಲೆಕ್ಕಿಗ ಮತ್ತು ತಹಶೀಲ್ದಾರರ ನಡುವಿನ ಕೊಂಡಿಯಂತೆ ಅವರು ಕೆಲಸ ಮಾಡುತ್ತಾರೆ. ಕರ್ನಾಟಕ ಭೂಕಂದಾಯ ಅಧಿನಿಯಮ (1964) ಮತ್ತು ಕರ್ನಾಟಕ ಭೂ ಸುಧಾರಣಾ ಅಧಿನಿಯಮ (1961) ಗಳ ಕಾರ್ಯಾಚರಣೆಗೆ ಸಂಬಂಧಿಸಿದ ಎಲ್ಲ ಕ್ರಮಗಳನ್ನು ಕೈಕೊಳ್ಳುವುದು ಇವರ ಹೊಣೆ. ಕಂದಾಯ ಸಂಬಂಧಿ ಮುಖ್ಯ ಅಧಿಕಾರಿಯಾಗಿರುವ ಇವರು ಕಂದಾಯ ವಸೂಲಿ, ಅಭಿವೃದ್ಧಿ ಶುಲ್ಕ (ಬೆಟರ್‌ಮೆಂಟ್ ಲೆವಿ), ನೀರಾವರಿ ತೆರಿಗೆ ಹಾಗೂ ಇತರ ಭೂಸಂಬಂಧಿ ಸರಕಾರದ ವರಮಾನಗಳ ವಸೂಲಿ, ಸರಕಾರ ನೀಡಿದ ತಗಾಯಿ ಹಾಗೂ ಇತರ ಅಭಿವೃದ್ಧಿ ಸಾಲಗಳ ವಸೂಲಿ ಇವರ ಜವಾಬ್ದಾರಿ. ಗ್ರಾಮಲೆಕ್ಕಿಗರ ಕಾರ್ಯಗಳನ್ನು ವೀಕ್ಷಣೆ ಮಾಡುವುದರ ಜೊತೆ ಸರ್ಕಾರೀ ಭೂಮಿಗಳ ಗಡಿ ಚಿಹ್ನೆಗಳನ್ನು ಇವರು ತನಿಖೆ ಮಾಡಬೇಕು. ಸರ್ಕಾರ ನೀಡಿದ ಭೂಮಿಗಳ ಬಗೆಗಿನ ದಾಖಲೆ ಪತ್ರಗಳ ಸೃಷ್ಟಿ, ಭೂಸ್ವಾಧೀನ ಕ್ರಮಗಳು ಹಾಗೂ ಇತರ ಕಂದಾಯ ಸಂಬಂಧಿ ವಿಚಾರಗಳಿಗೆ ಇವರು ಜವಾಬ್ದಾರರು. ಇದಲ್ಲದೆ ತಹಶೀಲ್ದಾರರು ಕಾಲಕಾಲಕ್ಕೆ ಇವರಿಗೆ ಆಡಳಿತ ಸಂಬಂಧೀ ಇತರ ಸೂಚನೆಗಳನ್ನು ನೀಡಿದಾಗ ಇವರು ಅವುಗಳನ್ನು ಪರಿಪಾಲಿಸಿ ಕಾರ್ಯಾಚರಣೆಗೆ ತರಲು ಬದ್ಧರಾಗಿದ್ದಾರೆ.

**ನಾಡ ಕಚೇರಿಗಳು**

ನಾಡ ಕಚೇರಿಗಳು ಕೊಡಗಿನಲ್ಲಿ ಹಿಂದೆ ಅರಸರ ಕಾಲದಲ್ಲಿ ಇದ್ದುದನ್ನು ಈ ಅಧ್ಯಾಯದ ಆರಂಭದಲ್ಲಿ ಗಮನಿಸಿದೆ. ಈ ಕಚೇರಿಗೆ ಒಬ್ಬ ಪಾರುಪತ್ಯೆಗಾರನು ಇರುತ್ತಿದ್ದ. 1986ರ ಆಗಸ್ಟ್ 15 ರಿಂದ ಪ್ರತೀ ತಾಲೂಕಿಗೆ ಒಂದರಂತೆ ನಾಡ ಕಚೇರಿಗಳನ್ನು ಆರಂಭಿಸಿ, 1987ರ ಆಗಸ್ಟ್ 15 ರಂದು ಪ್ರತೀ ತಾಲೂಕಿಗೆ ಇನ್ನೊಂದರಂತೆ ನಾಡಕಚೇರಿಗಳನ್ನು ಸ್ಥಾಪಿಸಿದರು. ಕೊಡಗಿನಲ್ಲಿ ಇಂದು ಆರು ಕಚೇರಿಗಳಿರುವುದನ್ನು ಹಿಂದೆ ನೋಡಿದೆ. ಇದರ ಮುಖ್ಯಸ್ಥರು ಒಬ್ಬ ಉಪ ತಹಶೀಲ್ದಾರ ಅಥವಾ ಶಿರಸ್ತೇದಾರರಾಗಿದ್ದು ತಾಲೂಕುಮಟ್ಟದಲ್ಲಿ ಇರುವ ತಹಶೀಲ್ದಾರರ 21 ಕಂದಾಯ ಸಂಬಂಧಿ ಅಧಿಕಾರಗಳಲ್ಲಿ ಒಂಭತ್ತನ್ನು ನಾಡಕಚೇರಿಗೆ ವರ್ಗಾಯಿಸಿದೆ. ಆಡಳಿತದ ವಿಕೇಂದ್ರೀಕರಣವೇ ಇದರ ಉದ್ದೇಶ. ಈ ಕಚೇರಿಯಲ್ಲಿ ಒಬ್ಬ ಕಿರಿಯ ಸಹಾಯಕ, ಒಬ್ಬ ಬೆರಳಚ್ಚುಗಾರ ಮತ್ತು ಒಬ್ಬ 'ಡಿ' ವೃಂದದ ನೌಕರರನ್ನು ಒಳಗೊಂಡ ಮಿತವಾದ ಸಿಬ್ಬಂದಿಯಿದ್ದು ವೃದ್ಧರಿಗೆ ಪಿಂಚಣಿ ಹಾಗೂ ಅಂಗ ವಿಕಲರಿಗೆ ಭತ್ಯೆ ಮಂಜೂರಾತಿ, ಬೆಂಕಿ ಅಥವಾ ಪ್ರವಾಹದಿಂದ ಹಾನಿಗೊಳಗಾದವರಿಗೆ ಪರಿಹಾರ ನೀಡಿಕೆ, ಖಾತೆ ಬದಲಾವಣೆ (ಮ್ಯುಟೇಶನ್) ಪ್ರಕರಣಗಳ ಇತ್ಯರ್ಥ, ಆಹಾರ ಧಾನ್ಯಗಳ ಬಗ್ಗೆ ಝಡ್ತಿ ಮತ್ತು ಜಪ್ತಿ, ಸರಕಾರೀ ವರಮಾನ ವಸೂಲಿ ಮಾಡಿ ಅದನ್ನು ಟ್ರೆಜರಿಗೆ ಜಮಾ ಮಾಡುವುದು, ಡಿ.ಸಿ.ಬಿ. ಲೆಕ್ಕಪತ್ರ ಇಡುವಿಕೆ, ಕರ್ನಾಟಕ ನೀರಾವರಿ ಅಧಿನಿಯಮ 1965 ರಂತೆ ನೀರಾವರಿ ಹಾಗೂ ಭೂ ಅಭಿವೃದ್ಧಿ ತೆರಿಗೆ ವಸೂಲಿ, ದೃಢೀಕೃತ ದಾಖಲೆಗಳನ್ನು ಒದಗಿಸುವುದು, ಇವೆಲ್ಲವೂ ಇವರ ಕರ್ತವ್ಯಗಳು.

**ಗ್ರಾಮಲೆಕ್ಕಿಗ**

ಗ್ರಾಮಲೆಕ್ಕಿಗರು ಜಿಲ್ಲಾ ಸಮಿತಿಯ ನೌಕರರ ವರ್ಗಕ್ಕೆ ಸೇರಿದವರಾಗಿದ್ದು ಅವರು ಜಿಲ್ಲಾಧಿಕಾರಿಗಳಿಂದಲೇ ನೇಮಿಸಲ್ಪಡುತ್ತಾರೆ. ಒಂದು ಗ್ರಾಮ ಇಲ್ಲವೇ ಗ್ರಾಮಗಳ ಗುಂಪಿನ ಮೇಲೆ ತಮ್ಮ ಕಾರ್ಯವ್ಯಾಪ್ತಿಯನ್ನು ಹೊಂದಿದ್ದು ಹಿಂದೆ ಇದ್ದ ಶಾನುಭೋಗರ ಬದಲಿಗೆ ಇವರು ಕಾರ್ಯನಿರ್ವಹಿಸುತ್ತಾರೆ. ಕರ್ನಾಟಕ ಭೂಕಂದಾಯ ಅಧಿನಿಯಮ (1964)ದಲ್ಲಿ ಇವರಿಗೆ ಹೇಳಲಾದ ಎಲ್ಲ ಕರ್ತವ್ಯಗಳನ್ನು ಇವರು ನೆರವೇರಿಸಬೇಕು. ಸರಕಾರವು ಕಂದಾಯ ಸಂಬಂಧವಾಗಿ ತಯಾರಿಸಲು ಕಾಲಕಾಲಕ್ಕೆ ತಿಳಿಸುವ ಎಲ್ಲ ಕಾಗದಪತ್ರ ಮತ್ತು ದಾಖಲಾತಿಗಳನ್ನು ಇವರು ಸಿದ್ಧವಾಗಿಸಬೇಕು. ಗ್ರಾಮದ ಎಲ್ಲಾ ಭೂಸಂಬಂಧಿ ದಾಖಲೆ (ಕೃಷಿ, ಕೃಷಿಯೇತರ, ಸಹಕಾರೀ ಇತ್ಯಾದಿ)ಗಳನ್ನೂ ಭೂಮಿಗಳ ಮಾಲಿಕತ್ವ ಹಾಗೂ ಪ್ರತೀ ಭೂಮಿಯಿಂದ ಬರಬೇಕಾದ ಕಂದಾಯವನ್ನು ಒಳಗೊಂಡ ಎಲ್ಲ ಕಡತಗಳು ಇವರ ವಶದಲ್ಲಿ ಇರುತ್ತವೆ. ಕಂದಾಯ ನಿರೀಕ್ಷಕರ ಅಧೀನರಾಗಿರುವ ಗ್ರಾಮಲೆಕ್ಕಿಗರು ತಮಗೆ ವಹಿಸಿದ್ದ ಗ್ರಾಮದಲ್ಲಿ ಅಥವಾ ಗ್ರಾಮಗಳ ಕೇಂದ್ರದ ಒಂದು ಸ್ಥಳದಲ್ಲಿ ತಮ್ಮ ಸುಪರ್ದಿಯ ಗ್ರಾಮಗಳ ಜನರಿಗೆ ಸಂಪರ್ಕಕ್ಕೆ ಸಿಗುವಂತೆ ವಾಸ ಮಾಡಬೇಕು. ಇವರ ವಾಸಸ್ಥಾನವನ್ನು ಜಿಲ್ಲಾಧಿಕಾರಿಯೇ ಗೊತ್ತು ಮಾಡುತ್ತಾರೆ; ಅಂಥ ಸ್ಥಳದಲ್ಲಿ ವಾಸ ಮಾಡದೇ ಇದ್ದರೆ ಗ್ರಾಮಲೆಕ್ಕಿಗರ ಮೇಲೆ ಕ್ರಮ ಕೈಕೊಳ್ಳಬಹುದು. ತಹಶೀಲ್ದಾರರು ನೀಡುವ ಸೂಚನೆಯಂತೆ ಗ್ರಾಮಲೆಕ್ಕಿಗರು ಕಂದಾಯ ವಸೂಲಾತಿ, ಬೆಳೆಗಳ

ನೋಂದಣಿ, ಮಹಜರ್‌ಗಳ ತಯಾರಿ, ಕಂದಾಯ ವಸೂಲಿಗೆ ನೋಟಿಸು ಜಾರಿ ಮುಂತಾದ ಕೆಲಸಗಳನ್ನು ಮಾಡುತ್ತಾರೆ. ಇದಲ್ಲದೆ ಮಂಡಲ ಪಂಚಾಯತಿಗೆ ಸಂಬಂಧಿಸಿ ಆಯಾ ಪಂಚಾಯತಿಗೆ ಸಂಬಂಧಿಸಿದ ಅಭಿವೃದ್ಧಿ ಚಟುವಟಿಕೆಗಳನ್ನು ಬ್ಲಾಕ್ ಡೆವೆಲಪ್‌ಮೆಂಟ್ ಆಫೀಸರ ಸುಪರ್ದಿಯಲ್ಲಿದ್ದು ಮಾಡುತ್ತಾರೆ. 1983ರ ಕಾನೂನಿನಂತೆ ಈ ಮಂಡಲ ಪಂಚಾಯತಿಗೆ ಗ್ರಾಮಲೆಕ್ಕಿಗರೇ ಕಾರ್ಯದರ್ಶಿಗಳು (ಇದಕ್ಕೂ ಹಿಂದೆ 1959ರ ಸ್ಥಳೀಯ ಸಂಸ್ಥೆಗಳ ಕಾನೂನಿನಂತೆ ರೂ. 12,000ಕ್ಕೂ ಕಡಿಮೆ ಆದಾಯವಿರುವ ಪಂಚಾಯತಿಗಳಿಗೆ ಗ್ರಾಮಲೆಕ್ಕಿಗರೇ ಪದನಿಮಿತ್ತ ಕಾರ್ಯದರ್ಶಿಗಳಾಗಿದ್ದರು). ಮಂಡಲ ಪಂಚಾಯತಿಗೆ ಸಂಬಂಧಿಸಿದ ವ್ಯವಸ್ಥೆಯಂತೆ ಗ್ರಾಮಲೆಕ್ಕಿಗರ ಅಧಿಕಾರದ ವಿವರಗಳನ್ನು ಅಧ್ಯಾಯ 12ರಲ್ಲಿ ನೋಡಬಹುದಾಗಿದೆ. ಜಿಲ್ಲೆಯಲ್ಲಿ 76 ಗ್ರಾಮಲೆಕ್ಕಿಗರಿದ್ದಾರೆ (1991).

ಗ್ರಾಮಸಹಾಯಕರು

ಹಿಂದೆ ಪ್ರತೀ ಗ್ರಾಮಕ್ಕೂ ಒಬ್ಬ ಪಟೇಲ, ಒಬ್ಬ ಶಾನುಭಾಗ ಹಾಗೂ ಅವರಿಗೆ ನೆರವಾಗಲು ಉಗ್ರಾಣಿ ಅಥವಾ ತಳಾರ ಎಂಬ ವ್ಯವಸ್ಥೆಗಳಿದ್ದವು. ಈ ಹುದ್ದೆಗಳು ವಂಶಪಾರಂಪರ್ಯವಾಗಿ ಇದ್ದವು. ಕರ್ನಾಟಕ ಗ್ರಾಮ ನೌಕರರ ರದ್ದತಿ ಅಧಿನಿಯಮದಂತೆ (1961) ಈ ಎಲ್ಲ ವಂಶಪಾರಂಪರ್ಯದ ಹುದ್ದೆಗಳನ್ನು ರದ್ದುಮಾಡಿದರು. ಪಟೇಲರು, ಶಾನುಭಾಗರ ಬದಲಾಗಿ ಅಸ್ತಿತ್ವಕ್ಕೆ ಬಂದ ಗ್ರಾಮಲೆಕ್ಕಿಗರಿಗೆ ನೆರವಾಗಲು ಗ್ರಾಮ ಸಹಾಯಕರನ್ನು ನೇಮಿಸಲಾಯಿತು. ಗ್ರಾಮ ಸಹಾಯಕನು ಹಿಂದಿನ ತೋಟಿ ಅಥವಾ ಉಗ್ರಾಣಿಯಂತೆ ಕೆಲಸ ಮಾಡುತ್ತಿದ್ದು ಸಂದೇಶವಾಹಕರಾಗಿಯೂ ಗ್ರಾಮಲೆಕ್ಕಿಗರ ಜೊತೆ ದಫ್ತರು ಗಂಟು, ಅಳತೆ ಸರಪಳಿ ಸಾಗಿಸುವುದು ಮುಂತಾದ ಕೆಲಸಗಳ ಸಹಾಯಕರಾಗಿಯೂ ಕೆಲಸ ಮಾಡುತ್ತಾನೆ.

**ತರಬೇತಿ :** ಸರ್ಕಾರದ ವಿವಿಧ ಹಂತಗಳ ನೌಕರರಿಗೆ ಆರಂಭಿಕ ತರಬೇತಿ ಮತ್ತು ಪುನಶ್ಚೇತನ ತರಬೇತಿ ನೀಡಲು ಎಲ್ಲಾ ಜಿಲ್ಲೆಗಳಲ್ಲಿ ತರಬೇತಿ ಸಂಸ್ಥೆಗಳಿದ್ದು ಬೀದರ್, ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಮಾತ್ರ ಇಂಥ ಸಂಸ್ಥೆಗಳು ಇಲ್ಲ. ಕೊಡಗಿನ ನೌಕರರನ್ನು ನೆರೆಯ ಜಿಲ್ಲೆಗಳಾದ ಮೈಸೂರು, ಮಂಗಳೂರುಗಳಲ್ಲಿ ತರಬೇತಿಗೆ ಕಳುಹಿಸಿ ಕೊಡಲಾಗುತ್ತದೆ.

## ಭೂಕಂದಾಯ

ಭೂಕಂದಾಯವು ಪ್ರಾಚೀನ ಭಾರತದಲ್ಲೂ ಕರ್ನಾಟಕದಲ್ಲೂ ಅತ್ಯಂತ ಮುಖ್ಯ ರಾಜಾದಾಯವಾಗಿತ್ತು. ಮನು, ಶುಕ್ರ, ಕೌಟಿಲ್ಯ ಇವರೆಲ್ಲ ಭೂಕಂದಾಯದ ಬಗ್ಗೆ ವಿವರಣೆಗಳನ್ನು ನೀಡುತ್ತ ಬಂದಿದ್ದು ಗಂಗರ ಶಾಸನಗಳಿಂದ ಕರ್ನಾಟಕದಲ್ಲಿ ಇವರ ಹೇಳಿಕೆಗಳನ್ನು ವಿವಿಧ ವಿಚಾರಗಳಲ್ಲಿ ಬಂದ ಸಂಗತಿ ತಿಳಿಯುತ್ತದೆ. ಸಾಮಾನ್ಯವಾಗಿ ಭೂಉತ್ಪತ್ತಿಯ ಆರನೇಯ ಒಂದು ಭಾಗವನ್ನು ಕಂದಾಯವಾಗಿ ಕೊಡಬೇಕೆಂಬ ನಂಬಿಕೆ ಇದ್ದು ಇವರ ಜೊತೆಗೇ ಬೇರೆ ಕಿರುಕುಳ ಶುಲ್ಕಗಳನ್ನು ಮುಂದೆ ಸೇರಿಸುತ್ತ ಬಂದಿದ್ದರು. ನೀರು ಶುಲ್ಕವೂ ಅದರಲ್ಲಿ ಒಂದು. ಆದರೆ ಭೂಮಿಯ ಫಲಶಕ್ತಿ, ಮಣ್ಣಿನ ಗುಣ, ನೀರಾವರಿ ಸೌಲಭ್ಯ, ಮಾರುಕಟ್ಟೆಯ ಸೌಲಭ್ಯಗಳನ್ನು ಗಮನಿಸಿ ಈ ಆರನೇಯ ಒಂದಂಶದಲ್ಲಿ ವ್ಯತ್ಯಾಸವಾಗುತ್ತಿತ್ತು. ಹೊಸದಾಗಿ ಭೂಮಿಯನ್ನು ಕೃಷಿಗೆ ಸಿದ್ಧಪಡಿಸಿದವರಿಗೆ ಕೆಲವು ವರ್ಷ ಕಂದಾಯ ಪಾವತಿಯಿಂದ ವಿನಾಯಿತಿ ಇತ್ತು. ಕ್ಷಾಮಾದಿಗಳು ಸಂಭವಿಸಿದಾಗ ಕಂದಾಯವನ್ನು ಮಾಫಿ ಮಾಡಲಾಗುತ್ತಿತ್ತು. ಕಂದಾಯ ಸಂಗ್ರಹಣ ಅಧಿಕಾರಿಯು (ಕರಣ ಅಥವಾ ಸೇನಬೋವ) ಕಂದಾಯ ಸಂಗ್ರಹದಲ್ಲಿ ಅತಿಕ್ರಮ ಕೈಕೊಂಡು ಅದರಿಂದ ಭೂಮಿ ಸಾಗುವಳಿ ಮಾಡದೆ ಬೀಳು ಬಿಟ್ಟಿದ್ದರೆ ಅಥವಾ ರೈತರು ಊರು ಬಿಟ್ಟರೆ ಆ ಬಗ್ಗೆ ಅಂಥ ಅಧಿಕಾರಿಗೆ ಶಿಕ್ಷೆಯಾಗುತ್ತಿತ್ತು.

ಕೊಡಗಿನಲ್ಲಿ ಕಂದಾಯ ಸಂಗ್ರಹದ ವಿಚಾರ ಸ್ಪಷ್ಟ ವಿವರಗಳು ತಿಳಿಯುವುದು ಕೊಡಗಿನ ರಾಜರ ಕಾಲದಲ್ಲಿಯೇ. ಅದಕ್ಕಿಂತ ಹಿಂದಿನ ಗಂಗ, ಹೊಯ್ಸಳ, ಚಂಗಾಳ್ವ ಅಥವಾ ವಿಜಯನಗರ ಆಡಳಿತಕ್ಕೆ ಸಂಬಂಧಿಸಿದ ಕೊಡಗಿನಲ್ಲಿ ದೊರೆತ ಕೆಲವೇ ದಾಖಲೆಗಳಲ್ಲಿ ಕಂದಾಯ ಆಚರಣೆಗೆ ಸಂಬಂಧಿಸಿದ ಸ್ಥಳೀಯ ವಿವರಣೆಗಳು ಇಲ್ಲ.

ಕೊಡಗಿನ ಅರಸರ ಆಡಳಿತದ ಆರಂಭಕ್ಕೆ ಅವರು ರೈತರಿಂದ 'ಧೂಳೀಬತ್ತ' ಎಂಬ ಕಾಣಿಕೆ ಪಡೆಯುತ್ತಿದ್ದರು. ಮುಂದೆ ಕಂದಾಯವನ್ನು ಪ್ರತ್ಯೇಕವಾಗಿ ಆರಂಭಿಸಿದರು. ಎರಡನೇಯ ಲಿಂಗರಾಜೇಂದ್ರನು ಹಿಂದಿನಿಂದ ನಡೆದುಕೊಂಡು ಬಂದ ಕಂದಾಯ ಆಕರಣೆಯಲ್ಲಿ ಬಂದ ಕ್ರಮವನ್ನು ಹೆಚ್ಚು ಅಚ್ಚುಕಟ್ಟಾಗಿ ರೂಢಿಸಿದ್ದು ಅದನ್ನು 'ಲಿಂಗರಾಜೇಂದ್ರನ ಸಿಸ್ತು' ಎಂದು ಕರೆಯಲಾಗಿದೆ. ಭೂಮಿಯನ್ನು ಅಳತೆ ಮಾಡಲು ಲಿಂಗರಾಜೇಂದ್ರನು (1811–20) 'ಲಿಂಗರಾಜೇಂದ್ರನ ಕೋಲು' ಎಂಬ ಮಾಪನವನ್ನು ರೂಢಿಗೆ ತಂದಿದ್ದನು. ಇದು ಸುಮಾರು 16 ಅಡಿ ಉದ್ದವಾಗಿತ್ತು. ತಮ್ಮ ಒಟ್ಟು ಉತ್ಪತ್ತಿಯ ಹತ್ತನೇಯ ಒಂದಂಶವನ್ನು ಕಂದಾಯವಾಗಿ ಕೊಟ್ಟರೆ ಸಾಕೆಂದು ಅವನ ಹುಕುಂನಾಮೆಯ ಮೂರನೇಯ

ಅಪ್ಪಣೆ ಹೇಳುತ್ತದೆ. ಅವರ ಜಮ್ಮ ಭೂಮಿಗೆ ಅವರ ಅರ್ಧದಷ್ಟು ಕಂದಾಯವಿರುತ್ತಿತ್ತು. ಈ ಕಂದಾಯ ಅರ್ಥಾತ್ ಭೂಮಿಯ ಉತ್ಪನ್ನವನ್ನು ನಿರ್ಣಯಿಸುವಾಗ ಭೂಮಿಗಳನ್ನು ತಾನು ನಿಗದಿಪಡಿಸಿದ ಹೊಸ ಕೋಲಿನಿಂದ ಅಳತೆ ಮಾಡಿಸಿ ಪ್ರತೀ ಭೂಮಿಯ ಮಣ್ಣಿನ ಗುಣಕ್ಕೆ ಅನುಸಾರವಾಗಿ (ಈ ಬಗ್ಗೆ ವಿವರಣೆ ಮುಂದೆ ಕೊಟ್ಟಿದೆ) ಕಂದಾಯವನ್ನು ನಿಗದಿ ಪಡಿಸಿದನು. ಪ್ರತೀ ಗ್ರಾಮ ಹಾಗೂ ಪ್ರತೀ ನಾಡಿನ ಕಂದಾಯವು ಹೀಗೆ ನಿಗದಿಯಾಗಿತ್ತು.

ತೆರಿಗೆ ವಸೂಲಿಯನ್ನು ಜನರಿಗೆ ಭಾರವೆನಿಸದಂತೆ ಉಪಾಯದಿಂದ ('ಹರಹುನ್ನಾರಿನಿಂದ') ಮಾಡಬೇಕೆಂದು ತನ್ನ ಎರಡನೇಯ ಅಪ್ಪಣೆಯಲ್ಲಿ ಲಿಂಗರಾಜೇಂದ್ರನು ಹೇಳಿದ್ದು ಅದು ಹೀಗಿದೆ : "ನೀನು ಅರಮನೆಗೆ ಚಾಕ್ರಿ ತೂಗಿಸುವಲ್ಲಿ ಬಹು ಜಾಗ್ರತೆಯಿಂದ ಇರುವ ಬಗ್ಗೆ ಇದೇ ಮುಖ್ಯವಾಗಿ ಮೊಕರೂರು ಅಪ್ಪಣೆ ಕೊಡಿಸಿದ ಕಲಂ ಮೂರಕ್ಕೆ ವಿವರ : ಅರಮನೆಗೆ ಬರುವಂಥ ಅದಾಯ ಮುಂತಾದ್ದು ಏನೊಂದು ಇದೆ—ಅದನ್ನು ಬರಮಾಡುವುದು ಹ್ಯಾಗೆಂದರೆ—ಈ ಹುಕುಂನಾಮೆಯನ್ನು ಆಗಾಗ್ಗೆ ಓದಿನೋಡಿ ಗ್ರಹಿಸಿಕೊಂಡು ಇದರಲ್ಲಿ ಬರೆದಿರುವುದಕ್ಕೆ ಲೇಶಾಂಶ ಹೆಚ್ಚುಕಡಿಮೆ ಇಲ್ಲದೆ ಹರಹುನ್ನಾರಿನಿಂದಲೂ, ಜಾಣತನದಿಂದಲೂ ಜನಕ್ಕೆ ನೋವು ಇಲ್ಲದಂತೆ ಅರಮನೆಗೆ ಬರುವಂಥ ವಾಜಿಬಿವಡವೆ ಮಾಡುವ ಕಲಂ ಒಂದು, ಇತರಾದಿ ಕೈತದು ಮುಂತಾದವರಿಗೆ ಅರಮನೆಗೆ ಬರಮಾಡಿಕೊಡುವುದು ಇದೆಯೋ ಅದು ಮಾತ್ರ ಬರಮಾಡುವುದೇ ಹೊರತು ಅದಕ್ಕೆ ಹೆಚ್ಚಾಗಿ ತೆಗೆದು ರಕ್ಷಣ್ಯ ಮಾಡುವ ಕಾಮಂದರ (ರಾಜನ)ದಯಕ್ಕೆ ಪಾತ್ರನಾದೇನು ಎಂಬುದಾಗಿ ಮಾಡಿದರೆ ಅದು ಅರಮನೆಗೆ ಬಂದದ್ದರಿಂದ ಏನಾದರೂ ಭಂಡಾರ ತುಂಬಲಿಕ್ಕಿಲ್ಲ, ಅದು ಕಾರಣ ಒಂದು ವೀಸ ಬರುವಂಥದ್ದು ಬಿಡದೆ ಅವರ (ರಾಜರ) ಧಾರಾಳವರಿತು ಗಡುಬಗಂತು ಕೊಟ್ಟು ಬರಮಾಡುವರಲ್ಲದೆ ಅನ್ಯಾಯದಿಂದ ಜನರ ನೋಯಿಸಲಾಗದೆಂಬ ಕಲಂ ವಂದು..."

ಹಲವು ವರ್ಷಗಳಿಂದ ಹಾಳು ಬಿದ್ದಿದ್ದ ವ್ಯವಸಾಯ ಭೂಮಿಯನ್ನು ಮತ್ತೆ ಸಾಗು ಮಾಡಲು ಸಿದ್ಧರಿರುವವರಿಗೆ ಕೊಟ್ಟು, ಅವರಿಂದ ಪರಿಸ್ಥಿತಿಗೆ ಅನುಗುಣವಾಗಿ ಕೆಲವು ವರ್ಷ ಕಂದಾಯ ಮಾಫಿ ಮಾಡಿ ಮುಂದೆ ಅರೆಕಂದಾಯ, ಕಾಲಕ್ರಮದಲ್ಲಿ ಪೂರ್ತಿ ಕಂದಾಯ ವಸೂಲಿ ಮಾಡಬೇಕೆಂದು ಲಿಂಗರಾಜೇಂದ್ರನು ಸೂಚನೆ ನೀಡಿದ್ದನು. ಇದಲ್ಲದೆ ರೈತರಿಗೆ ಬೇಕಾದಲ್ಲಿ ಅರಮನೆ ಲೆಕ್ಕದಲ್ಲಿ (ಸರಕಾರದಿಂದ) ದನಕರುಗಳನ್ನು, ಬತ್ತವನ್ನು ಸಾಲವಾಗಿ ಕೊಟ್ಟು ಬಡ್ಡಿ ಸಮೇತ ವಸೂಲಿ ಮಾಡುವ ಕ್ರಮಗಳನ್ನು ಹೇಳಿದೆ. "ರೈತನಿಗೆ ದನಕರ ಬತ್ತವನ್ನು ಕೊಟ್ಟು ಗ್ರಾಮದ ಗವುಡ ಪಾರುಪತ್ಯಗಾರರ ಸಹಿತ ವಿಚಾರಿಸಿಕೊಂಡು ಸದರಿ ಬರೆದ ಮೇಲೆ ವ್ಯವಸಾಯ ಮಾಡಿಸದೆ ಉದಾಸೀನ ಮಾಡಿ ಅರಹಿತನು ದನಕರ ಕಾಲಿ ಮಾಡಿ ಬತ್ತವನ್ನು ತಿಂದುಬಿಟ್ಟು ಭೂಮಿ ಸಾಗು ಮಾಡದೆ ಹೋದರೆ ಆ ಬಗ್ಗೆ ಅರಮನೆ ತರದ ದನಕರ ಬತ್ತವನ್ನು ಪಾರುಪತ್ಯಗಾರ ಆ ಗ್ರಾಮದ ಗವುಡ ಸಹಕೊಡಬೇಕಾದೀತು" ಎಂದು ಎಚ್ಚರಿಸಿದೆ.

ಕಂದಾಯವನ್ನು ನಗದು ಮತ್ತು ಧಾನ್ಯರೂಪದಲ್ಲೂ ಸಂಗ್ರಹಿಸುತ್ತಿದ್ದರು. ಪ್ರತೀಗ್ರಾಮದಲ್ಲೂ ನಾಡಿನಲ್ಲೂ ಅರಮನೆಯ ಉಗ್ರಾಣಗಳಿದ್ದು ರೈತರು ಕಂದಾಯದ ಬತ್ತವನ್ನು ಅಲ್ಲಿಗೆ ತಂದು ಮುಟ್ಟಿಸಬೇಕಿತ್ತು. ಮಾಘ, ಫಾಲ್ಗುಣ, ಚೈತ್ರ, ವೈಶಾಖ, ಹೀಗೆ ನಾಲ್ಕು ಕಂತುಗಳಲ್ಲಿ ಕಂದಾಯವು ಸಂಗ್ರಹವಾಗುತ್ತಿತ್ತು. ಒಂದೊಂದು ಕಂತಿಗೂ ಇಂತಿಷ್ಟು ನಾಣ್ಯ, ಇಂತಿಷ್ಟು ಬತ್ತ ಕೊಡಬೇಕು, ಎಂಬುದಾಗಿ ಪ್ರತೀ ಗ್ರಾಮದ ಪ್ರತೀಭೂಮಿಯನ್ನು ಪರಿಶೀಲಿಸಿ ಗ್ರಾಮದ ಶಾನುಭಾಗನು ನಾಡಿನ ಪಾರುಪತ್ಯಗಾರನೂ ವರದಿ ತಯಾರಿಸಿ ಅರಮನೆ ಕಚೇರಿಗೆ ಕಳುಹಿಸಬೇಕಿತ್ತು. ಭೂಮಿಯನ್ನು ಜಮ್ಮವಾಗಿ ಅಥವಾ ಉಂಬಳಿಯಾಗಿ ಪಡೆದ ಜನ ಕೊಡಬೇಕಾದ ಕಂದಾಯದ ದರ ಕಡಿಮೆಯಾಗಿದ್ದರೂ ಅವರು ಅರಮನೆಗೆ ಬೇರೆಬೇರೆ ಚಾಕರಿಗಳಿಗೆ, ಯುದ್ಧಕ್ಕೆ ಕರೆದಾಗ ಬರಬೇಕಾಗಿತ್ತು. ಜಮ್ಮವಾಗಿ ಭೂಮಿ ಪಡೆದವರಿಗೆ ಕೃಷಿ ಕಾರ್ಯವನ್ನು ಮಾಡಲೆಂದು ಅಸ್ಪೃಶ್ಯ ಇಲ್ಲವೆ ಬುಡಕಟ್ಟಿನ ಗುಂಪಿಗೆ ಸೇರಿದ ಗುಲಾಮರನ್ನು ಕೊಡಲಾಗುತ್ತಿತ್ತು. ಅವರಿಗೆ ಜಮ್ಮದಾಳುಗಳೆಂದು ಹೆಸರು.

"ಉಂಬಳಿ ಅನುಭವಿಸಿಕೊಂಡು ಬರುವಂತಾ ರೈತರಲ್ಲಿ (ಮನೆಯಲ್ಲಿ) ಮೂರುಜನ ಇದ್ದಲ್ಲಿ ಒಂದು ಜನದ ಮೇಲೆ ಅರಮನೆ ಚಾವಡಿಗೆ ಬಂದು ತಿಂಗಳು ಒಂದಕ್ಕೆ ಹದಿನೈದು ದಿವಷ ಅರಮನೆ ಚಾಕ್ರಿ ಮಾಡಿ ಹದಿನೈದು ದಿವಸ ತಮ್ಮ ತಮ್ಮ ಮನೆಗೆ ಹೋಗಬೇಕು". ಈ ರೀತಿ ಅರಮನೆ ಚಾಕ್ರಿಗೆ ಬಂದವರಿಗೆ ಅರಮನೆಯಲ್ಲಿ ಊಟವೇ ಮುಂತಾದ ಸಕಲ ವ್ಯವಸ್ಥೆ ಮಾಡಲಾಗುತ್ತಿತ್ತು. ಅರಮನೆಪಹರೆ, ಬೇಟೆ ಮುಂತಾದ ಸೇವೆಗಳಿಗೆ ಹೋಗಲು ಇಚ್ಛಿಸದ ರೈತರು ಹೆಚ್ಚಿನ ಕಂದಾಯ ಕೊಟ್ಟು ವಿನಾಯತಿ ಪಡೆಯುತ್ತಿದ್ದರು. ಇವರ ಭೂಮಿಗೆ ಸಾಗು ಭೂಮಿ ಎನ್ನುತ್ತಿದ್ದರು. ನೆರೆಯ ಸಂಸ್ಥಾನಗಳ ರೈತರಿಗಿಂತ ಕೊಡಗಿನ ರೈತರ ಮೇಲೆ ಬೀಳುವ ಕಂದಾಯವು ಭಾರ

ಕಡಿಮೆ ಹಾಗೂ ಕಂದಾಯ ವಸೂಲಾತಿಯು ಸುಲಭ, ಎಂದು 1817ರಲ್ಲಿ ಕರ್ನಲ್ ಕೊನೋರ್ ತನ್ನ ವರದಿಯಲ್ಲಿ ಹೇಳಿದ್ದಾನೆ.

ಭೂಕಂದಾಯವೇ ಅಲ್ಲದೆ ಮನೆಹಣ (ಮನೆಕಂದಾಯ), ಧೂಳಿಬತ್ತ, ತುಪ್ಪದ ಕಂದಾಯ (100 ಬಟ್ಟಿ ಭೂಮಿಗೆ ½ ಸೇರು ತುಪ್ಪದಂತೆ) ಇವನ್ನೂ ಅರಮನೆಗೆ ಸಲ್ಲಿಸಬೇಕಾಗಿತ್ತು. ವೃತ್ತಿ ತೆರಿಗೆಗಳನ್ನು ಆಕರಿಸಲಾಗುತ್ತಿತ್ತು. ಕುರುಬರ ಗುಡಿಸಲಿನಿಂದ ಪ್ರತೀ ಗುಡಿಸಲಿಗೆ ಒಂದು ಕಂಠಿರಾಯೀಹಣ (ಐದು ಗ್ರೇನ್‌ನ ಬಂಗಾರದ ನಾಣ್ಯ), ಅಗಸರಿಂದ 'ಉಬ್ಬೆ ಹಣ'ವಾಗಿ ಮೂರು ಹಣ, ಕುಂಬಾರರಿಂದ 'ಚಕ್ರಗಾಣಿಕೆ' ಮೂರುಹಣ, ಕಮ್ಮಾರರಿಂದ 'ಕುಲುಮೆಗಾಣಿಕೆ' ಮೂರು ಹಣ, ಕಣಿಯರು (ಕಣಿಹೇಳುವವರು) 'ಪ್ರಶ್ನೆ ಕಾಣಿಕೆ'ಯಾಗಿ ಒಂದು ಹಣ, ಬಸವಿಯರಿಂದ 'ಮುದ್ರೆಗಾಣಿಕೆ' ಎರಡು ಹಣ, ಹೊಸಮನೆ ಪ್ರವೇಶಕ್ಕೆ ಒಂದು ಹಾಗ (ಹಣದ ಕಾಲುಭಾಗ) ಅದೇ ರೀತಿ ಮದುವೆ ಕಾಣಿಕೆ ಕೂಡ ಇತ್ತು. ರೈತರು ಎತ್ತಿನ ಮೇಲೆ ಹೇರಿ ಅಕ್ಕಿಯನ್ನು ಮಾರಾಟ ಮಾಡಲು ನೆರೆಯ ಮಲಬಾರು ಮುಂತಾದ ಕಡೆ ಹೋದರೆ ಈ ಹೇರುಗಳಿಗೆ ಸುಂಕ ಕೊಡಬೇಕಾಗಿತ್ತು.

ರಾಜ್ಯದಲ್ಲಿ ಎಷ್ಟೋ ವ್ಯಾಪಾರ ವ್ಯವಹಾರಗಳು ಸರಕಾರದ ಗುತ್ತಿಗೆಯಾಗಿದ್ದುದರಿಂದ ಅದರಿಂದಲೂ ಸರಕಾರಕ್ಕೆ ಸಾಕಷ್ಟು ಆದಾಯ ಬರುತ್ತಿತ್ತು. ಕಾಡಿನ ಉತ್ಪತ್ತಿಗಳಾದ ಏಲಕ್ಕಿ, ನಾಟಿಹುಳಿ (ವಣಪುಳಿ), ಜೇನುತುಪ್ಪ, ಜೇನುಮೇಣ, ಒಳ್ಳೆಮೆಣಸು, ಅನೇಕ ಔಷಧಿಗೆ ಬೇಕಾಗುವ ಬೇರುಗಳು, ಮರದ ಚಕ್ಕೆ, ತೊಗಟೆ, ಹಲವಾರು ಕಸುಬುಗಳಿಗೆ ಸಂಬಂಧಿಸಿ ಬೇಕಾಗುವ ಬೀಜಗಳು, ಕಾಯಿಗಳು ಇವುಗಳನ್ನು ಪ್ರಜೆಗಳಲ್ಲಿ ಯಾರಾದರೂ ಸಂಗ್ರಹಿಸಿದರೆ ಅರಮನೆಗೇ ತಂದು ಮಾರಬೇಕೆಂಬ ನಿಯಮವನ್ನು ಲಿಂಗರಾಜನು ಮಾಡಿದ್ದು, ಈ ಪದ್ಧತಿ ಹಿಂದಿನಿಂದಲೂ ಇದ್ದಿರಬಹುದು. ಅರಮನೆಯಿಂದ ಅದಕ್ಕೆ ಸೂಕ್ತ ಬೆಲೆ ಸಲ್ಲುತ್ತಿತ್ತು. ಏಲಕ್ಕಿ ಬೆಳೆಯುವ ಮಲೆಗಳನ್ನು ರೈತರಿಗೆ ಗುತ್ತಿಗೆಗೆ ಕೊಡಲಾಗುತ್ತಿತ್ತು. "ಅರಮನೆಯಿಂದ ರಹಿತರಿಗೆ ಕೊಟ್ಟು ಇರುವಂಥ ಯಾಲದ ಮಲೆಗಳಿಂದ ಅಯಾಯಾ ರೈತರು ಯಾಲದ ಪೈರು ತೆಗೆದು ಕೊಳ್ಳುತ್ತಾರಷ್ಟೆ. ಆ ಯಾಲ ಒಂದು ಕಾಯಿ ವಂಚನೆ ಇಲ್ಲದೆ ಅರಮನೆಗೆ ತಂದು ಪಾಟ ಮಣವಿನ ಕಲ್ಲಿನಲ್ಲಿ ಸರಿಯಾಗಿ ತೂಕಮಾಡಿ ಕೊಟ್ಟಲ್ಲಿ ಉತ್ತಮದ ತರದ ಯಾಲ ಪಾಟ ಮಣ ಒಂದಕ್ಕೆ ಕ್ರಯ ರೂಪಾಯಿ ಹದಿನೇಳು ಕನಿಷ್ಟ ತರದ ಯಾಲ ಪಾಟ ಮಣ ಒಂದಕ್ಕೆ ಹದಿನೈದು ಕನಿಷ್ಟತವು ತರದ ಯಾಲ ಪಾಟ ಮಣ ಒಂದಕ್ಕೆ ರೂಪಾಯಿ ಹನ್ನೆರಡು ಈ ಮೇರೆಗೆ ಕ್ರಯ ಕೊಟ್ಟು ತೆಗೆದುಕೊಳ್ಳುತ್ತದೆ. ಇದು ಹೊರತು ಅರಮನೆಗೆ ವಂಚಿಸಿ ಯಾಲದ ಕಾಯಿ ಹೊರಗೆ ಯಾರಿಗಾದರೂ ಕೊಟ್ಟುಕೊಂಡದ್ದು ಉಂಟಾದರೆ ಅವನಿಗೆ ಇರುವ ಯಾಲದ ಮಲೆಯನ್ನು ಅವನಿಂದ ಬಿಡಿಸಿ ಅರಮನೆ ತರಕ್ಕೆ ಸೇರಿಸಿಕೊಳ್ಳುವುದು". ಗಂಧದ ಮರಗಳೂ ಆಗ ಸರಕಾರದ ಆಸ್ತಿಯಾಗಿದ್ದು ಜಮಾಬಂದಿಯ ಕಾಲದಲ್ಲಿ ಅವುಗಳ ಲೆಕ್ಕವನ್ನು ತೆಗೆದುಕೊಳ್ಳುತ್ತಿದ್ದರು. ಬ್ರಿಟಿಷರೂ ಮುಂದೆ ಗಂಧದ ಮರಗಳನ್ನು ಸರಕಾರೀ ಸೊತ್ತಾಗಿ ಪರಿಗಣಿಸಿದ್ದರು. ರಾಜನು ಸ್ವತಃ ಅರಮನೆಯಿಂದ ಸಾಗು ಮಾಡಿಸುವಂಥ ಪನ್ನಭೂಮಿ (ಪಾಸಾಭೂಮಿ)ಯಿಂದ ಅರಮನೆಗೆ ಸಾಕಷ್ಟು ಆದಾಯ ಬರುತ್ತಿತ್ತು.

ಕೊಡಗಿನಲ್ಲಿ ಭಟ್ಟಮಾನ್ಯ (ಬ್ರಾಹ್ಮಣರಿಗೆ ಕೊಟ್ಟದ್ದು), ಸಾಗು, ಜಾಗೀರು, ಜಮ್ಮ, ಜೋಡಿ (ಸರ್ವಮಾನ್ಯ) ಉಂಬಳಿ ಹೀಗೆ ವಿವಿಧ ರೂಪದ ರೈತಾಪಿ ಸಂಬಂಧದ ಜಮೀನುಗಳಿದ್ದವು. ಭೂಮಿಯನ್ನು ಮನಬಂದಂತೆ ಮಾರಾಟ ಮಾಡುವಂತೆ ಇರಲಿಲ್ಲ. ಒಬ್ಬನ ಭೂಮಿ ಅವನ ಉತ್ತರಾಧಿಕಾರಿಗೇ ಸಲ್ಲಬೇಕು. ಜಾಗೀರನ್ನು ಹೊಂದಿದ ವ್ಯಕ್ತಿ ಭೂಕಂದಾಯ ಕೊಡಬೇಕಾಗಿರಲಿಲ್ಲ, ಅಥವಾ ನಾಮಮಾತ್ರ ಕಂದಾಯ ಕೊಡಬೇಕಿತ್ತು. ರಾಜರ ಕಾಲದಲ್ಲಿ ಕೊಡಗಿನ ಭೂಮಿಯ ಕಾಲುಭಾಗ ಹೀಗೇ ಇತ್ತು. ಮಠಗಳಿಗೂ ದೇವಾಲಯಗಳಿಗೂ ತಲಕಾವೇರಿ ಮುಂತಾದ ಸ್ಥಳಗಳಿಗೆ ಬರುವ ಯಾತ್ರಿಕರ ಹಾಗೂ ಸಂನ್ಯಾಸಿಗಳ ಅನ್ನದಾನಕ್ಕೂ ಅರಮನೆಯಿಂದ ಖರ್ಚು ಸಲ್ಲುತ್ತಿತ್ತು.

ಬ್ರಿಟಿಷರು ಸರಕಾರವನ್ನು ವಹಿಸಿಕೊಂಡ ತಕ್ಷಣ ಆಗ ರೂಢಿಯಲ್ಲಿದ್ದ ಕಂದಾಯ ವ್ಯವಸ್ಥೆಯನ್ನು ತಕ್ಷಣ ಬದಲಾಯಿಸಲಿಲ್ಲ. ಮುಂದೆ 1865 ರಿಂದ 1878ರ ಅವಧಿಯಲ್ಲಿ ಕಾಫಿತೋಟಗಳು ಹೆಚ್ಚಿ ಸರಕಾರದ ಆದಾಯದಲ್ಲಿ ತುಂಬ ಬದಲಾವಣೆಯಾಯಿತು. 1878ರಲ್ಲಿ 84,000 ಎಕ್ರೆ ಪ್ರದೇಶದಲ್ಲಿ ಕಾಫಿ ಬೆಳೆಯುತ್ತಿದ್ದರು.

ಕೃಷಿ ಭೂಮಿಯನ್ನು ರಾಜರ ಕಾಲದಲ್ಲಿ ಕಾರಿ ಎಂದು ಕರೆಯುತ್ತಿದ್ದು ಇದನ್ನು ಸುಮಾರು ಒಂದೂವರೆ ಎಕರೆ ಅಳತೆಯ 'ವರ್ಗ'ಗಳೆಂದು ವಿಭಜಿಸಿದ್ದರು. ಪ್ರತೀಯೊಂದು ವರ್ಗಕ್ಕೂ ಮೇವು, ಸೊಪ್ಪು, ಸೌದೆ ಮತ್ತು ಮರಮಟ್ಟುಗಳನ್ನು ಪಡೆಯುವ ಉದ್ದೇಶಕ್ಕಾಗಿ ಈ ಭೂಮಿಯ ನೆರೆಯಲ್ಲಿ ಕಾಡನ್ನು ಬಿಡಲಾಗುತ್ತಿತ್ತು. ಇಂಥ ಭೂಮಿಯನ್ನು

ಬಾಣೆ ಎನ್ನುತ್ತಿದ್ದರು. ಇಲ್ಲಿ ರೈತರ ವಾಸ ಮತ್ತು ಕಣಕ್ಕಾಗಿ ಇದ್ದ ಭೂಮಿಯನ್ನು ಹಿತ್ತಿಲು ಮನೆತಳ ಎನ್ನುತ್ತಿದ್ದು ಊರಲ್ಲಿ ಮನೆಯಿರುವ ಸ್ಥಳವನ್ನು 'ಊರುಗುಪ್ಪೆ' 'ಗ್ರಾಮಗುಪ್ಪೆ' (ಗ್ರಾಮಠಾಣಾ) ಎನ್ನುತ್ತಿದ್ದರು.

ಲೀ ಹಾರ್ಡಿಯು 1835ರಲ್ಲಿ, ಜಮಾಬಂದಿ ಆರಂಭ ಮಾಡಿದಾಗ ಹಿಂದಿನಿಂದ ನಡೆದು ಬಂದ 'ಸಿಸ್ತು' ವ್ಯವಸ್ಥೆಗೆ ಪೂರಕ ವ್ಯವಸ್ಥೆ ಮಾಡಿ ಕಂದಾಯ ನಿರ್ಣಯ ಮಾಡಿದರು. ಹೀಗೆ ತಾತ್ಕಾಲಿಕ ಭೂಕಂದಾಯ ನಿರ್ಣಯ ಮಾಡುವ ತನಕ ಈ ಪದ್ಧತಿಯನ್ನು ಮುಂದುವರಿಸಿ ಭಾರತ ಸರಕಾರದ ನೀತಿಯಂತೆ ಜಮಾಬಂದಿ ರಿಜಿಸ್ಟರ್ (ಭೂ ಒಡೆತನದ ದಾಖಲೆ), ಬೆಳೆ ವೀಕ್ಷಣೆಯ ರಿಜಿಸ್ಟರ್ (ಪ್ರತೀ ಭೂಮಿಯಲ್ಲಿ ಪ್ರತೀ ವರ್ಷ ಬೆಳೆಯುವ ಬೆಳೆಗಳ ವಿವರದ ದಾಖಲೆ) (3) ಭೂಮಿಯ ಹಸ್ತಾಂತರಕ್ಕೆ ಸಂಬಂಧಿಸಿದ ಮ್ಯೂಟೇಶನ್ ರಿಜಿಸ್ಟರ್ ಇವುಗಳನ್ನು ಮಾಡಿಸಿದನು. ಕಾಲಕಾಲಕ್ಕೆ ಭೂಕಂದಾಯ ಸಂಬಂಧಿ ಪೂರಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಲಾಯಿತು. 1853ರಲ್ಲಿ ಭೂಮಿಯಿಂದ ಸಂಗ್ರಹವಾದ ಒಟ್ಟು ಕಂದಾಯ 1,26,000 ರೂ. ಎಂದು 1857ರ ಒಂದು ಪ್ರಕಟಣೆ ಹೇಳುತ್ತದೆ.

### 1896ರ ಕ್ಷಿಪ್ರ ಕಂದಾಯ ನಿರ್ಣಯ

ಭಾರತದ ಸರಕಾರದ ಸೂಚನೆಯಂತೆ 1896ರಲ್ಲಿ ಚೀಫ್ ಕಮೀಷನರ್ ವಿಲಿಯಂ ಮಾರ್ಕ್‌ವರ್ತ್ ಯಂಗ್ ಅವರು ಕ್ಷಿಪ್ರ ಕಂದಾಯ ನಿರ್ಣಯಕ್ಕೆ ಸರ್ವೇಕ್ಷಣೆ ಕೈಕೊಂಡು 1898 ರಲ್ಲಿ ಅವರ ವರದಿಯನ್ನು ಭಾರತ ಸರಕಾರ ಮಂಜೂರು ಮಾಡಿತು. ಇದರಿಂದ ಕಾಫಿ, ಮೆಣಸು, ಅಡಿಕೆ ತೋಟಗಳ ವಿನಾ ಉಳಿದೆಲ್ಲ ಕೃಷಿ ಭೂಮಿಯ ಮೇಲಣ ಕಂದಾಯವನ್ನು ರೂಪಾಯಿಗೆ ಒಂದಾಣೆಯಷ್ಟು (ಶೇ. 6¼) ಹೆಚ್ಚಿಸಲಾಯಿತು. ಇದರಿಂದ ಕಂದಾಯದಲ್ಲಿ 12,000 ರೂ.ಗಳಷ್ಟು ಹೆಚ್ಚಳವಾಯಿತು. ಈವರೆಗೆ ಕಂದಾಯ ಗೊತ್ತುಮಾಡಿರದ 'ಒಂಟಿ ಹೊಲ' ಎನ್ನಲಾದ ಉತ್ತರ ಕೊಡಗಿನ ಖುಷ್ಕಿ ಕೃಷಿ ಭೂಮಿಗೆ ಎಕ್ರೆಗೆ ಮೂರು ಆಣೆ (19 ಪೈಸೆ) ಕಂದಾಯ ಗೊತ್ತುಪಡಿಸಲಾಯಿತು. ಇದರಿಂದ ಆದಾಯ 650 ರೂ. ಹೆಚ್ಚಾಯಿತು. ಕಾಫಿ ತೋಟಗಳ ಮೇಲಣ ಕಂದಾಯವನ್ನು ರೂ. 2 ರಿಂದ 2¼ಕ್ಕೆ ಹೆಚ್ಚಿಸಿದ್ದರಿಂದ ರೂ. 1,600ಕ್ಕೂ ಹೆಚ್ಚು ಆದಾಯ ಬಂತು. ಇದಲ್ಲದೆ ಸರ್ಕಾರಕ್ಕೆ ತಿಳಿಯದೇ ಅತಿಕ್ರಮಿಸಿದ್ದ ಭೂಮಿಗಳ ಮೇಲೆ ಕೂಡ ಕಂದಾಯ ಹೇರಲು ಒಟ್ಟಿನ ಕಂದಾಯದಲ್ಲಿ ರೂ. 60,000 ಅಧಿಕ ಹೆಚ್ಚುವರಿ ಆದಾಯ ಬಂತು.

ರಾಜರ ಕಾಲದ ವರ್ಗೀಕರಣದಂತೆ ತರಿ ಭೂಮಿಯನ್ನು ಏಳು ವರ್ಗಗಳಾಗಿ ವಿಭಜಿಸಲಾಯಿತು. ಖುಷ್ಕಿಭೂಮಿ ಅಥವಾ ಒಂಟಿ ಹೊಲವನ್ನು ಕೆಂಪು, ಕಪ್ಪು, ಮರಳು ಮತ್ತು ನೊರಜು ಕಲ್ಲು ಮಿಶ್ರಿತ ಭೂಮಿಗಳೆಂದು ವರ್ಗೀಕರಿಸಿದರು. ಒಂದು ಸಲೆಕೋಲು (256 ಚದರ ಅಡಿ) ಭೂಮಿ ಹುಟ್ಟುವಳಿ ಮಾಡಬಲ್ಲ ಬತ್ತದ ಪ್ರಮಾಣದ ಮೇಲೆ (ಸೇರುಗಳಲ್ಲಿ) ತರಿ ಭೂಮಿಯನ್ನು ವರ್ಗೀಕರಿಸಲಾಗುತ್ತಿತ್ತು. ಕ್ಷಿಪ್ರಕಂದಾಯ ನಿಷ್ಕರ್ಷೆ ಮಾಡುವಾಗ ಹೊಸದಾಗಿ ಎಂಟು ತರಿಗಳಾಗಿ ಭೂಮಿಯನ್ನು ವರ್ಗೀಕರಿಸಿದರು. ಹೊಸ ವರ್ಗೀಕರಣದಲ್ಲಿ ಒಂದನೇಯ ತರದಲ್ಲಿ ಕೆಳ ಹಂತದಲ್ಲಿರುವ ಸಾಕಷ್ಟು ನೀರಿನ ಪೂರೈಕೆ ಇರುವ ಜೇಡಿಮಣ್ಣಿನ (ಲೋಮಿ) ಭೂಮಿ. ಎರಡನೇಯದು ಕೆಳಹಂತದಲ್ಲಿರುವ ಸಾಕಷ್ಟು ನೀರಿನ ಪೂರೈಕೆ ಇರುವ ಮರಳು ಮಿಶ್ರಿತ ಜೇಡಿಮಣ್ಣಿನ ಭೂಮಿ. ಮೂರನೇಯದು ಕೆಳಹಂತದ ಸಾಕಷ್ಟು ನೀರಿರುವ ಜೇಡಿಮಣ್ಣಿನ, ಮೇಲು ಹಂತದ ಸಾಕಷ್ಟು ನೀರಿರುವ ಜೇಡಿಮಣ್ಣಿನ, ಹಾಗೂ ಕೆಳಹಂತದ ಸಾಕಷ್ಟು ನೀರಿರುವ ಭೂಮಿ. ನಾಲ್ಕನೇಯದು ಮರಳು, ಜೇಡಿ ತುಂಬಿದ ಕೆಳಹಂತದ ಸಾಕಷ್ಟು ನೀರಿನ ಪೂರೈಕೆಯ, ಇಂಥದೇ ಮಣ್ಣಿನ ಮೇಲುಹಂತದ ಸಾಕಷ್ಟು ನೀರಿನ ಪೂರೈಕೆಯ ಮತ್ತು ಮೇಲುಹಂತದ ಜೇಡಿಮಣ್ಣಿನ ಸಾಕಷ್ಟು ನೀರಿನ ಪೂರೈಕೆ ಇರುವ ಭೂಮಿ. ಐದನೇಯದು ಮರಳು ಮಿಶ್ರಿತ ಜೇಡಿಮಣ್ಣು, ಕೆಳಹಂತದ ಸಾಕಷ್ಟು ನೀರಿರುವ ಮತ್ತು ಮರಳು ಮಣ್ಣಿನ ಮೇಲುಹಂತದ ನೀರು ಸಾಕಷ್ಟಿರುವ ಭೂಮಿ. ಆರನೇಯದು ಮರಳು ಜೇಡಿಮಣ್ಣಿನ, ಮೇಲುಹಂತದ ಸಾಕಷ್ಟು ನೀರು ಪೂರೈಕೆಯ ಭೂಮಿ. ಏಳನೇಯದು ಮೇಲುಹಂತದ ಸಾಕಷ್ಟು ನೀರಿರುವ ಮರಳು ಭೂಮಿ. ಎಂಟನೇಯದು ಜೇಡಿ ಮತ್ತು ಮರಳು ತುಂಬಿದ ಭೂಮಿ.

"ಕ್ಷಿಪ್ರ ಕಂದಾಯ ನಿರ್ಣಯ ಮಾಡಿದಾಗ, ವಿಶೇಷವಾಗಿ ಅದನ್ನು ಜಾರಿ ಮಾಡಿದ ವರ್ಷದಲ್ಲಿ ಬೆಳೆಯ ಪರಿಸ್ಥಿತಿ ಅನುಕೂಲವಾಗಿರದಿದ್ದರಿಂದ ಅಸಮಾಧಾನಕ್ಕೆ ದಾರಿಮಾಡಿತು. ಆಗ ಕಾಫಿ ಬೆಳೆಯಲ್ಲಿ ಹಿಂಜರಿತವಾಗಿ ಹಣದ ಮಾರುಕಟ್ಟೆ ಬಿಗಿಯಾಗಿತ್ತು. ಆದರೆ ಈ ವಿರೋಧವು ಜಮ್ಮಭೂಮಿ ಹೊಂದಿದವರಿಂದ ಮಾತ್ರ ಬಂತು. ತಮಗೆ ಮಾಡಲಾದ ಕಾಯಂ ಕಂದಾಯ ನಿಷ್ಕರ್ಷೆಯ ನಿಯಮಕ್ಕೆ ಇದು ವಿರುದ್ಧವಾದ ಕ್ರಮವೆಂಬುದು ಅವರ ಅಭಿಪ್ರಾಯವಾಗಿತ್ತು" ಎಂದು ರೈಸ್ ಹೇಳಿದ್ದಾರೆ. ಇದರಿಂದ ಧೂಳಿಬತ್ತ ಮತ್ತು ಮೊಹತರ್ಫ (ಮನೆ ತೆರಿಗೆ) ಗಳನ್ನು ತೆಗೆದು ಹಾಕಿದರು. ಮುಂದೆ ಇಂಥ ವಿರೋಧ ಕಣ್ಮರೆಯಾಯಿತು.

ಕೊಡಗಿನ ಕಂದಾಯ ವ್ಯವಸ್ಥೆ ಜಮಾಪಟ್ಟಿಗೆ ರೈತ ವಾರಿಯೇ. ಈವರೆಗಿನ ಇಲ್ಲಿನ ಬರವಣಿಗೆಯಿಂದ ಇದು ಯಾರಿಗಾದರೂ ಅರ್ಥವಾಗುವಂಥದು. ಪ್ರತೀ ಹಿಡುವಳಿ ದಾರನು ತಾನೇ ಕಂದಾಯ ತೆರಬೇಕಲ್ಲದೆ ಅಲ್ಲಿ ಮಧ್ಯಸ್ಥರು ಯಾರೂ ಇಲ್ಲ. ಇದರಲ್ಲಿ ಪೂರ್ತಿ ಕಂದಾಯ ಕೊಡಬೇಕಾದ ಮತ್ತು ಕಂದಾಯದ ವಿನಾ ಸರ್ಕಾರಕ್ಕೆ ಯಾವುದೇ ಚಾಕರಿ ಅಥವಾ ಸಾರ್ವಜನಿಕ ಸೇವೆಯ ಕಟ್ಟುಪಾಡು ಇರದ ಭೂಮಿ ಯೆಂದರೆ 'ಸಾಗು'. ಇಂಥ ಸಾಗು ಹಿಡುವಳಿ ವ್ಯವಸ್ಥೆ ಕೊಡಗಿನ ಒಟ್ಟು ಕೃಷಿ ಭೂಮಿಯಲ್ಲಿ ಶೇ. 43 ಮಾತ್ರ ಆಗಿತ್ತು. ಉಳಿದ ವ್ಯವಸ್ಥೆಯಲ್ಲಿ ಭೂಕಂದಾಯವನ್ನು ಪೂರ್ತಿಯಾಗಿ ಅಥವಾ ಆಂಶಿಕವಾಗಿ ಅನ್ಯೋದ್ದೇಶಗಳಿಗಾಗಿ ವೆಚ್ಚ ಮಾಡಲು ಭೂಮಾಲಿಕನಿಗೆ ಬಿಟ್ಟು ಕೊಡಲಾಗಿದ್ದ ಭೂಮಿಗಳ ಹಿಡುವಳಿ ಹಕ್ಕುಗಳೆಂದರೆ ಉಂಬಳಿ, ಜಮ್ಮ, ಭಟ್ಟಮಾನ್ಯ, ಜೋಡಿ, ಮಠಮಾನ್ಯ, ಗೌಡುಂಬಳಿ, ನಾಯಿ ಮಣ್ಣು ಇತ್ಯಾದಿ. ಈ ಬೇರೆ ಬೇರೆ ಹಿಡುವಳಿ ಅಥವಾ ಭೂಸ್ವಾಮ್ಯದ ಷರತ್ತುಗಳಂತೆ ಈ ಭೂಮಿಗಳನ್ನು ಕಮಿಷನರ್ ಅವರ ಅನುಮತಿ ಇಲ್ಲದೆ ಪರಭಾರೆ ಮಾಡುವಂತೆ ಇರಲಿಲ್ಲ.

ಜಮ್ಮ ಪದ್ಧತಿ : ಜಮ್ಮ ಪದ್ಧತಿಯು ಕೊಡಗಿನ ಮುಖ್ಯ ಹಿಡುವಳಿ ಹಕ್ಕಿನ ಪದ್ಧತಿಯಾಗಿದ್ದು 1910ರಲ್ಲಿ 40,088 ತರಿಭೂಮಿ ಮತ್ತು ಅವಕ್ಕೆ ಹೊಂದಿಕೊಂಡಿರುವ ಬಾಣೆ ಪ್ರದೇಶಗಳು ಇದ್ದುವೆಂದು ಆಗಿನ ಕಂದಾಯ ನಿಷ್ಕರ್ಷೆಯ ವರದಿಯಂತೆ ತಿಳಿಯುತ್ತದೆ. ಈ ಭೂಮಿಯ ಹಿಡುವಳಿ ದಾರರು ಸಲ್ಲಿಸಬೇಕಾಗಿದ್ದ ಸೇನಾಸೇವೆ ಅಥವಾ ತತ್ಸಂಬಂಧ ಚಾಕರಿಗಳಿಗಾಗಿ ರಾಜರ ಕಾಲದಲ್ಲಿ ನೀಡಲಾಗಿದ್ದ ಭೂಮಿಯ ಹಕ್ಕುದಾರಿಕೆ ಇದು. ಬ್ರಿಟಿಷರೂ ಈ ದತ್ತಿಯ ಪದ್ಧತಿ ಯನ್ನು 1895ರವರೆಗೆ ಮುಂದುವರಿಸಿಕೊಂಡು ಬಂದರು. ಈ ಹಕ್ಕಿನಂತೆ ಭೂಮಿ ಪಡೆದವರಿಗೆ ಅಂದಿನ ಸವಲತ್ತು ಗಳನ್ನು ಮುಂದುವರಿಸಲಾಗಿದೆ (ಈ ಹಿಡುವಳಿ ಹಕ್ಕಿನ ಬಗ್ಗೆ ಬೇರೆಡೆ ಒಂದು ವಿವರವಾದ ಟಿಪ್ಪಣಿ ಕೊಟ್ಟಿದೆ).

ಜಹಗೀರು : ರಾಜರ ಕಾಲದಲ್ಲಿ ವಿಶೇಷ ಸೇವೆ ಸಲ್ಲಿಸಿದ ವ್ಯಕ್ತಿಗಳಿಗೆ ಅವರ ಸೇವೆಯನ್ನು ಮಾನ್ಯ ಮಾಡಲೆಂದು ಕಂದಾಯದಿಂದ ಪೂರ್ತಿ ವಿನಾಯತಿ ನೀಡಿ ಮಾಡಿದ ಭೂದತ್ತಿ ಗಳು ಇವಾಗಿದ್ದು ಅವುಗಳ ಸಂಖ್ಯೆ 63 ದತ್ತಿಗಳು ಹಾಗೂ ಒಟ್ಟು ಭೂಮಿ 587 ಎಕ್ರೆಗಳ ಮಿತಿಯದಾಗಿತ್ತು. ಬ್ರಿಟಿಷರ ಕಾಲದಲ್ಲಿ ಈ ಪದ್ಧತಿಯು ಮುಂದುವರಿದು ಬ್ರಿಟಿಷರೇ ಕೊಟ್ಟ ದತ್ತಿಗಳ ಸಂಖ್ಯೆ 85, ಭೂಮಿಯ ಪ್ರಮಾಣ 1,213 ಎಕ್ರೆ ಆಯಿತು. ಬಹು ಸಂಖ್ಯೆ ದತ್ತಿ ಗಳು ಸರ್ವಕಾಲಿಕವಾಗಿದ್ದು ಕೆಲವು ಮಾತ್ರ ಮೂರು ತಲೆ ಮಾರುಗಳಿಗೆ ಮಿತವಾಗಿದ್ದವು.

ಭಟ್ಟಮಾನ್ಯ : ಕೆಲವೊಂದು ಧಾರ್ಮಿಕ ವಿಧಿ (ಕರ್ತವ್ಯ) ಗಳನ್ನು ನಡೆಸಿಕೊಂಡು ಹೋಗುವ ಉದ್ದೇಶದಿಂದ ಬ್ರಾಹ್ಮಣ ರಿಗೂ ಅವರ ಉತ್ತರಾಧಿಕಾರಿಗಳಿಗೂ ರಾಜರ ಕಾಲದಲ್ಲಿ ನೀಡಿದ ಕಂದಾಯದ ವಿನಾಯತಿಯ ಈ ಭೂಮಿಯು ಒಟ್ಟು ಮೊತ್ತ 493 ಎಕ್ರೆಗಳಾಗಿದ್ದು ಇಂಥ 55 ಹಕ್ಕುದಾರರು 1910ರಲ್ಲಿ ಇದ್ದರು. ಇದನ್ನು ಹಸ್ತಾಂತರ ಮಾಡಬಹು ದಾಗಿತ್ತು, ಆದರೆ ಹಾಗೆ ಮಾಡಿದರೆ ಕಂದಾಯ ವಿನಾಯತಿ ತಪ್ಪುತ್ತಿತ್ತು.

ಸರ್ವಮಾನ್ಯ ಮತ್ತು ಜೋಡಿ : ಸರ್ವಮಾನ್ಯವೆಂದರೆ ಪೂರ್ತಿ ಕಂದಾಯ ವಿನಾಯತಿಯ ಮತ್ತು ಜೋಡಿ ಎಂದರೆ ಅರ್ಧ ಕಂದಾಯ ಕೊಡಬೇಕಾದ ದತ್ತಿಗಳು. ಇವು ಧಾರ್ಮಿಕ ಸಂಸ್ಥೆಗಳಿಗೆ ನೀಡಿದ ದತ್ತಿಗಳಾಗಿದ್ದು ಧಾರ್ಮಿಕ ಚಟುವಟಿಕೆ ನಡೆಸಬೇಕೆಂಬುದು ಮಾಡಲಾದ ಕೊಡುಗೆಗಳಾಗಿವೆ. 1904 ರ ಇನಾಂ ಆಯೋಗದ ಸರ್ವೇಕ್ಷಣೆಯಂತೆ ಕೊಡಗಿನಲ್ಲಿ ಇಂಥ 812 ಹಿಡುವಳಿಗಳಿದ್ದು ಅದರ ಅಡಿಯಲ್ಲಿ ಬರುವ ಒಟ್ಟು ಭೂಮಿ 3,616 ಎಕರೆಗಳಾಗಿತ್ತು.

ಮಠಮಾನ್ಯ : ಲಿಂಗಾಯತರ ಮಠಗಳು ಪ್ರವಾಸಿಗರಾದ ಜಂಗಮರಿಗೂ ಉಚ್ಚ ಜಾತಿಯವರಿಗೂ ಆಶ್ರಯ ನೀಡಿ ಊಟೋಪಚಾರದ ವ್ಯವಸ್ಥೆ ಮಾಡಬೇಕಾಗಿದ್ದುದರಿಂದ ಕೊಡಗಿನ ರಾಜರ ಮಠಗಳಿಗೆ ನೀಡಿದ್ದ ದತ್ತಿಗಳೇ ಈ ಭೂಮಿ ಗಳು. ಇದರಲ್ಲಿ 454 ಎಕರೆ ಭೂಮಿ ಒಳಪಟ್ಟಿದ್ದು ಆ ಪೈಕಿ 225 ಎಕ್ರೆ ತರಿಭೂಮಿಯಾಗಿತ್ತು. ಇದನ್ನು ಮಾರಾಟ ಮಾಡುವಂತೆ ಇರಲಿಲ್ಲ ಹಾಗೂ ಮಠದ ವ್ಯವಸ್ಥೆ ಸರಿಯಾಗಿ ನಡೆಸಿದಲ್ಲಿ ಮಾತ್ರ ಅದನ್ನು ಹೊಂದಿರಬಹುದಾಗಿತ್ತು.

ಗೌಡುಂಬಳಿ ಮತ್ತು ನಾಯಿಮಣ್ಣು : ಇವು ಗ್ರಾಮ ನೌಕರ ರಿಗೆ ಅವರ ಸೇವೆಗಾಗಿ ನೀಡಿದ ಇನಾಮು ಭೂಮಿಗಳು. ಗೌಡುಂಬಳಿ ಊರಿನ ಗೌಡ ಅಥವಾ ಪಟೇಲನಿಗೆ ನೀಡಿದ್ದ ಭೂಮಿಯಾಗಿದ್ದರೆ, ನಾಯಿಮಣ್ಣು ಕುಲವಾಡಿ ಅಥವಾ ಊರತಳಾರನಿಗೆ ನೀಡಿದ ಭೂಮಿ. ಈ ಹುದ್ದೆಗಳಲ್ಲಿ ಇರ ತಕ್ಕವರು ಈ ಭೂಮಿಗಳನ್ನು ಹಸ್ತಾಂತರ ಮಾಡುವಂತೆ ಇಲ್ಲ. ಇವುಗಳ ಒಟ್ಟು ವಿಸ್ತಾರ ಆಗ ಅನುಕ್ರಮವಾಗಿ 1,154 ಹಾಗೂ 854 ಎಕ್ರೆಗಳಾಗಿತ್ತು.

ಉಂಬಳಿ : ವಿಶಿಷ್ಟವಾದ ಸೇವೆ ಅಥವಾ ಚಾಕರಿಗಾಗಿ ಜಮ್ಮಾ ಭೂಮಿಗಳಂತೆ ಉಂಬಳಿಭೂಮಿಗಳನ್ನು ನೀಡುತ್ತಿದ್ದ ಸಾಮಾನ್ಯವಾಗಿ ಸಾಗು ಗುಂಪಿನ ಹಿಡುವಳಿಗೆ ಇದ್ದ ಕಂದಾಯದ ಹತ್ತನೇಯ ಒಂದು, ಕಾಲುಭಾಗ ಅಥವಾ ಹತ್ತನೇಯ ಮೂರು ಭಾಗ (ಶೇ. 30) ಕಂದಾಯವನ್ನು ಇಂಥ ಭೂಮಿಗಳಿಗೆ ಗೊತ್ತು ಮಾಡಿದ್ದರು. ಈ ಭೂಮಿಯನ್ನು ಹಸ್ತಾಂತರ ಮಾಡಬಾರದು, ಹಾಗೂ ಅವುಗಳ ಕಂದಾಯ ಕಾಯಂ ಆಗಿ ಗೊತ್ತು ಮಾಡಿದಂಥದ್ದು. ರಾಜರ ಕಾಲದಲ್ಲಿ ಹೀಗೆ ಕೊಟ್ಟಿದ್ದ ಭೂಮಿ 650.65 ಎಕರೆಗಳಾದರೆ, ಮುಂದೆ ದಕ್ಷಿಣ ಕನ್ನಡದ ಬಂಡಾಯವನ್ನು ಹತ್ತಿಕ್ಕಿದ್ದಕ್ಕಾಗಿ ಬ್ರಿಟಿಷರು ಕೊಟ್ಟಿದ್ದ ಉಂಬಳಿ ಭೂಮಿಯು 6,749 ಎಕರೆಗಳಾಗಿತ್ತು.

ಈ ಎಲ್ಲ ಹಿಡುವಳಿ ವ್ಯವಸ್ಥೆಗಳನ್ನು ಗಮನಿಸಿದಲ್ಲಿ ತರಿ ಭೂಮಿಯ ಸುಮಾರು 1/3 ಅಂಶದಷ್ಟು ಪ್ರದೇಶಕ್ಕೆ ಕಂದಾಯದ ಆಕರಣೆ ಇರಲಿಲ್ಲ. 1910ರಲ್ಲಿ ಗಸ್ಟಾವ್ಸನ್ ಹಾಲರ್ ಎಂಬ ಕಂದಾಯ ನಿಗದಿಯ ಅಧಿಕಾರಿ ಬರೆದ ವರದಿಯಂತೆ ಕೊಡಗಿನಲ್ಲಿ ಸ್ವಯಂ ಕೃಷಿ ಮಾಡುವ ರೈತರೇ ಹೆಚ್ಚಿದ್ದು ಗೇಣಿದಾರರೆಂಬ ವರ್ಗ ಇರಲಿಲ್ಲ. ಒಬ್ಬ ಭೂಮಾಲಿಕನು ತಾನು ಸ್ವತಃ ಕೃಷಿ ಮಾಡಲು ಸಾಧ್ಯವಿರುವುದಕ್ಕಿಂತ ಹೆಚ್ಚಿನ ಹಿಡುವಳಿ ಹೊಂದಿರಲು ಅದೇ ಊರಿನಲ್ಲಿ ಯಾರಿಗಾದರೂ ಭೂಮಿಯನ್ನು ಗೇಣಿಗೆ ಕೊಟ್ಟ ಪ್ರಸಂಗಗಳು ಅಲ್ಪಸ್ವಲ್ಪ ಇದ್ದರೂ ಗೈರು ಹಾಜರಿನ ಭೂ ಮಾಲಿಕತ್ವ ಇರಲಿಲ್ಲ. ಇದರಿಂದ ನೆರೆಯ ಮದ್ರಾಸ್ ರಾಜ್ಯದಲ್ಲಿನ ಗೇಣಿಯ ಆಧಾರದ ಕಂದಾಯ ನಿರ್ಣಯ ಇಲ್ಲಿ ಸಾಧ್ಯ ಇರಲಿಲ್ಲ. ಇಲ್ಲಿ ಭೂಮಿಗೆ ಇತರ ಕಡೆಗಳಂತೆ ಭಾರೀ ಮೌಲ್ಯವೂ ಆಗ ಇರಲಿಲ್ಲ. ಏಕೆಂದರೆ ಕೊಡಗಿನಲ್ಲಿ ಸಾರಿಗೆ ಸಂಪರ್ಕ ಮಿತವಾಗಿದ್ದು ಹೊರಗಿನ ಜನ ವಲಸೆ ಬರುವುದು ನಿಲ್ಲುವುದೂ ಹವಾ ವೈಪರಿತ್ಯಗಳಿಂದಾಗಿ ಸಾಧ್ಯ ಇರಲಿಲ್ಲ. ಕಿಗ್ಗಟ್ಟುನಾಡು ಮತ್ತು ಪಾಡಿನಾಲ್ಕುನಾಡುಗಳಲ್ಲಿನ ಕೃಷಿ ಪರಿಸ್ಥಿತಿಯನ್ನು ಪೂರ್ತಿ ಗಮನಿಸಿ ಇಡೀ ಕೊಡಗಿನ ತರೀಭೂಮಿಯ ಬಗ್ಗೆ ಕಂದಾಯವನ್ನು ನಿರ್ಣಯಿಸಲಾಯಿತು. ಚೆನ್ನಾಗಿ ಸಾಗುವಳಿ ಮಾಡಿದ ಒಂದು ಎಕರೆ ಒಳ್ಳೆಯ ತರಿಭೂಮಿಯ ಸಾಗುವಳಿ ವೆಚ್ಚ ರೂ. 25 ಎಂದು ಲೆಕ್ಕ ಹಾಕಲಾಯಿತು. ಮೇಲೆ ಹೇಳಿದ ಮೊದಲ ಆರು ತರಹದ ಭೂಮಿಗಳ ಎಕರೆವಾರು ಸಾಗುವಳಿ ವೆಚ್ಚ ರೂ. 25 ರಿಂದ 16, ಏಳನೇಯ ತರಹಕ್ಕೆ ರೂ. 12 ಮತ್ತು ಎಂಟನೇಯ ತರಹಕ್ಕೆ ರೂ. 8 ಎಂದು ಗೊತ್ತು ಮಾಡಲಾಯಿತು. ಹೀಗೆ ಒಂದನೇಯ ತರಹಕ್ಕೆ ರೂ. 4.75, ಎರಡನೇಯದಕ್ಕೆ ರೂ. 4.50, ಮೂರನೇಯದಕ್ಕೆ ರೂ. 4.25, ನಾಲ್ಕನೇಯದಕ್ಕೆ ರೂ. 3.75, ಐದನೇಯದಕ್ಕೆ ರೂ. 3.50, ಆರನೇಯದಕ್ಕೆ ರೂ. 3.25, ಏಳನೇಯದಕ್ಕೆ ರೂ. 2.75, ಎಂಟನೇಯದಕ್ಕೆ ರೂ. 1.25, ಇದನ್ನೇ ಆಧಾರವಾಗಿಟ್ಟುಕೊಂಡು ಇತರ ತಾಲೂಕುಗಳ ಇದೇ ರೀತಿಯ ಭೂಮಿಯ ಕಂದಾಯ ಗೊತ್ತು ಮಾಡಿದರು. ಕಾಫಿ ತೋಟಗಳ ಕಂದಾಯವನ್ನು ಎಕರೆಗೆ ರೂ. 2.25 ರಿಂದ ರೂ. 2.00 ಎಂದು ಮೊದಲೇ ಗೊತ್ತು ಪಡಿಸಿಟ್ಟಿದ್ದ ದರವನ್ನು ಬದಲಾಯಿಸಲಿಲ್ಲ. (1862ರ ಸುಮಾರಿಗೆ ಹೊರಡಿಸಿದ್ದ ಒಂದು ಪ್ರಕಟಣೆಯಂತೆ ಕಾಫಿ ಕೃಷಿ ಆರಂಭಿಸಿದಾಗ ಮೊದಲ ನಾಲ್ಕು ವರ್ಷ ಕಂದಾಯ ಇಲ್ಲ ; ಮುಂದಿನ 5 ರಿಂದ 9ನೇಯ ವರ್ಷದವರೆಗೆ ಎಕರೆಗೆ ಒಂದು ರೂ. ಹಾಗೂ ಮುಂದೆ ಎಕರೆಗೆ ಎರಡು ರೂ.ನಂತೆ ಗೊತ್ತು ಪಡಿಸಿತು). 1907ರಲ್ಲಿ 2,862 ಎಕರೆ ಪ್ರದೇಶದಲ್ಲಿ ಕಿತ್ತಳೆ ಬೆಳೆಯುತ್ತಿದ್ದು ಬಹುಮಟ್ಟಿಗೆ ಈ ತೋಟಗಳಿಗೆ ಕಂದಾಯ ಆಕರಿಸಿರಲಿಲ್ಲ. ವಿಧಿಸಿದ ಕಂದಾಯವೂ ಕೂಡ 12 ಪೈಸೆಯಿಂದ 50 ಪೈಸೆವರೆಗೆ (ಎಕರೆಗೆ) ಇತ್ತು.

ಕಂದಾಯ ನಿಷ್ಕರ್ಷೆ ಅಧಿಕಾರಿ ಗಸ್ಟಾವ್ಸನ್ ಹಾಲರ್ ನೀಡಿದ ಮಾರ್ಗದರ್ಶನದಂತೆ ಬೇರೆ ಬೇರೆ ಪ್ರದೇಶಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳೊಂದಿಗೆ ಗೊತ್ತು ಮಾಡಿದಂತೆ 1907–13ರಲ್ಲಿ ನಿಷ್ಕರ್ಷೆಯಾದ ಕೃಷಿ ಭೂಮಿ ಮತ್ತು ಆಕರಿಸಿದ ಕಂದಾಯದ ಒಟ್ಟು ವಾರ್ಷಿಕ ಮೊತ್ತ ಹೀಗಿತ್ತು : ತರಿಭೂಮಿ ಎಕರೆ 97,856ಕ್ಕೆ ಒಟ್ಟು ರೂ. 2,22,150 ಖುಷ್ಕಿ ಭೂಮಿ ಎಕರೆ 20,659ಕ್ಕೆ ರೂ. 13,714 ; ಕಾಫಿ ತೋಟ ಎಕರೆ 84,042ಕ್ಕೆ ರೂ. 97,966, ಏಲಕ್ಕಿ ತೋಟ 9,838 ಎಕರೆಗೆ ರೂ. 9,352 ; ಕಿತ್ತಳೆಹಣ್ಣು ಎಕರೆ 4,258ಕ್ಕೆ ರೂ. 1,005 ; ತೆಂಗಿನ ಮತ್ತು ಅಡಿಕೆ ತೋಟ 213 ಎಕರೆಗೆ ರೂ. 763, ಮೆಣಸಿನಕಾಳು 930 ಎಕರೆಗೆ ರೂ. 115.

ಆಗಿನ ನಂಜರಾಜಪಟ್ಟಣ ತಾ|| (ಈಗಿನ ಸೋಮವಾರಪೇಟೆ ತಾ|| ನ ಭಾಗ) ಖುಷ್ಕಿಭೂಮಿಯಾಗಿದ್ದು ಅಲ್ಲಿ ಕಂದಾಯ ನಿಗದಿಗೆ ಐದು ತರಹಗಳನ್ನು ಗೊತ್ತುಪಡಿಸಿ ಒಂದನೇಯ ತರಹ ಕಪ್ಪು ಆರಳೆ ಭೂಮಿಗೆ ಎಕರೆಗೆ ರೂ. 2.00 ರಿಂದ 1.00, ಎರಡನೇಯ ತರಹದ ಜೇಡಿಮಣ್ಣಿನ ಭೂಮಿಗೆ ರೂ. 1.50 ರಿಂದ 0.87 ಪೈಸೆ, ಮರಳು ಜೇಡಿನ ಮೂರನೇಯ ತರಹದ ಭೂಮಿಗೆ ರೂ. 1.00 ರೂ. 0.75, ನಾಲ್ಕನೇಯ ತರಹದ ಮರಳು ಮಣ್ಣು ಭೂಮಿಗೆ 75 ಪೈಸೆಯಿಂದ 50 ಪೈಸೆ, ಐದನೇಯ ತರಹದ ಹರಳು ಭೂಮಿಗೆ

50 ಪೈಸೆಯಿಂದ 25 ಪೈಸೆ ವರೆಗೆ ದರ ನಿಗದಿಮಾಡ ಲಾಗಿತ್ತು.

ಬ್ರಿಟಿಷರು ಕೊಡಗನ್ನು ತಮ್ಮ ವಶಕ್ಕೆ ತೆಗೆದುಕೊಂಡ ವರ್ಷ (1834-35) ಭೂಕಂದಾಯವು ರೂ. 89,915 ಆಗಿದ್ದರೆ, ಮುಂದೆ ಅದು ಏರುತ್ತ ಸಾಗಿ 1875-76 ರಲ್ಲಿ ರೂ. 2.30ಲಕ್ಷ ಆಯಿತು. 1886-87ರಲ್ಲಿ ಇದು 3.35 ಲಕ್ಷ ರೂ.ಗೆ ತಲುಪಿದ್ದರೆ, 1896-97ರ ಕ್ಷಿಪ್ರ ಕಂದಾಯ ನಿಷ್ಕರ್ಷೆಯಿಂದ 4.48 ಲಕ್ಷ ರೂ.ಗೆ ಏರಿತು. 1900-1901 ರಲ್ಲಿ ಇದು ರೂ. 3.58 ಲಕ್ಷ ಹಾಗೂ 1906-07 ರಲ್ಲಿ 3.59 ಲಕ್ಷವಾಗಿತ್ತು. 1908-09 ರಲ್ಲಿ ಒಟ್ಟು ವಸೂಲಿಯಾದ ರೂ. 3.63 ಲಕ್ಷದ ಪೈಕಿ ರೂ. 1.09 ಲಕ್ಷ ಕಾಫಿ ತೋಟಗಳಿಂದ ಬಂದುದಾಗಿತ್ತು. 1924-25 ರಲ್ಲಿ ವಾರ್ಷಿಕ ಆದಾಯ ರೂ. 3.72 ಲಕ್ಷಗಳಾದರೆ, 1951-52 ರ ನಂತರ ಅದು ನಾಲ್ಕು ಲಕ್ಷದ ಗಡಿದಾಟಿ 1954-55 ರ ವಸೂಲಾತಿ ರೂ. 4.81 ಲಕ್ಷ ಆಗಿತ್ತು. ಜಿಲ್ಲಾ ಬೋರ್ಡ್ ಅಸ್ತಿತ್ವಕ್ಕೆ ಬಂದಾಗ (1901) ಧೂಳಿಬತ್ತ, ನೇಗಿಲತೆರ ರದ್ದು ಮಾಡಿ 1901-02 ರಿಂದ ಜಿಲ್ಲಾ ಫಂಡ್ ಸೆಸ್ ಎಂಬ ಕಿರು ತೆರಿಗೆಯನ್ನು ವಸೂಲು ಮಾಡಲು ಆರಂಭಿಸಿದರು.

ಕಂದಾಯವನ್ನು 1899ರ ನಿಯಮದಂತೆ ಮೂರು ಕಂತು ಗಳಲ್ಲಿ ಪಾವತಿ ಮಾಡಲು ಅವಕಾಶವಾಗಿ ಕಾಲುಭಾಗ ಜನವರಿ ಯಲ್ಲಿ ಎಂಟನೇಯ ಮೂರಂಶ ಫೆಬ್ರವರಿಯಲ್ಲಿ ಹಾಗೂ ಉಳಿದ ಭಾಗ ಮಾರ್ಚ್‌ನಲ್ಲಿ ಪಾವತಿ ಮಾಡುತ್ತಿದ್ದರು. ವೈಶಾಖದ (ಬೇಸಿಗೆ) ಬೆಳೆ ಬೆಳೆಯುವಲ್ಲಿ ಸೆಪ್ಟಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್‌ಗಳಲ್ಲಿ ನಾಲ್ಕು ಸಮಾನ ಕಂತಿನಲ್ಲಿ ಪಾವತಿ ಮಾಡಬಹುದಾಗಿತ್ತು. ಈ 1899 ರ ನಿಯಮದಂತೆ ಬೆಳೆಗೆ ಹಾನಿ ಆದಾಗ ಆಯಾ ವರ್ಷದ ಮಟ್ಟಿಗೆ ಕಂದಾಯದಲ್ಲಿ ರಿಯಾಯತಿ ನೀಡಲಾಗಿದ್ದು ಕಾಫಿ ತೋಟ ಗಳಿಗೂ ಈ ಸವಲತ್ತು ವಿಸ್ತರಿಸಲಾಗಿತ್ತು.

1950-56 ರ ನಡುವೆ ಕೊಡಗಿನಲ್ಲಿ ಕಂದಾಯದ ಪುನರ್ಪರಿಷ್ಕರಣ ಕಾರ್ಯಕ್ರಮ ನಡೆಸಿದಾಗ 1956 ರಲ್ಲಿ ಕಂದಾಯಕ್ಕೆ ಒಳಪಟ್ಟ ಭೂಮಿ ಎಕರೆಗಳಲ್ಲಿ ಹೀಗಿತ್ತು: ತರಿಭೂಮಿ 1,03,647 ; ಕಾಫಿ ತೋಟ 94,184 ; ಕಿತ್ತಳೆ ತೋಟ 28,203 ; ಏಲಕ್ಕಿ 13,904 ; ಖುಷ್ಕಿ ಭೂಮಿ 20,900 ; ಏಲಕ್ಕಿ 479 ; ತೆಂಗಿನತೋಟ 475 ; ಅಡಿಕೆ ತೋಟ 531 ; ರಬ್ಬರ್ 3,943 ; ಚಹಾ ತೋಟ 1,222 ; ಮಾವು ಮೂರು ಎಕ್ರೆ ; ಬಾಣೆ 2,02,590 ; ಪೈಸಾರಿ (ಖರಾಬ್ ; ಕೃಷಿಯೋಗ್ಯವಲ್ಲದ ಬೀಳು ಭೂಮಿ) 4,32,254. ರಬ್ಬರ್ ತೋಟಗಳನ್ನು ಈ ಶತಮಾನದಲ್ಲೇ ಆರಂಭಿಸಿದ್ದರೂ ಅವುಗಳಿಗೆ ಕಂದಾಯ ಆಕರಿಸಿರಲಿಲ್ಲವಷ್ಟೇ ಅಲ್ಲ 1909 ರ ಪರಿಪತ್ರ ಒಂದರಂತೆ ರಬ್ಬರ್ ಕೃಷಿ ಆರಂಭಿಸಿದ ಮೊದಲ ಎಂಟು ವರ್ಷಗಳಲ್ಲಿ ಅಂಥ ಭೂಮಿಗಳಿಗೆ ಕಂದಾಯ ಇಲ್ಲವೆಂದು ತಿಳಿಸಲಾಗಿತ್ತು. ಎಂಟು ವರ್ಷದ ನಂತರ ಎಕರೆಗೆ ಕಂದಾಯ ರೂ. ಎರಡು ಎಂದು ನಿಗದಿಮಾಡಲಾಯಿತು. 1909 ರಲ್ಲಿ ಈ ಪರಿಪತ್ರ ಹೊರಡಿಸಿದಾಗ 1,182 ಎಕರೆ ಪ್ರದೇಶದಲ್ಲಿ ಇದ್ದ ರಬ್ಬರ್ ಕೃಷಿ ಮೇಲೆ ಕಂಡಂತೆ 1956ರ ಹೊತ್ತಿಗೆ 3,943 ಎಕರೆಗೆ ತಲುಪಿತ್ತು.

## ಜಮ್ಮ ಭೂಮಿ : ಒಂದು ಟಿಪ್ಪಣಿ

1964ರಲ್ಲಿ ಗೊತ್ತುಮಾಡಿದ ಕಂದಾಯ ನಿಷ್ಕರ್ಷೆ (ಭೂವ್ಯವಸ್ಥೆ; ಸೆಟ್ಲ್‌ಮೆಂಟ್)ಯನ್ನು ಪರಿಶೀಲಿಸುವ ಮೊದಲು ಕರ್ನಾಟಕ ಜಿಲ್ಲೆಗಳಲ್ಲೇ ಕೊಡಗಿಗೆ ವಿಶಿಷ್ಟವಾದ ಜಮ್ಮ ಹಿಡುವಳಿ ಹಕ್ಕಿನ ವಿಚಾರ ಸ್ವಲ್ಪ ವಿವರವಾಗಿ ಇಲ್ಲಿ ಹೇಳಿದೆ. ಈ ಕೆಳಗಿನ 11 ಪ್ಯಾರಾಗ್ರಾಫ್‌ಗಳಲ್ಲಿ ಇರುವ ಈ ಮಾಹಿತಿ ಯನ್ನು ಒದಗಿಸಿದವರು ಕೊಡಗಿನ ಗಣ್ಯ ನಿವೃತ್ತ ಅಧಿಕಾರಿ ಗಳಾದ ಶ್ರೀ ಎಂ. ಎನ್. ಗುಂಡೂರಾವ್ ಅವರು.

ಜಮ್ಮ ತರೀಭೂಮಿ ಮತ್ತು ಅದಕ್ಕೆ ಹೊಂದಿರುವ ಬಾಣೆ ಗಳನ್ನು ದತ್ತಿಯಾಗಿ ನೀಡಿದವರು ಲಿಂಗರಾಜ ಮತ್ತು ವೀರ ರಾಜ. ಈ ದಾನಗಳ 'ಸನದು ನಿರೂಪ'ಗಳು ಇನ್ನೂ ಕೆಲವು ಮನೆತನಗಳಲ್ಲಿದ್ದು ಅವನ್ನು ಪರಿಶೀಲಿಸಿದಾಗ ದಾನ ಪಡೆದವನ ತಾಬೆಯಲ್ಲಿದ್ದು ಅವನ ಉಪಭೋಗದಲ್ಲಿ ಆಗಲೇ ಇದ್ದ ತರಿ ಭೂಮಿ ಮತ್ತು ಅದಕ್ಕೆ ಹೊಂದಿದ್ದ ಬಾಣೆಗಳನ್ನು ಅಂಥ ವ್ಯಕ್ತಿಯ ವಿನಂತಿಯಂತೆ ರಾಜನು ಅವನಿಗೆ ಜಮ್ಮವಾಗಿ ನೀಡಿದ್ದ ಎಂದು ತಿಳಿದು ಬರುತ್ತದೆ. ಯಾರದೇ ತಾಬೆಯಲ್ಲಿ ಇರದ ಸರಕಾರೀ ಭೂಮಿಯನ್ನು ನೇರವಾಗಿ ದಾನ ಮಾಡಿದ ಪ್ರಸಂಗಗಳೂ ಇರಬಹುದು. ಆದರೆ ಈ ರೀತಿಯ ಸನದು ನಿರೂಪಗಳು ಸಿಕ್ಕಿಲ್ಲ. 100 ಬಟ್ಟಿ ಭೂಮಿಗೆ (ಸುಮಾರು ಮೂರು ಎಕರೆ) ಪೂರ್ತಿ ಕಂದಾಯ 10 ರಿಂದ 12 ರೂ. ಇದ್ದಲ್ಲಿ ಜಮ್ಮ ಭೂಮಿಯಲ್ಲಿ ಈ ಆಕರಣೆ ಅದರ ಅರ್ಧ ವಾಗಿತ್ತು. ಆದರೆ ಇದಕ್ಕೆ ಇರುವ ಷರತ್ತೆಂದರೆ 'ಸ್ವಾಮಿ ಕಾರ್ಯ'ವನ್ನು ಪ್ರತಿಫಲ ನಿರೀಕ್ಷಿಸದೆ ಮಾಡಬೇಕಾಗಿತ್ತೆಂಬುದು ಸ್ಪಷ್ಟ. ದಾನ ಪಡೆದವನ ವಿನಂತಿಯಂತೆ ಬ್ರಿಟಿಷರೂ 'ಸಾಗು'

ಭೂಮಿಯನ್ನು (ಬಹುಶಃ ಅಷ್ಟೇ ಕ್ಷೇತ್ರ) ಪರಿವರ್ತಿಸಿ ಜಮ್ಮಾ ಭೂಮಿಯಾಗಿ ಕೊಟ್ಟದ್ದು ರಾಜರು ಹೇರಿದ್ದ ಷರತ್ತುಗಳನ್ನೇ ಹೇರಿದ್ದರು. ಆದರೆ ಕಂದಾಯ ವಸೂಲಿ ಕುಂದುತ್ತಿರುವುದನ್ನು ಗಮನಿಸಿ ಇಂಥ ದತ್ತಿಕೊಡುವ ವಿಧಾನವನ್ನು 1884 ರಿಂದ ನಿಲ್ಲಿಸಿದರು.

ಜಮ್ಮಾ ಅಥವಾ ಸಾಗು ಭೂಮಿಗಳನ್ನು ಆ ಭೂಮಿಗಳನ್ನು ಹೊಂದಿದ್ದವರಿಗೆ ಕೊಡುಗೆಯಾಗಿ ನೀಡುವುದರ ಜೊತೆ, ಒಂದು ತುಣುಕು ಜಮ್ಮಾ ಭೂಮಿಯನ್ನು ಅದೇ ಗಾತ್ರದ ಸಾಗು ಭೂಮಿಯ ಜೊತೆ ವಿನಿಮಯ ಮಾಡಲು ಅವಕಾಶವಿತ್ತು. ಆದರೆ ಸರಕಾರೀ ಅಧಿಕಾರಿಯೊಬ್ಬರ ಸಮಕ್ಷಮದಲ್ಲಿ ಈ ಭೂಮಿಗಳ ಒಂದು ಹಿಡಿ ಮಣ್ಣನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವ 'ಗಟ್ಟಿ' ಎಂಬ ವಿಧಿಯನ್ನು ಇದಕ್ಕಾಗಿ ನಡೆಸಬೇಕಾಗಿತ್ತು.

ಅವಶ್ಯಕ ವಿವರಣೆಗಳೊಂದಿಗೆ ಒಂದು ಜಮ್ಮಾ ನಿರೂಪದ ಮಾದರಿಯನ್ನು ಇಲ್ಲಿ ಕೊಟ್ಟಿದೆ. "ಸನ್ನಿಧಾನಕ್ಕೆ ಬಂದು ನಾನು ಮಾಡುವ (ತರಿ) ಭೂಮಿಯು ಜಂಮಕ್ಕೆ ಅಪ್ಪಣೆ ಆಗಬೇಕೆಂಬುದಾಗಿ ಅರಿಕೆ ಮಾಡಿಕೊಂಡದ್ದರಿಂದ ಅಪ್ಪಣೆ ಕೊಡಿಸುವುದು." ಇದರ ನಂತರ ಸಂಬಂಧಿಸಿದ ತರಿಭೂಮಿಯ ಸ್ಥಳೀಯ ಹೆಸರು, ಕ್ಷೇತ್ರ ಮತ್ತು ಕೊಡಬೇಕಾದ ಕಂದಾಯ ಮೊದಲಾದ ವಿವರಗಳು "ಈ ಶಿಸ್ತಿಗೆ ಸೇರಿದ ಬಾಣೆ, ಬಾರಿಕೆ (ಬಾರಿಕೆ ಎಂದರೆ ತರಿಭೂಮಿಯಾಗಿ ಪರಿವರ್ತನೆ ಹೊಂದಲು ಸಾಧ್ಯವಿರುವ ಭೂಮಿ) ವಿವರ". ಬಾಣೆಗಳಲ್ಲಿ ಕೃಷಿ ಅಥವಾ ಉತ್ಪನ್ನ ಇರದಿದ್ದರಿಂದ ಅವುಗಳ ಮೇಲೆ ಕಂದಾಯ ಇರಲಿಲ್ಲ. ಅಲ್ಲಿ ಮನೆ ಮತ್ತು ಅದರ ಸುತ್ತ ಬಾಳೆ ಗಿಡಗಳು ಹಾಗೂ ತರಕಾರಿ ಗಿಡಗಳು (ತೋಟ ತುಡಿಕೆ) ಇರುತ್ತಿತ್ತು. "ಈ ಶಿಸ್ತಿಗೆ ಸೇರಿದ ಬಾಣೆ ಹಿತ್ಲು ಮನೆಗಳ ಸಹ (ತೋಟ ತುಡಿಕೆ) ನಿನಗೆ ಅರಮನೆಯಿಂದ ಗಟ್ಟಿ ಎನಿಸಿ ಜಂಮಕ್ಕೆ ಅಪ್ಪಣೆ ಕೊಡಿಸಿರುವುದರಿಂದ, ಇದನ್ನು ನಿನ್ನ ಪುತ್ರಪೌತ್ರ ಪಾರಂಪರ್ಯವಾಗಿ ಜಂಮವಾಗಿ ಅನುಭವಿಸಿಕೊಂಡು ...... ಸದರಿ ನಾಣ್ಯದ ಅರವಾಸಿಯಾಗಿ ಅಪ್ಪಣೆ ದಯಪಾಲಿಸ್ತ...... ಅರಮನೆಗೆ ಬರತಕ್ಕ.... ನಾಣ್ಯಪೂರ್ತವನ್ನು ಕಾಲಕಾಲ ಹಾವತಿಯಲ್ಲಿ ಒಪ್ಪಿಸುತ್ತಾ, ಸ್ವಾಮಿ ಕಾರ್ಯ ಮುಖ್ಯವಾಗಿ ನಡೆದುಕೊಳ್ಳುವುದಾಗಿ ಎಂಬ ಸನ್ನದ್ ನಿರೂಪಕ್ಕೆ ಅಪ್ಪಣೆ ಪ್ರಕಾರ...." ಇದರ ನಂತರ ತಾರೀಕು ಹಾಗೂ ರಾಜನ ದಸ್ಕತು ಇದೆ.

ಸನದ್ ನಿರೂಪದಲ್ಲಿ "ಸ್ವಾಮಿ ಕಾರ್ಯ"ವನ್ನು ಖಚಿತವಾಗಿ ವಿವರಿಸಿಲ್ಲ. ರಾಜರ ನಿರಂಕುಶ ಆಡಳಿತವನ್ನು ಗಮನಿಸಿ ಜಮ್ಮಾದ ರೈತರನ್ನು ಯಾವುದೇ ಕೆಲಸಕ್ಕೆ ರಾಜನು ಕಳುಹಿಸಬಹುದಾಗಿತ್ತೆಂದು ಊಹಿಸುವುದು ತಪ್ಪಾಗಲಿಕ್ಕಿಲ್ಲ. ಆದರೆ 1871ರಲ್ಲಿ ಕರ್ನಲ್ ಕೋಲ್ ಹೇಳುವಂತೆ "100 ಬಟ್ಟಿ (ಅಥವಾ ಸುಮಾರು ಮೂರು ಎಕ್ರೆ) ಭೂಮಿ ಹಾಗೂ ಅದಕ್ಕೆ ಸಂಬಂಧಿಸಿದ ಬಾಣೆ ಮತ್ತು ಬರಿಕೆ (ಇವುಗಳಿಗೆ ಕಂದಾಯ ಇಲ್ಲ) ಗೆ 5 ರೂಗಳ ಹಗುರವಾದ ಕಂದಾಯವನ್ನು ಮೂಲತಃ ಗೊತ್ತು ಮಾಡಿದ್ದು ಸೇನೆಯಲ್ಲಿ ಹಾಗೂ ಸರ್ಕಾರದಲ್ಲಿ ಸೇವೆ ಸಲ್ಲಿಸಬೇಕೆಂಬ ಉದ್ದೇಶದಿಂದ. ಹೊರಗಿನಿಂದ ಆಗುವ ಆಕ್ರಮಣ ಅಥವಾ ಆಂತರಿಕ ದಂಗೆಗಳ ಸಂದರ್ಭದಲ್ಲಿ ಅವುಗಳ ನಿವಾರಣೆ ಮಾಡಲು ಜಮ್ಮಾ ರೈತರು ಈಗಲೂ ಬದ್ಧರು ; ಅಂತೆಯೇ ಶಾಂತಿಯ ಕಾಲದಲ್ಲಿ ಪೋಲಿಸ್ ಕಾರ್ಯ, ಖಜಾನೆ ಕಾವಲು ಮತ್ತು ಅಂಗರಕ್ಷಕರ ಕೆಲಸಗಳಿಗೂ ಅವರು ಬಾಧ್ಯರು". ಆದರೆ ಬ್ರಿಟಿಷರು ಆರಂಭದಲ್ಲಿ ಖಜಾನೆ ಕಾವಲು ಮತ್ತು ಅಂಗರಕ್ಷಕರ ಕೆಲಸಕ್ಕೆ ಅವರನ್ನು ಕರೆಯುತ್ತಿದ್ದು ಕಾಲಕ್ರಮದಲ್ಲಿ ಈ ಚಾಕರಿಯನ್ನು ಕೂಡ ನಡೆಸಬೇಕೆಂದು ಒತ್ತಾಯಿಸಲಿಲ್ಲ. 1924ರಲ್ಲಿ ಕೊಡಗು ನ್ಯಾಯ ವಿಧಾಯಕ ಮಂಡಳಿಯಲ್ಲಿ "ಹಿಟ್ಟಿ ಬಿಟ್ಟಿ ಚಾಕರಿ"ಯನ್ನು ರದ್ದು ಮಾಡಬೇಕೆಂದು ಠರಾವಾಯಿತು. ಖಜಾನೆಗೆ ಕಾವಲು ಒದಗಿಸುವ ಪದ್ಧತಿಯು 1928ರ ನಂತರ ಮುಂದುವರಿಯಲಿಲ್ಲ. ಸದ್ಯಕ್ಕೆ ಜಮ್ಮಾ ಭೂಮಿಗಳ ಮೇಲೆ ನಿಜವಾಗಿ ಇರುವ ಕಟ್ಟುನಿಟ್ಟಿನ ಇತಿಮಿತಿಯೆಂದರೆ ಅವರು ತಮ್ಮ ಜಮ್ಮಾದ ಭೂಮಿಯನ್ನು ಸರಕಾರದ ಅನುಮತಿ ಇಲ್ಲದೆ ಗೇಣಿಗೆ ಕೊಡಬಾರದು ಹಾಗೂ ಜಮ್ಮಾ ಜಮೀನನ್ನು ಸರಕಾರದ ಅನುಮತಿ ಪಡೆಯದೆ ಮಾರಬಾರದು, ಮತ್ತು ಸರಕಾರಕ್ಕೆ ಮಾರಾಟದ ದರದ ಶೇಕಡ 21ನ್ನು 'ನಜರಾನಾ' (ಕಾಣಿಕೆ) ಎಂದು ಒಪ್ಪಿಸಬೇಕು. ಜಮ್ಮಾ ಭೂಮಿಯನ್ನು ಕುಟುಂಬ ಸದಸ್ಯರಲ್ಲಿ ಪಾಲು ಮಾಡಿದರೆ ಅದನ್ನು ನೋಂದಣಿ ಮಾಡುವುದರ ಮೇಲೆ ಪ್ರತಿಬಂಧವಿದೆ, ಆದರೆ ನೋಂದಣಿಯಾಗದ ಕೌಟುಂಬಿಕ ಆಸ್ತಿ ವಿಭಜನೆಗಳು ನಡೆದಿದ್ದು ಇದನ್ನು ಈವರೆಗೂ ಪ್ರಶ್ನಿಸಲಾಗಿಲ್ಲ.

ಈ ಇತಿಮಿತಿಗಳನ್ನು ಜಾರಿಯಲ್ಲಿರುವುದರ ನಿಜವಾದ ಉದ್ದೇಶವನ್ನು ಭಾರತ ಸರಕಾರಕ್ಕೆ ಬರೆಯಲಾದ 12-9-1865ರ ಪತ್ರದಲ್ಲಿ ಪರಿಣಾಮಕಾರಿಯಾಗಿ ವಿವರಿಸಿದ್ದು ಭಾರತ ಸರಕಾರವೂ ಇದನ್ನು ಒಪ್ಪಿಕೊಂಡಿದೆ. "ಈಗ ದುರ್ಬಲರಾದ ಕೊಡವರು ತಮ್ಮ ಜಮ್ಮಾ ಭೂಮಿಯನ್ನು ಹಸ್ತಾಂತರ ಮಾಡಲು ಬಯಸಬಹುದು, ಆದರೆ ಈವರೆಗೆ ತಡೆ ಹಿಡಿದಂತೆ ಅಂಥ ಕ್ರಮಕ್ಕೆ ಅನುಮತಿಯನ್ನು ತಡೆಯಬೇಕು. ಏಕೆಂದರೆ ಇವರಿಂದ ಕೊಡವರ ರಾಷ್ಟ್ರೀಯತೆಗೆ

ಕಂಂದಾಗಬಹುದು. ಅಂಥ ಭೂಮಿಗಳು ಐರೋಪ್ಯರ ಅಥವಾ ಮೈಸೂರು ಮೂಲದ ಜನರ ಕೈಗೆ ಹೋದಲ್ಲಿ ಯಾವ ವಿಧದ ಸೇವೆಯನ್ನು ಸಲ್ಲಿಸಬೇಕೆಂಬ ಬಾಧ್ಯತೆಯು ಈ ಭೂಮಿ ಹಕ್ಕು ನೀಡುವಿಕೆಯ ಷರತ್ತಾಗಿತ್ತೋ ಅದು ರದ್ದಾಗಿ ಹೊಸ ಭೂಮಾಲೀಕರಿಂದ ಕೊಡವರು ಸಲ್ಲಿಸುತ್ತಿದ್ದ ಸೇವೆಯನ್ನು ಪಡೆಯುವುದು ಸಾಧ್ಯವಾಗಲಿಕ್ಕಿಲ್ಲ."

ಈ ಮೇಲಿನ ವರದಿಯಿಂದ ಸ್ಪಷ್ಟವಾಗುವ ಅಂಶವೆಂದರೆ ಮಾರಾಟದ ಮೇಲೆ ಪ್ರತಿಬಂಧ ಹೇರಿದ್ದರ ಉದ್ದೇಶವೆಂದರೆ ಜಮ್ಮಭೂಮಿ ಹೊಂದಿರುವವರು ತಮ್ಮ ಹಕ್ಕನ್ನು ಉಳಿಸಿಕೊಂಡು ಆ ಭೂಮಿಗಳನ್ನು ತಮ್ಮ ಮನೆತನಗಳಲ್ಲಿ ಕಾಯಂ ಆಗಿ ಹೊಂದಿರಬೇಕೆಂಬುದು ಹಾಗೂ ಅವರು ಸಲ್ಲಿಸಬೇಕಾಗಿರುವ ಸೇವೆಯು ಸರಕಾರಕ್ಕೆ ಸಲ್ಲುವ ಸನ್ನಿವೇಶವಿರಬೇಕೆಂಬುದು ಸ್ಪಷ್ಟವಾಗುತ್ತದೆ. ಮೇಲಣ ಅವಳಿ ಉದ್ದೇಶಗಳ ಪೂರೈಕೆಯಾಗಬೇಕೆಂದೇ 1899ರ ಕೊಡಗು ಭೂಕಂದಾಯ ವಿನಿಮಯ (ರೆಗ್ಯುಲೇಶನ್)ದ 45ನೇಯ ಪ್ರಕರಣದಂತೆ ಜಮ್ಮ ಭೂಮಿಗಳ ಮಾರಾಟ ಮತ್ತು ಗೇಣಿಗೆ ಕೊಡುವ ವಿಚಾರಗಳನ್ನು ಪ್ರತಿಬಂಧಿಸುವ ಕ್ರಮವನ್ನು ಕೈಕೊಂಡಿರಬೇಕು.

ಕರ್ನಾಟಕ ಭೂಕಂದಾಯ ಅಧಿನಿಯಮವು 1974ರಲ್ಲಿ ಜಾರಿಗೆ ಬಂದ ಮೇಲೆ, ಈ ಅಧಿನಿಯಮದ 202ನೇಯ ಪ್ರಕರಣವನ್ನು ಆಧರಿಸಿ ಜಮ್ಮ ತರೀಭೂಮಿ ಮತ್ತು ಬಾಣೆಗಳನ್ನು ಮಾರಾಟಪತ್ರ ನೋಂದಾಯಿಸಬೇಕಾದ ನಿಯಮವನ್ನು ಗಮನಿಸದೆ ಹಸ್ತಾಂತರ ಮಾಡಿದ ಸಾವಿರಾರು ಪ್ರಕರಣಗಳಾಗಿವೆ. ಖರೀದಿದಾರರು ಈ ಆಸ್ತಿಯ ಸ್ವಾಧೀನತೆ ಮತ್ತು ಉಪ ಭೋಗವನ್ನು ಮಾಡುತ್ತಿದ್ದು ಸರಕಾರವು ಖರೀದಿದಾರರ ಹೆಸರಲ್ಲಿ ವರ್ಗಾವಣೆಯನ್ನು ನೋಂದಾಯಿಸಲು ನಿರಾಕರಿಸಿದೆ. ಸರಕಾರ ಈ ಬಗ್ಗೆ ಕೈಕೊಳ್ಳುವ ಕ್ರಮವನ್ನು ಜನ ನಿರೀಕ್ಷಿಸುತ್ತಿದ್ದಾರೆ.

ಜಮ್ಮ ಹಕ್ಕು ಪಡೆದವರಿಗೆ ಭಾರತೀಯ ಶಸ್ತ್ರಾಸ್ತ್ರ ಅಧಿನಿಯಮಗಳಂತೆ ಕೆಲವೊಂದು ರಿಯಾಯತಿಗಳಿವೆ.

ಕಂದಾಯ ನಿಷ್ಕರ್ಷೆಯ ವರದಿ (ಸೆಟ್ಲ್‌ಮೆಂಟ್ ರಿಪೋರ್ಟ್)ಗಳಲ್ಲಿ ಬಾಣೆ ಜಮೀನನ್ನು (ತರಿ ಜಮೀನಿಗೆ) ಹತ್ತಿಕೊಂಡಿರುವ ಅರಣ್ಯ ಭೂಮಿಯಾಗಿದ್ದು ಮೇವು, ಸೊಪ್ಪು ಗೊಬ್ಬರ, ಸೌದೆ ಇವುಗಳಿಗಾಗಿ ಇದು ಅವಶ್ಯವಾಗಿದೆ ಎಂದು ಪರಿಭಾಷೆ ಮಾಡಲಾಗಿದೆ. ರಾಜರ ಕಾಲದಲ್ಲಿ ಬಂಜರಾಗಿದ್ದು ಯಾವುದೇ ಬೆಳೆ ಇಲ್ಲದ ಮತ್ತು ಯಾವುದೇ ಆದಾಯವನ್ನು ತಾರದ ಹಾಗೂ ಕಂದಾಯ ತೆರಲಾರದ ಈ ಭೂಮಿಯನ್ನು ರಾಜರ ಕಾಲದ ಗಡಿಕಲ್ಲುಗಳಿಂದ ಗುರುತಿಸಲಾಗಿದ್ದು ಅವುಗಳನ್ನು ಇನ್ನಾವ ರೀತಿಯಲ್ಲೂ ವರ್ಣಿಸುವುದು ಆಗ ಸಾಧ್ಯವಿರಲಿಲ್ಲ. ಆದರೆ ಕಾಫಿ ಬೆಳೆ ಆರಂಭವಾದ ಮೇಲೆ ಇಂಥ ಭೂಮಿಗಳ ಮೇಲೆ ಕಂದಾಯ ಆಕರಣೆ ಮಾಡುವ ಪ್ರಶ್ನೆ ಬಂದೇ ಬಂತು.

ಚೀಫ್ ಕಮೀಷನರ್‌ರವರ ನಡವಳಿಕೆಯಲ್ಲಿ ಈ ಬಗ್ಗೆ 21-5-1886ರಂದು ಬಾಣೆಗಳನ್ನು ಮುಂದೆ ಪ್ರದಾನ ಮಾಡುವ ವಿಚಾರದಲ್ಲಿ ನಿಯಮಗಳನ್ನು ಮೊದಲ ಬಾರಿ ಮಾಡಲಾಯಿತು. ಏಕೆಂದರೆ ಕಾಫಿ ಬೆಳೆಗಾಗಿ ಬಾಣೆ ಭೂಮಿಗೆ ಹೆಚ್ಚಿನ ಬೇಡಿಕೆ ಬಂತು. ಈ ನಿಯಮಗಳು ಹಲವು ಇತಿಮಿತಿಗಳನ್ನು ಒಳಗೊಂಡಿವೆ. ರಾಜರ ಕಾಲದಿಂದಲೂ ಅಸ್ತಿತ್ವದಲ್ಲಿದ್ದು 21.5.1886ರಲ್ಲಿ ಇರತಕ್ಕ ತರಿ ಮತ್ತು ಸಾಗು ಜಮೀನಿನ ಬಾಣೆಗಳನ್ನು ಪ್ರತ್ಯೇಕವಾಗಿ ಪರಿಗಣಿಸಲಾಯಿತು. 1846ರ ನಂತರ ಜಮ್ಮ ಮತ್ತು ಸಾಗುಬಾಣೆಗಳಲ್ಲಿ ಕಾಫಿಬೆಳೆ ಆರಂಭವಾಗಿ ಅದರ ಪ್ರಮಾಣವು ಹೆಚ್ಚುತ್ತಾ ಬಂದಂತೆ ಕಂದಾಯ ಆಕರಣೆ ಇರದಿದ್ದ ಬಾಣೆಗಳನ್ನು ಆಕರಣೆಗೆ ಒಳಪಡಿಸುವ ಪ್ರಶ್ನೆ ಸಹಜವಾಗಿ ಬಂತು. 1886ರ ವರೆಗೂ ಒಂದು ರೈತನ ಮನೆಯ ಸುತ್ತಮುತ್ತಲ ಹಿತ್ತಲಕೃಷಿ ಅಲ್ಪ ಪ್ರಮಾಣದ್ದೂ ಅಷ್ಟೊಂದು ಮಹತ್ವದಲ್ಲದ್ದೂ ಆಗಿದ್ದುದರಿಂದ ಅದನ್ನು ಆಕರಣೆಗೆ ಒಳಪಡಿಸಿರಲಿಲ್ಲ. ತಮ್ಮ 26.2.1885 ಮತ್ತು 15.7.1896ರ ನಡವಳಿಕೆಗಳಲ್ಲಿ ಹಸ್ತಾಂತರಿಸದೇ ಇರುವ ಜಮ್ಮ ಮತ್ತು ಸಾಗು ತರಿ ಜಮೀನು ಹೊಂದಿರುವ ಬಾಣೆ ಜಮೀನುಗಳಿಗೆ ಕಂದಾಯ ನಿಷ್ಕರ್ಷೆ ಮಾಡುವ ವಿಧಾನವನ್ನು ಈ ರೀತಿ ಗೊತ್ತುಪಡಿಸಿದರು. "ಜಮ್ಮ ಮತ್ತು ಸಾಗು ಬಾಣೆಗಳಲ್ಲಿ ಹತ್ತು ಎಕರೆವರೆಗಿನ ಕಾಫಿ ತೋಟಗಳಿಗೆ ಆಕರಣೆಯಿಂದ ವಿನಾಯತಿ ನೀಡಬೇಕು. ಹತ್ತು ಎಕರೆಗೂ ಹೆಚ್ಚಿನ ಇಂಥ ಕಾಫಿ ತೋಟಗಳನ್ನು ಪೂರ್ಣ ದರದಲ್ಲಿ ಕಂದಾಯ ಆಕರಣೆಗೆ ಒಳಪಡಿಸಬೇಕು". ಈ ನಿರ್ಣಯವನ್ನು 1899ರ ಕೊಡಗು ಭೂಮಿ ಮತ್ತು ಕಂದಾಯ ವಿನಿಯಮದಲ್ಲೂ ಸೇರ್ಪಡೆ ಮಾಡಲಾಯಿತು.

1886ರ ವರೆಗೆ ಇದ್ದ ಜಮ್ಮ ಮತ್ತು ಸಾಗು ಬಾಣೆಗಳು ಕಂದಾಯ ನಿಷ್ಕರ್ಷೆಯ ಕಾಲದಲ್ಲಿ ಹತ್ತು ಎಕರೆಯ ಪ್ರದೇಶದ ವರೆಗೆ ಇವುಗಳು ಕೃಷಿಗೆ ಒಳಪಟ್ಟಿದ್ದರೆ ಅವುಗಳ ಮೇಲೆ ಕಂದಾಯ ಆಕರಣೆ ಮಾಡದೆ ಬಿಟ್ಟರು. ಆದರೆ ಹೊಸದಾಗಿ ಆಮೇಲೆ ಸ್ವಾಧೀನ ಮಾಡಿಕೊಂಡ ಅಥವಾ ಖರೀದಿಸಿದ ಬಾಣೆ

ಗಳನ್ನು ಇದರಿಂದ ಪ್ರತ್ಯೇಕಿಸಿ, 21-5-1886ರ ವರೆಗೆ ಸಾಗುವಳಿ ಮಾಡಿದ್ದ ಜಮ್ಮ ಅಥವಾ ಸಾಗುಬಾಣೆಗಳನ್ನು "ವಿಶೇಷ ಹಕ್ಕಿನ (ಸ್ಪೆಶಲ್ ಪ್ರಿವಿಲೆಜ್) ಜಮ್ಮಾ ಬಾಣೆ ಅಥವಾ ವಿಶೇಷ ಹಕ್ಕಿನ ಸಾಗು ಬಾಣೆ" ಎಂದು ಉಲ್ಲೇಖಿಸಬೇಕೆಂದು ಕಂದಾಯ ನಿಷ್ಕರ್ಷೆಯ ಅಧಿಕಾರಿಯು ಆದೇಶ ನೀಡಲು ಈ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಲಾಯಿತು. ಇಂದಿಗೂ ಜಮಾ ಬಂದಿ ದಾಖಲೆಗಳಲ್ಲಿ ಇಂಥ ಭೂಮಿಗಳನ್ನು ಅದೇ ರೀತಿ ಉಲ್ಲೇಖಿಸುತ್ತ ಬಂದಿದ್ದಾರೆ. ಪ್ರತೀ ವರ್ಗಕ್ಕೆ 10 ಎಕರೆಯಂತೆ ಕಂದಾಯದಿಂದ ವಿನಾಯತಿ ಪಡೆದ ಭೂಮಿಯ ವ್ಯವಸ್ಥೆಯನ್ನು 1974 ಕಂದಾಯ ಪುನರ್ ವಿಮರ್ಶೆಯ ವರೆಗೆ ಮುಂದುವರಿಸಲಾಗಿತ್ತು. ಆದರೆ ಆ ವರ್ಷ ಅಂಥಹಭೂಮಿಗಳನ್ನು ಕಂದಾಯಕ್ಕೆ ಒಳಪಡಿಸಿ 'ಜಮಾ ಪೂರ್ವದ ಬಾಣೆ' ಮತ್ತು 'ಸಾಗುಪೂರ್ವದ ಬಾಣೆ' ಎಂದು ಕಂದಾಯ ದಾಖಲೆಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಯಿತು. ಈ ಜಮ್ಮ ಭೂಮಿಗಳ ಭವಿತವ್ಯದ ವಿಚಾರ ಸರಕಾರದ ಪರಿಶೀಲನೆಯಲ್ಲಿದೆ.

ಜಮ್ಮ ಬಾಣೆಗಳಲ್ಲಿನ ಮರಗಳ ಮೇಲೆ ಜಮ್ಮ ಭೂಮಿಯ ಒಡೆಯನ ಪೂರ್ತಿ ಹಕ್ಕನ್ನು ಸರಕಾರವು ಎಂದೂ ಮಾನ್ಯ ಮಾಡಿರಲಿಲ್ಲ. ಆದರೆ ವರ್ಗದಾರನ ಖಾಸಗೀ ಉಪಯೋಗಕ್ಕೆ ಬೇಕಾಗುವ ಮರಗಳನ್ನು ಬಳಸುವ ಹಕ್ಕನ್ನು ಹಿಂದಿನಿಂದ ಈಗಿನವರೆಗೂ ಮಾನ್ಯ ಮಾಡಲಾಗಿದೆ. ವರ್ಗದಾರನು ಬಾಣೆಯಲ್ಲಿ ಬೆಳೆದ ಮರಗಳನ್ನು ರಕ್ಷಿಸುತ್ತ ಬಂದುದರಿಂದ ಸರಕಾರಕ್ಕೆ ಅರಣ್ಯ ರಕ್ಷಣೆಯ ಜವಾಬ್ದಾರಿ ಹಾಗೂ ವೆಚ್ಚ ಅಷ್ಟರ ಮಟ್ಟಿಗೆ ತಗ್ಗುವುದೆಂಬ ಸಂಗತಿಯನ್ನು ಗಮನಿಸಿ ಇಲ್ಲಿನ ಮರಮಟ್ಟುಗಳನ್ನು ಅವು ಪೂರ್ತಿ ಬೆಳೆದು ಅವುಗಳನ್ನು ಮಾರಬೇಕಾದಾಗ ಮಾರುಕಟ್ಟೆಯ ಬೆಲೆಗೂ ಕಡಿಮೆ ದರ ಪಾವತಿ ಮಾಡಿ ವರ್ಗದಾರನಿಗೆ ಅವುಗಳನ್ನು ಕಡಿದುಕೊಳ್ಳುವ ಅವಕಾಶವಿತ್ತು. ಇಂಥ ರಿಯಾಯತಿ ದರವನ್ನು ಕಾಲಕಾಲಕ್ಕೆ ಗೊತ್ತುಮಾಡುವ ತೊಂದರೆಗಳನ್ನು ತಪ್ಪಿಸಲು ಸರಕಾರವು ಕಂದಾಯ ನಿಯಮ 97 ರಂತೆ ಮಾರುಕಟ್ಟೆಯ ಬೆಲೆಯ ಅರ್ಧ ಬೆಲೆಗೆ ಅದನ್ನು ವರ್ಗದಾರನು ಖರೀದಿ ಮಾಡಲು ಅವಕಾಶ ಮಾಡಿಕೊಟ್ಟಿತು. ಈ ನಿಯಮವನ್ನು ಮುಂದೆ ಅರಣ್ಯ ನಿಯಮ 137 ರಲ್ಲೂ ಅಳವಡಿಸಲಾಯಿತು. ಆದರೆ 1974 ರಲ್ಲಿ ಈ ನಿಯಮವನ್ನು ಕೈಬಿಡಲಾಯಿತು (ಟಿಪ್ಪಣಿ ಮುಗಿಯಿತು).

ಜಮ್ಮಭೂಮಿಗಳ ಪೂರ್ತಿ ಮಾಲಿಕತ್ವವನ್ನು ವರ್ಗದಾರರು ಹೊಂದಿಲ್ಲ ಎಂಬುದಾಗಿ ಸರಕಾರವು ಇತ್ತೀಚೆಗೆ (1981) ಪ್ರತಿಪಾದಿಸಿದ್ದರಿಂದ ಅದರ ವಿರುದ್ಧ ರಾಜ್ಯ ಶ್ರೇಷ್ಠ ನ್ಯಾಯಾಲಯವು 16-7-1991 ಂದು ನಿರ್ಣಯ ನೀಡಿ ಜಮ್ಮ ಭೂಮಿಗಳ ವರ್ಗದಾರರು ಆಸ್ತಿಯ ಮಾಲಿಕತ್ವವನ್ನು ಹೊಂದಿದ್ದಾರೆಂದು ನಿರ್ಣಯ ನೀಡಿದೆ. ಬಾಣೆಗಳ ಮೇಲಿನ ಅವರ ಹಕ್ಕನ್ನೂ ನ್ಯಾಯಾಲಯವು ಮಾನ್ಯ ಮಾಡಿತು. ಜಮ್ಮ ಭೂಮಿಯನ್ನು ಮಾರಾಟ ಮಾಡುವ ಪ್ರಸಂಗ ಬಂದಾಗ ನೋಂದಣಿ ಅಧಿಕಾರಿಯು ಅದನ್ನು ನೋಂದಣಿ ಮಾಡಲು ತಿರಸ್ಕಾರ ಮಾಡಬಾರದೆಂದೂ ಈ ತೀರ್ಪು ತಿಳಿಸಿದೆ.

## ಈಗಿನ ಕಂದಾಯ ವ್ಯವಸ್ಥೆ

ಕರ್ನಾಟಕ ಭೂಕಂದಾಯ ಅಧಿನಿಯಮ 1964 ದಿ. : 1-4-1964 ರಿಂದ ಜಾರಿಗೆ ಬಂತು. ಈ ಅಧಿನಿಯಮದ 114 ರಿಂದ 126ರ ವರೆಗಿನ ಪರಿಚ್ಛೇದಗಳು ಅದರಂತೆ ಮಾಡಲಾದ ನಿಯಮಗಳಲ್ಲಿ ಕ್ರಮಾಂಕ 21 ರಿಂದ 37 ರಂತೆ ಭೂಕಂದಾಯ ನಿರ್ಣಯ ಮಾಡುವ ಬಗೆಗಿನ ವಿಧಾನಗಳನ್ನು ಹೇಳಿವೆ. ಈ ಕಾನೂನಿನಂತೆ ಭೂಕಂದಾಯ ನಿರ್ಣಯಕ್ಕೆ ಸಂಬಂಧಪಟ್ಟ ಸರಕಾರದ ಆದೇಶದಂತೆ ಕ್ರಮ ಕೈಗೊಳ್ಳಲಾಯಿತು. 1964ರ ಅಧಿನಿಯಮದ ಪ್ರಕರಣ 2 (27) ರಂತೆ ಮಣ್ಣಿನ ಗುಣವನ್ನು ಶೇಕಡಾವಾರಾಗಿ ಗುರುತಿಸಬೇಕೆಂದಿದೆ. ನಿಶ್ಚಿತ ಇಲ್ಲವೆ ಪ್ರಮಾಣಿತ ದರವೆಂದರೆ, ಒಂದು ಗುಂಪಿನಲ್ಲಿನ ಯಾವುದೇ ಒಂದು ವರ್ಗದ ಭೂಮಿಯನ್ನು ಪರಿಗಣಿಸಿ ಎಕರೆಗೆ ಸರಾಸರಿ ಇಳುವರಿಯ ಮೌಲ್ಯದ ಶೇಕಡಾ 4ನ್ನು ಕಂದಾಯವಾಗಿ ಲೆಕ್ಕ ಹಾಕಬೇಕು. ಆಯಾ ವರ್ಗದಲ್ಲಿ ಆ ಭೂಮಿಯು ಶೇಕಡಾ ನೂರು ವರ್ಗೀಕರಣದ ಮೌಲ್ಯವನ್ನು ಹೊಂದಿರಬೇಕು. ಆದರೆ ತೋಟಗಾರಿಕೆ ಬೆಳೆಗಳಾದ ಕಾಫಿ, ಟೀ, ಏಲಕ್ಕಿ ಮತ್ತು ಮೆಣಸಿಗೆ ಇದು ಶೇಕಡಾ ಒಂದರ ದರದಲ್ಲಿ ಆಕರಣೆಯಾಗುತ್ತದೆ. ಕಿತ್ತಳೆಯನ್ನು ತೋಟಗಾರಿಕೆ (ಪ್ಲಾಂಟೇಶನ್) ಬೆಳೆ ಎಂದು ಪರಿಗಣಿಸಿಲ್ಲ.

ಮೇಲ್ಕಂಡ ಅಧಿನಿಯಮದಂತೆ ಕಂದಾಯ ನಿಷ್ಕರ್ಷೆ ಮಾಡುವ ವ್ಯವಸ್ಥಾಧಿಕಾರಿಯು ತನ್ನ ಪ್ರಸ್ತಾವನೆ ಮತ್ತು ವರದಿಯನ್ನು ಜಿಲ್ಲಾಧಿಕಾರಿಗೆ ಒಪ್ಪಿಸಬೇಕು. ಜಿಲ್ಲಾಧಿಕಾರಿಯು ಈ ವರದಿ ಮತ್ತು ಪ್ರಸ್ತಾವನೆಯನ್ನು ರಾಜ್ಯಪತ್ರದಲ್ಲಿ ಪ್ರಕಟಿಸಿ ಕಚೇರಿಯಲ್ಲೂ ಜನರಿಗೆ ತಿಳಿಯುವಂತೆ ಪ್ರದರ್ಶಿಸಬೇಕು. ಅದಲ್ಲದೆ ಪ್ರತೀ ಗ್ರಾಮದಲ್ಲೂ ಇರುವ ಭೂಮಿಯ ಖಾತೆಗಳಿಗೆ ಪ್ರತೀ ವರ್ಗದ ಭೂಮಿಗೆ ಇದ್ದ ಕಂದಾಯ ಮತ್ತು ಹೊಸ ಆಕರಣೆಯ ಪ್ರಸ್ತಾವನೆಯನ್ನು

ರೈತರಿಗೆ ತಿಳಿಸಲು ಏರ್ಪಾಡು ಮಾಡಬೇಕು. ಈ ಬಗ್ಗೆ ತಕರಾರುಗಳಿದ್ದರೆ ಇಂಥ ಪ್ರಕಟಣೆಯಾದ ಮೂರು ತಿಂಗಳ ಒಳಗೆ ಸರಕಾರದ ಗಮನಕ್ಕೆ ತರಬೇಕು. ಇಂಥ ತಕರಾರುಗಳ ಅಹವಾಲನ್ನು ಭೂಸರ್ವೇಕ್ಷಣೆ ಮತ್ತು ನಿಷ್ಕರ್ಷೆಯು ಹಾಗೂ ಭೂದಾಖಲೆಗಳ ಇಲಾಖೆಯ ನಿರ್ದೇಶಕರ ಕಚೇರಿಯ ಮೂಲಕ ಸರಕಾರದ ಗಮನಕ್ಕೆ ತನ್ನ ಪ್ರತಿಕ್ರಿಯೆ ಮತ್ತು ಟಿಪ್ಪಣಿಗಳ ಸಹಿತ ಜಿಲ್ಲಾಧಿಕಾರಿಯು ತರಬೇಕು.

ಕಂದಾಯ ನಿಷ್ಕರ್ಷೆಯ ವರದಿ ಮತ್ತು ಆ ಬಗ್ಗೆ ಬಂದ ತಕರಾರುಗಳನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳಲ್ಲೂ ಮಂಡಿಸಿ, ಈ ವರದಿಗಳನ್ನು ಉಭಯ ಸದನಗಳೂ ಸೂಕ್ತ ತಿದ್ದುಪಡಿ ಮಾಡಿ ಅಥವಾ ಮಾಡದೇ ಒಪ್ಪಿಗೆ ಸೂಚಿಸಿದ ಠರಾವನ್ನು ಮಂಜೂರು ಮಾಡಿದ ಮೇಲೆ ಸರಕಾರವು ಆ ಬಗ್ಗೆ ಸೂಕ್ತ ಆದೇಶವನ್ನು ಹೊರಡಿಸುವುದು. ಆಗ ಈ ಆದೇಶವನ್ನು ಯಾವ ಕಾರಣದಿಂದಲೂ ಪ್ರಶ್ನಿಸಲಾಗದು. ಅನಂತರ ಪ್ರತೀ ಪ್ರದೇಶ (ಜೋನ್)ಕ್ಕೆ ಸಂಬಂಧಿಸಿದಂತೆ ಬೇರೆಬೇರೆ ವರ್ಗದ ಭೂಮಿಗಳಿಗೆ ಮಾಡಲಾದ ಪ್ರಮಾಣಿತ ಕಂದಾಯದ ದರವನ್ನೂ ಅದು ಜಾರಿಗೆ ಬರುವ ದಿನಾಂಕವನ್ನು ಅಧಿಕೃತ ರಾಜ್ಯಪತ್ರ (ಗೆಜೆಟ್)ದಲ್ಲಿ ಪ್ರಕಟಿಸಬೇಕು. ಇಂಥ ಪ್ರಕಟಣೆಗಳನ್ನು ಪ್ರತೀಗ್ರಾಮ ಚಾವಡಿಯಲ್ಲೂ ಆ ಗ್ರಾಮಕ್ಕೆ ಸಂಬಂಧಿಸಿದ ವಿವರಗಳೊಂದಿಗೆ ಪ್ರದರ್ಶಿಸಬೇಕು. ಪ್ರತೀ ಕಂದಾಯ ನಿಷ್ಕರ್ಷೆ ಮುಗಿದ ಮೇಲೆ ಪ್ರತೀ ಭೂಮಿಯ ಸರ್ವೇ ನಂಬರ್, ಅದರ ವಿಸ್ತಾರ, ಕೃಷಿಗೊಳಪಡದ ಭೂಮಿಯ ವಿಸ್ತಾರ ಹಾಗೂ ವರ್ಗ (ಖಾತೆ)ದಾರನ ಹೆಸರನ್ನು ನಮೂದಿಸಿ ಆಯಾ ಗ್ರಾಮದ ಭೂವ್ಯವಸ್ಥೆಯ ವಹಿ (ಸೆಟ್ಲ್‌ಮೆಂಟ್ ರಿಜಿಸ್ಟರ್)ಯನ್ನು ಸಿದ್ಧಪಡಿಸಬೇಕು. ಈ ವಹಿಯು ಎಲ್ಲ ಕಂದಾಯದ ಲೆಕ್ಕಪತ್ರಗಳಿಗೆ ಆಧಾರವಾಗುವುದು. ಈ ಕಂದಾಯ ನಿಷ್ಕರ್ಷೆಗೆ ಸಂಬಂಧಿಸಿದ ಎಲ್ಲ ಕಾಗದ ಪತ್ರಗಳನ್ನು ಭೂ ದಾಖಲೆಗಳ ಉಪ-ನಿರ್ದೇಶಕರ ಕಚೇರಿಯಲ್ಲಿ ಕಾಯಂ ಆಗಿ ಕಾದಿಡಲಾಗುವುದು.

**ಪ್ರಮಾಣ ದರಗಳು**

ಕರ್ನಾಟಕ ಭೂಕಂದಾಯ ಅಧಿನಿಯಮ 1964ರಂತೆ ಪ್ರಮಾಣ ದರ (ಸ್ಟ್ಯಾಂಡರ್ಡ್ ರೇಟ್) ಎಂದರೆ ಶೇಕಡ ನೂರು ವರ್ಗೀಕರಣದ ಮೌಲ್ಯವುಳ್ಳ ಮಣ್ಣಿನ ಗುಂಪಿಗೆ ಒಳಪಟ್ಟ ಭೂಮಿಯಲ್ಲಿ ಆಗುವ ಒಟ್ಟು ಸರಾಸರಿ ಇಳುವರಿಯ ಶೇಕಡಾ ನಾಲ್ಕು. ತೋಟದ (ಪ್ಲ್ಯಾಂಟೇಶನ್) ಬೆಳೆಗಳಿಗೆ ಶೇಕಡಾ ಒಂದು. ಇಂಥ ಪ್ರಮಾಣ ದರವನ್ನು ಎಣಿಸಿ ಗೊತ್ತು ಮಾಡುವಾಗ, ಒಂದು ಪ್ರದೇಶದ ಒಟ್ಟು ಇಳುವರಿಯಲ್ಲಿ ವಿಶಿಷ್ಟ ಹಿಡುವಳಿಯ ಪಾಲು (ಪ್ರಮಾಣ), ಆ ಪ್ರದೇಶದಲ್ಲಿ ಇರುವ ಸಾರಿಗೆ ಸಂಪರ್ಕದ ಸವಲತ್ತು, ಕೃಷಿ ವಿಧಾನದ ಮಟ್ಟ, ಸಾಕುಪ್ರಾಣಿಗಳ (ಕೃಷಿಗೆ ಬೇಕಾದ ಎತ್ತು, ಕೋಣ) ಸ್ಥಿತಿಗತಿ, ಕಳೆದ 30 ವರ್ಷಗಳ ಸ್ಥಿತಿಗತಿ, ಹತ್ತು ವರ್ಷಗಳ ಪ್ರಮುಖ ಬೆಳೆಗಳ ಪ್ರಾಯೋಗಿಕ ಕಟಾವಿನ ಲೆಕ್ಕಾಚಾರ ಮುಂತಾದ ಅಂಶಗಳನ್ನು ಗಮನಿಸಲಾಗುತ್ತದೆ. ಒಟ್ಟು ಮುಖ್ಯ ಬೆಳೆಗಳ ಸರಾಸರಿ ಇಳುವರಿಯ ಶೇಕಡಾ ನಾಲ್ಕನ್ನು ಮೀರಿ ಪ್ರಮಾಣದರ ಇರುವುದಿಲ್ಲ.

**1964ರ ಪರಿಷ್ಕೃತ ಕಂದಾಯ ನಿಷ್ಕರ್ಷೆಯ ತಖ್ತೆ**

| ತಾಲೂಕು | ಗುಂಪು | ಗ್ರಾಮಗಳ ಸಂಖ್ಯೆ | ಕಂದಾಯದ ಪ್ರಮಾಣ ದರ—ಎಕರೆಗೆ | | | |
|---|---|---|---|---|---|---|
| | | | ಖುಷ್ಕಿ | ತರಿ | ಬಾಗಾಯತ್ | ತೋಟ |
| ಮಡಿಕೇರಿ | I | 67 | 1.60 | 11.20 | 11.20 | 9.36* |
| ವೀರರಾಜಪೇಟೆ | I | 88 | 1.60 | 11.20 | 11.20 | |
| ಸೋಮವಾರಪೇಟೆ | I | 107 | 1.60 | 11.20 | 11.20 | |
| | II | 12 | 4.19 | 9 90 | 9.90 | |

* ಇದು ಇಡೀ ಕೊಡಗಿಗೆ ಗೊತ್ತುಪಡಿಸಿದ ತೋಟಗಾರಿಕೆ (ಪ್ಲ್ಯಾಂಟೇಶನ್) ದರವಾಗಿದೆ. ಕರ್ನಾಟಕ ರೆವಿನ್ಯೂ ಮ್ಯಾನ್ಯುವಲ್, 1986, ಭಾಗ II, ಪು. 484ರಲ್ಲಿ ಹೇಳಿರುವ ಜಿಲ್ಲೆಯ ಸರಾಸರಿ ದರ.

**ನೀರಾವರಿ ದರ :** ರಾಜ್ಯ ಪುನರ್ಘಟನೆಯ ಕಾಲಕ್ಕೆ ಮೊದಲು ಬೇರೆ ಬೇರೆ ಆಡಳಿತಗಳಿಗೆ ಒಳಪಟ್ಟಿದ್ದ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ನೀರಾವರಿ ದರಗಳು ಇದ್ದವು. ಮೈಸೂರು ನೀರಾವರಿ (ಅಭಿವೃದ್ಧಿ ಅಂಶದಾನ ಮತ್ತು ನೀರಿನ ದರದ) ಅಧಿನಿಯಮವನ್ನು 1957 ರಲ್ಲಿ ಮಂಜೂರು ಮಾಡಿದರು. ಆದರೆ ಅದನ್ನು ಜಾರಿಗೊಳಿಸಿದ್ದು 1965 ರಲ್ಲಿ. ಅದರಂತೆ ಯಾವುದೇ ಸರಕಾರೀ ನಿರ್ಮಿತ ಅಥವಾ ಸರಕಾರದ ಮಾಲಕಿಯ ನೀರಾವರಿ ವ್ಯವಸ್ಥೆಯಿಂದ ಕೃಷಿ ಅಥವಾ ಇನ್ನಾವುದೇ ಉದ್ದೇಶಕ್ಕೆ ನೀರನ್ನು ಬಳಸಿ ನೀರಿನ ದರ (ತೆರಿಗೆ) ಸಂದಾಯ ಮಾಡಬೇಕು. ಈ ಬಳಕೆಯು ನೇರ ಹರಿವಿನಿಂದಲಾದರೂ ಸರಿ, ಒಳಸೋಸು (ಪರ್ಕೊಲೇಶನ್) ವಿಧಾನದಿಂದಾದರೂ ಸರಿ, ಈ ದರವನ್ನು ಬೆಳೆದ ಬೆಳೆಯ ಮೇಲೆ ಅವಲಂಬಿಸಿ ಆಕರಿಸಲಾಗುತ್ತಿದ್ದು ಇದು ನೂರು ಎಕರೆಗೂ ಕಡಿಮೆ ನೀರು ಪೂರೈಕೆ ಪ್ರದೇಶಕ್ಕೆ (ಕಮಾಂಡ್ ಏರಿಯ) ಒಂದು ದರವಾದರೆ, ನೂರು ಎಕರೆಗೂ ಹೆಚ್ಚಿನ ಪ್ರದೇಶಕ್ಕೆ ಹೆಚ್ಚಿನ ದರ ಇರುತ್ತದೆ.

1965 ರಲ್ಲಿ ಹೊರಡಿಸಲಾದ ನೀರಾವರಿ ದರ (ತೆರಿಗೆ)ವು ನೀರಾವರಿ ಕಾಮಗಾರಿಯನ್ನು ದುರಸ್ತಿ ಮಾಡಲು ಹಾಗೂ ಸಾಧ್ಯವಿದ್ದರೆ ಈ ಕಾಮಗಾರಿಗಾಗಿ ವೆಚ್ಚ ಮಾಡಿದ ಸಾಲದ ವೆಚ್ಚ ಮತ್ತು ಮೇಲ್ವೆಚ್ಚವನ್ನು ಭರಿಸಬೇಕೆಂದು ನಿರೀಕ್ಷಿಸಲಾಗಿದೆ. ಈ ನೀರಿನ ದರಗಳನ್ನು 1966 ರಿಂದ ಜಾರಿ ಮಾಡಿದ್ದು 1972 ರಿಂದ 1981ರ ವರೆಗೆ ಇದಕ್ಕೆ ಬೇರ ಬೇರೆ ತಿದ್ದುಪಡಿಗಳನ್ನು ಮಾಡಿದೆ. ಎಕರೆಗೆ ಗೊತ್ತುಪಡಿಸಿದ ದರಗಳು ಹೀಗಿವೆ : 12 ತಿಂಗಳ ಕಬ್ಬಿನ ಬೆಳೆ ರೂ. 150; 13 ರಿಂದ 18 ತಿಂಗಳ ಕಬ್ಬಿನ ಬೆಳೆ ರೂ. 225; ಬತ್ತ 48; ಗೋಧಿ 24; ಜೋಳ 24; ಕಡಲೆಕಾಯಿ (ನೆಲಗಡಲೆ) 24; ಅರಳೆ 48; ಮುಸುಕಿನ ಜೋಳ, ನವಣೆ, ಸಜ್ಜೆ, ಹೆಸರು, ಗೆಣಸು, ತಂಬಾಕು ಮತ್ತು ಧನಿಯಾ 24; ದ್ವಿದಳ ಧಾನ್ಯ 18; ಗೊಬ್ಬರದ ಬೆಳೆಗಳು 9; ಹಾಗೂ ತೋಟದ ಬೆಳೆಗಳು 50.

ವೈಶಾಖದ ಬೆಳೆಯನ್ನು ಸಣ್ಣ ಪ್ರಮಾಣದಲ್ಲಿ ನಡೆಸುತ್ತಿದ್ದು ಇದರ ಕಂದಾಯವನ್ನು ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ನಾಲ್ಕು ಕಂತುಗಳಲ್ಲಿ ಸಂಗ್ರಹಿಸುತ್ತಾರೆ. ಏಲಕ್ಕಿ ತೋಟಗಳ ಕಂದಾಯವನ್ನು ಎರಡು ಸಮಾನ ಕಂತುಗಳಲ್ಲಿ ಜನವರಿ 20 ಮತ್ತು ಫೆಬ್ರವರಿ 20 ಕ್ಕೆ ಸಂಗ್ರಹಿಸುತ್ತಾರೆ.

**ಕಂದಾಯದ ಲೆಕ್ಕಪತ್ರ**

ಕಂದಾಯ ನಿಷ್ಕರ್ಷೆಯಾದ ನಂತರ ಕಂದಾಯದ ದಾಖಲೆ (ಸೆಟ್ಲ್‌ಮೆಂಟ್ ರಿಜಿಸ್ಟರ್) ಯನ್ನು ಇಲಾಖೆಯು ಸಿದ್ಧಪಡಿಸಿ ಪ್ರತೀ ಸರ್ವೆ ನಂಬರ್‌ನ ವಿಸ್ತಾರ ಮತ್ತು ಆಕರಿಸಿದ ದರವನ್ನು ಅದರಲ್ಲಿ ದಾಖಲು ಮಾಡಿ, ಕೃಷಿಯಾಗದ ಭೂಮಿ, ಅದರ ನೋಂದಾಯಿಸಿದ ಮಾಲಿಕನ ಹೆಸರು ಇವುಗಳನ್ನೆಲ್ಲ ಗುರುತಿಸಬೇಕು. ಇದನ್ನು ಪಾಹಣಿ ಸೂಡ್ ಎನ್ನುತ್ತಾರೆ. ಇದಲ್ಲದೆ ಕೃಷಿ ಯೋಗ್ಯ ಮತ್ತು ಕೃಷಿ ಯೋಗ್ಯವಲ್ಲದ್ದು, ಖುಷ್ಕಿ, ತರಿ ಹಾಗೂ ಬಾಗಾಯತು ಮುಂತಾದ ಶೀರ್ಷಿಕೆಗಳ ಕೆಳಗೆ ಹಿಡುವಳಿಗಳ ವಿವರ, ಅವುಗಳ ಎಕರೆವಾರು ಕಂದಾಯ ದರ, ಪ್ರತೀ ಹಿಡುವಳಿಯ ಕಂದಾಯದ ಮೊತ್ತ, ಹಾಗೂ ಇಡೀ ಸರ್ವೆ ನಂಬರ್‌ನ ಒಟ್ಟು ಕಂದಾಯದ ಮೊತ್ತಗಳನ್ನು ಒಳಗೊಂಡ ಇನ್ನೊಂದು ದಾಖಲೆ ಪುಸ್ತಕವನ್ನು ತಯಾರಿಸಲಾಗುತ್ತಿದ್ದು ಇದನ್ನು ಆಕಾರ್ ಬಂದ್ ಎನ್ನುವರು. ಇದು ಎಲ್ಲ ಕಂದಾಯದ ಲೆಕ್ಕಗಳಿಗೆ ಆಧಾರ ಭೂತವಾದುದು. ಇದು ತಮ್ಮ ಕೈ ಸೇರಿದಾಗ ಗ್ರಾಮ ಲೆಕ್ಕಿಗರು ಖೇತ್‌ವಾರ್ ದಾಖಲೆ ಅಥವಾ ಭೂಮಿಗಳ ಸೂಚಿಯನ್ನು ಸಿದ್ಧಪಡಿಸುವರು. ಪ್ರತೀಯೊಂದು ಹಿಡುವಳಿ, ಅದರ ಖಾತೇದಾರ, ಅವರ ವರ್ಗ (ಗುಂಪು), ವಿಸ್ತಾರ, ಕಂದಾಯ, ನೀರಾವರಿ ದರ, (ಮಾಲಿಕನ) ಹಿಡುವಳಿ ಹಕ್ಕಿನ ಸ್ವರೂಪ, ಬೆಳೆವ ಬೆಳೆ, ಇಂಥ ಎಲ್ಲ ವಿವರಗಳು ಅದರಲ್ಲಿರುತ್ತವೆ. ಭೂಮಿಯ ಒಡೆತನದ ಬಗ್ಗೆ ಆದ ಎಲ್ಲ ಬದಲಾವಣೆಗಳು ವರದಿಯಾದಂತೆ ಹಾಗೂ ಸೂಕ್ತ ಅಧಿಕಾರಿ ಅದನ್ನು ಪರಿಶೀಲಿಸಿದಂತೆ ಇದರಲ್ಲಿ ನೋಂದಣಿ ಮಾಡಲಾಗುವುದು. ಮೂಲ ಹಿಡುವಳಿ ಹಕ್ಕಿನ ಹಾಗೂ ಬೆಳೆಗಳ ವಿವರಗಳನ್ನು ತಾಲೂಕು ಕಚೇರಿಯಲ್ಲಿ ಕಾಯ್ದಿಟ್ಟು ಐದು ವರ್ಷಕ್ಕೆ ಒಮ್ಮೆ ಅದನ್ನು ಮರು ದಾಖಲೆ ಮಾಡಲಾಗುವುದು. ಆರ್.ಟಿ.ಸಿ. (ರೆಕಾರ್ಡ್ಸ್ ಆಫ್ ಟೆನನ್ಸಿ ಅಂಡ್ ಕ್ರಾಪ್ಸ್) ಅಥವಾ ಹಿಡುವಳಿ ಹಕ್ಕು ಮತ್ತು ಬೆಳೆಗಳ ದಾಖಲೆ, ಖಿರ್ದಿ (ದಿನವಹಿ ದಾಖಲೆ ಪುಸ್ತಕ) ಹಾಗೂ ರಸೀದಿ ಮತ್ತು ಕಂದಾಯದ ಬಾಕಿ ಹಾಗೂ ತಗ್ಗು ಬೆಲೆ (ಅಪ್‌ಸೆಟ್ ಪ್ರೈಸ್) ಮತ್ತು ಪರಿವರ್ತನೆಯ ದಂಡ ಮುಂತಾದ ವಿವರಗಳನ್ನೊಳಗೊಂಡ ಖಾತಾ ರಿಜಿಸ್ಟರನ್ನು ಪ್ರತೀ ವರ್ಷ ಜುಲೈಯಲ್ಲಿ ತೆರೆಯಲಾಗುವುದು. ಗ್ರಾಮ ಲೆಕ್ಕಿಗನು ತಾನು ವಸೂಲು ಮಾಡಿದ ಎಲ್ಲ ಕಂದಾಯದ ವಿವರಗಳನ್ನು ಅಧೀಕೃತ ನಮೂನೆಯಂತೆ ರಶೀದಿ ಪುಸ್ತಕದಲ್ಲಿ ದಾಖಲು ಮಾಡಬೇಕು. ಪ್ರತೀ ತಿಂಗಳ ಡಿ.ಸಿ.ಬಿ. ತಖ್ತೆ (ವಸೂಲಾಗಬೇಕಾದ ಅಭಿಯಾಚಿತ ಕಂದಾಯ, ಸಂಗ್ರಹವಾದ ಮೊತ್ತ ಮತ್ತು ಬಾಕಿ) ಯನ್ನು

ಗೊತ್ತಾದ ನಮೂನೆಯಲ್ಲಿ ಸಿದ್ಧಪಡಿಸಿ ತಾಲೂಕು ಕಚೇರಿಗೆ ಪ್ರತೀ ತಿಂಗಳ ಮೊದಲನೇಯ ದಿನ ಹಾಜರು ಮಾಡಬೇಕು. ಕಂದಾಯ, ವಿವಿಧ ತೆರಿಗೆಗಳು ಮತ್ತು ಉಪಕರಿಗೆ (ಸೆಸ್) ಇವುಗಳ ಅಭಿಯಾಚನೆ ಮತ್ತು ವಸೂಲಿಯ ವಿವರಗಳ ಸಹಿತ ಇರುವ ವಾರ್ಷಿಕ ದಾಖಲೆ ಪುಸ್ತಕವನ್ನು ಜೂನ್ 30ಕ್ಕೆ ಮುಕ್ತಾಯಗೊಳಿಸಬೇಕು.

## ಜಮಾಬಂದಿ

ಜಮಾಬಂದಿಯನ್ನು ನಡೆಯಿಸುವ ಕ್ರಮವು ಇಡೀ ರಾಜ್ಯದಲ್ಲಿ ಎಲ್ಲೆಡೆ ಜಾರಿಯಲ್ಲಿತ್ತು. ಪ್ರತೀಗ್ರಾಮದ ಮತ್ತು ತಾಲೂಕಿನ ದಾಖಲೆ ಪುಸ್ತಕಗಳನ್ನೂ ಗ್ರಾಮದ ಕಂದಾಯದ ಲೆಕ್ಕವನ್ನೂ ಅಚ್ಚುಕಟ್ಟಾಗಿ ಮಾಡಲು, ಹಾಗೂ ಪ್ರತೀ ಗ್ರಾಮದಿಂದ ಬರಬೇಕಾದ ಎಲ್ಲ ಸರಕಾರೀ ಆದಾಯದ ಅಂಶಗಳು ಸರಿಯಾಗಿ ವಸೂಲಾಗಿವೆಯೇ ಹಾಗೂ ಪ್ರತೀಗ್ರಾಮದ ನಿಷ್ಕರ್ಷಿಸಿದ ದರಕ್ಕೆ ಅನುಗುಣವಾಗಿವೆಯೇ ಎಂದು ಪ್ರತೀ ವರ್ಷ ಪರಿಶೀಲನೆ ಮಾಡಲು ವಾರ್ಷಿಕವಾಗಿ ಇವುಗಳನ್ನು ನಡೆಸಲಾಗುತ್ತಿತ್ತು. ಸರಕಾರದ ಮಟ್ಟದಲ್ಲಿ ಆಡಳಿತವನ್ನು ಬಿಗಿಗೊಳಿಸುವುದು ಹಾಗೂ ದುರ್ಬಲ ವರ್ಗಗಳನ್ನೊಳಗೊಂಡಂತೆ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಯೋಜನೆಗಳ ವೇಗವನ್ನು ಕಾಯ್ದುಕೊಳ್ಳುವುದು ಇದರ ಮುಖ್ಯ ಉದ್ದೇಶ. ದಿಟ್ಟಂ ಮತ್ತು ಹುಜೂರ್ ಎಂದು ಎರಡು ರೀತಿಯ ಜಮಾಬಂದಿಗಳಿವೆ. ಗ್ರಾಮಲೆಕ್ಕಿಗನು ಆ ವರ್ಷದ ಬೆಳೆಯ ವರದಿಯ ಸಹಿತ ಹೊಸವರ್ಷದ ಲೆಕ್ಕವನ್ನು ಬರೆದ ತಕ್ಷಣ ಹೋಬಳಿ ಕೇಂದ್ರದಲ್ಲಿ ತಹಶೀಲ್ದಾರರು ನಡೆಸುವುದು ದಿಟ್ಟಂಜಮಾಬಂದಿ. ತಹಶೀಲ್ದಾರರು ಲೆಕ್ಕಪತ್ರ ಹಾಗೂ ಸಂಬಂಧಿಸಿದ ದಾಖಲೆ ಪುಸ್ತಕಗಳಲ್ಲಿ ಮಾಡಿದ ದಾಖಲಾತಿಗಳನ್ನು ತಾಳೆನೋಡಿ ಪ್ರಮಾಣೀಕರಿಸುವುದು ಆಗ ನಡೆಯುತ್ತದೆ.

ಹುಜೂರ್ ಜಮಾಬಂದಿಯೆಂದರೆ, ಜಿಲ್ಲಾಧಿಕಾರಿ ಅಥವಾ ಉಪಆಯುಕ್ತ (ಅಸಿಸ್ಟಂಟ್ ಕಮಿಷನರ್) ಇಲ್ಲವೇ ಈ ಉದ್ದೇಶಕ್ಕೆಂದೇ ನೇಮಕಗೊಂಡ ಯಾವುದೇ ಅಧಿಕಾರಿ ಆ ವರ್ಷದ ವಸೂಲಾಗಬೇಕಾದ ಕಂದಾಯದ ಮೊತ್ತ ಮತ್ತು ಇತರ ತೆರಿಗೆಗಳ ಪ್ರಮಾಣವನ್ನು ಮಳೆ ಬೆಳೆಯ ಸ್ಥಿತಿಯನ್ನು ಗಮನಿಸಿ ಖಚಿತಗೊಳಿಸಲು ಅಕ್ಟೋಬರ್ ಮತ್ತು ಡಿಸೆಂಬರ್‌ಗಳ ನಡುವೆ ನಡೆಸುವ ಕ್ರಮ. ಹುಜೂರ್ ಜಮಾಬಂದಿಯಲ್ಲಿ ಪ್ರತೀ ತಾಲೂಕನ್ನು ಒಂದು ಘಟಕವೆಂದು ಪರಿಗಣಿಸಲಾಗುತ್ತದೆ. ಈ ಕೆಲಸ ಎಲ್ಲ ತಾಲೂಕುಗಳಲ್ಲಿ ಸಾಮಾನ್ಯವಾಗಿ ಅಕ್ಟೋಬರ್ 15ಕ್ಕೆ ಆರಂಭ ಆಗಬೇಕು ಹಾಗೂ ಮುಂದಿನ ಫೆಬ್ರವರಿಯೊಳಗೆ ಮುಗಿಯಬೇಕು. ಈ ಉದ್ದೇಶಕ್ಕಾಗಿ ಕರೆಯಲಾದ ರೈತರ ತಕರಾರು, ಕುಂದುಕೊರತೆಗಳ ಅಹವಾಲನ್ನು ಅವರು ಕೇಳಿಕೊಂಡು ಅಲ್ಲಿಂದಲ್ಲೇ ಆ ಬಗ್ಗೆ ಪರಿಹಾರ ಅಥವಾ ನಿರ್ಣಯ ನೀಡಬೇಕು. ಈ ಜಮಾಬಂದಿಯ ಒಂದು ವರದಿಯನ್ನು ಸಂಬಂಧಿಸಿದ ಅಧಿಕಾರಿಯು ಸರಕಾರದ ರೆವಿನ್ಯೂ ಇಲಾಖೆಗೆ ಜಮಾಬಂದಿ ಮುಗಿದ 15 ದಿನಗಳೊಳಗೆ ರವಾನೆ ಮಾಡಬೇಕು.

## ಭೂಕಂದಾಯ ವಸೂಲಿ

ಹಸ್ತಾಂತರ ಮಾಡದೇ ಇರುವ ಭೂಮಿಯ ಹಿಡುವಳಿದಾರನೂ ಸಾಗುವಳಿ ಮಾಡದೆ ಬಿಟ್ಟ ಭೂಮಿಯ ಭೂಮಾಲಿಕನೂ ಆಯಾ ಹಿಡುವಳಿಯ ಭೂಕಂದಾಯ ಮತ್ತು ಇತರ ಸೆಸ್ಸುಗಳ ಪಾವತಿ ಮಾಡಲು ಬದ್ಧನಾಗಿದ್ದಾನೆ. ಪ್ರತೀ ವರ್ಷದ ಆರಂಭದಿಂದ (ಜನವರಿ 1) ಭೂಕಂದಾಯವು ಬಾಕಿ ಇದೆ ಎಂದು ಭಾವಿಸಲಾಗುವುದು ಹಾಗೂ ಗೊತ್ತುಮಾಡಿದ ಕಂತುಗಳ ತಾರೀಕಿಗೆ ಅದರ ಪಾವತಿ ಆಗಬೇಕೆಂದು ನಿರೀಕ್ಷಿಸಲಾಗುವುದು. ಜನವರಿಯಿಂದ ಜೂನ್‌ವರೆಗಿನ ಕಾಲವನ್ನು 'ಕಿಸ್ತು' ಎಂದು ಕರೆಯಲಾಗುತ್ತಿದ್ದು ಇದು ವಸೂಲಾತಿಯ ಕಾಲಖಂಡ (ಮೋಸವಮ್)ವಾಗಿದೆ. ಒಂದು ವಿಶಿಷ್ಟ ಕಂತಿಗೆ ಪಾವತಿಯಾಗದ ಮೊತ್ತವು 'ಬಾಕಿ' ಎಂದು ಭಾವಿಸಲ್ಪಟ್ಟು ಪಾವತಿ ಮಾಡಬೇಕಾದ ಬಾಕಿದಾರನು 'ದೋಷಿ' ಎಂದು ಪರಿಗಣಿಸಲ್ಪಡುವನು. ಜನವರಿ, ಫೆಬ್ರವರಿ, ಮಾರ್ಚ್ ಮತ್ತು ಏಪ್ರಿಲ್ 20ಕ್ಕೆ ಕೊಡಬೇಕಾದ ಒಂದೊಂದು ಕಂತೂ ಸಕಾಲದಲ್ಲಿ ಪಾವತಿ ಆಗಬೇಕು.

ವಸೂಲಾತಿಯ ಪ್ರಕ್ರಿಯೆಯು ಬೇಡಿಕೆ ಪತ್ರ (ಡಿಮಾಂಡ್ ನೋಟೀಸ್)ವನ್ನು ಗ್ರಾಮಲೆಕ್ಕಿಗನು ರೈತನಿಗೆ ಜನವರಿಯಲ್ಲಿ ಮುಟ್ಟಿಸಿದಾಗ ಆರಂಭವಾಗಿ, ಮುಂದೆ ಒಂದು ವಾರದಲ್ಲಿ ಬಾಕಿ ವಸೂಲಿ ಆಗದೇ ಇದ್ದಲ್ಲಿ ಈ ವಿಚಾರವನ್ನು ತಹಶೀಲ್ದಾರರ ಗಮನಕ್ಕೆ ತಂದು ಅವರಿಂದ ಬಾಕಿದಾರನ ಜಂಗಮ (ಚರ) ಆಸ್ತಿಯನ್ನು ಜಪ್ತಿ ಮಾಡಲು ಅಜ್ಞೆ ಪಡೆದುಕೊಳ್ಳಬೇಕು. ಇದು ಕರ್ನಾಟಕ ಭೂಕಂದಾಯ ಅಧಿನಿಯಮ 1966ರಲ್ಲಿ ಹೇಳಿರುವ ವಿಚಾರ. ಇಂಥ ಬಾಕೀದಾರರ ಭೂಮಿ ಅಥವಾ ಚರ ಆಸ್ತಿಯನ್ನು ಮಾರಾಟಕ್ಕಿಡುವ ಮೊದಲು ಜಿಲ್ಲಾಧಿಕಾರಿ ಅಥವಾ ಅವರಿಂದ ಅಧೀಕೃತರಾದ ಯಾವುದೇ ಅಧಿಕಾರಿ ಈ ಬಗ್ಗೆ ಸೂಕ್ತ ನೋಟೀಸು ಅಥವಾ ಪ್ರಕಟಣೆಯನ್ನು ಜಾರಿ ಮಾಡಬೇಕು. ಮಾರಾಟದಿಂದ ಬಂದ ಮೊತ್ತವು ಬಾಕಿಯಿರುವ ಮೊತ್ತಕ್ಕಿಂತ ಕಡಿಮೆ ಎಂದು ಕಂಡು ಬಂದರೆ, ತಹಶೀಲ್ದಾರರು ಇನ್ನಷ್ಟು ಚರ ಆಸ್ತಿಯನ್ನು ಜಪ್ತಿ ಮಾಡಿ

ಮಾರಾಟಕ್ಕೆ ಕ್ರಮ ಕೈಗೊಳ್ಳಬಹುದು. ಎಲ್ಲ ಕಂದಾಯ, ರಾಜಸ್ವ, ನೀರಾವರಿದರ, ಸೆಸ್ಸುಗಳು, ಫೀಜುಗಳು, ಕಂತುಗಳು, ದಂಡಗಳು ಇವೆಲ್ಲವುಗಳನ್ನು ಭೂಕಂದಾಯವನ್ನು ವಸೂಲು ಮಾಡುವ ವಿಧಾನದಿಂದಲೇ ವಸೂಲಿ ಮಾಡಬೇಕು.

ಸರಕಾರದ ಆಕರಣೆ, ಸಂಗ್ರಹ ಮತ್ತು ಬಾಕಿಗಳ ವಿವರ ನೀಡುವ 1985-86ರಿಂದ 1989-90ರ ನಡುವಣ ತಖ್ತೆ

(ಮೊತ್ತ ರೂ.ಗಳಲ್ಲಿ)

| ವರ್ಷ | ಆಕರಣೆ | ಸಂಗ್ರಹ | ಬಾಕಿ |
|---|---|---|---|
| 1985-86 | 1,12,95,873 | 47,51,778 | 36,56,995 |
| 1986-87 | 82,96,847 | 56,07,349 | 26,89,498 |
| 1987-88 | 29,85,775 | 54,08,829 | 25,77,246 |
| 1988-89 | 1,35,51,220 | 76,31,873 | 59,17,347 |
| 1989-90 | 1,60,51,685 | 45,83,862 | 1,14,68,823 |

ತಾಲೂಕುವಾರಾಗಿ 1990-91ರ ಅಂಕಿಗಳು ಹೀಗಿವೆ :

| ತಾಲೂಕು | ಆಕರಣೆ | ಸಂಗ್ರಹ | ಬಾಕಿ |
|---|---|---|---|
| ಮಡಿಕೇರಿ | 61,69,533 | 12,77,565 | 48,49,968 |
| ವೀರರಾಜಪೇಟೆ | 35,89,827 | 20,10,701 | 15,79,118 |
| ಸೋಮವಾರಪೇಟೆ | 81,65,509 | 18,18,564 | 63,46,945 |
| ಒಟ್ಟು | 1,79,24,869 | 51,06,830 | 1,27,56,031 |

ಆಧಾರ : ಜಿಲ್ಲಾಧಿಕಾರಿಗಳ ಕಚೇರಿ, ಕೊಡಗು

## ಭೂಸುಧಾರಣೆ

ಸ್ವಾತಂತ್ರ್ಯಾನಂತರ ದೇಶಾದ್ಯಂತ ಕೈಗೊಂಡ ಭೂಸುಧಾರಣಾ ಕ್ರಮಗಳಿಗೆ ಎರಡು ಉದ್ದೇಶಗಳಿದ್ದವು. 1) ಪ್ರಾಚೀನ ಕಾಲದಿಂದ ನಡೆದು ಬಂದ ಭೂಮಾಲಿಕತ್ವ ಅಥವಾ ಭೂಸಂಬಂಧಗಳಿಂದ ಕೃಷಿ ಉತ್ಪನ್ನದ ಹೆಚ್ಚಳಕ್ಕೆ ತೊಡಕನ್ನುಂಟುಮಾಡುವ ಸಂಗತಿಗಳನ್ನು ಪರಿಹರಿಸಿ ಕೃಷಿ ಉತ್ಪನ್ನವನ್ನು ಉತ್ತಮ ಮಟ್ಟಕ್ಕೆ ಏರಿಸಲು ಪ್ರಯತ್ನಿಸುವುದು. 2) ಕೃಷಿ ವ್ಯವಸ್ಥೆಯಲ್ಲಿನ ಎಲ್ಲ ರೀತಿಯ ಸಾಮಾಜಿಕ ಅನ್ಯಾಯ ಮತ್ತು ಶೋಷಣೆಗಳನ್ನು ತೊಡೆದುಹಾಕಿ ಸಾಗುವಳಿದಾರನಿಗೆ ಭದ್ರತೆಯನ್ನು ಒದಗಿಸಿ ಗ್ರಾಮೀಣ ಜನತೆಗೆ ಸಮಾನ ಸ್ಥಾನಮಾನ ಮತ್ತು ಸಮಾನ ಅವಕಾಶಗಳ ವಾತಾವರಣವನ್ನು ಸೃಷ್ಟಿಸುವುದು. ಈ ಜಿಲ್ಲೆಯಲ್ಲಿ ಮುಖ್ಯವಾಗಿ ಸಣ್ಣ ಪ್ರಮಾಣದ ಹಿಡುವಳಿಗಳ ಸಂಖ್ಯೆ ಹೆಚ್ಚಿನದಾಗಿತ್ತು. ಭೂಮಿಯನ್ನು ಬೇರೆ ಬೇರೆ ಗೇಣಿದಾರಿಕೆಯ ವಿಧಾನಗಳಿಂದ ಕೃಷಿ ಮಾಡುವವರಿಗೆ ಭೂಮಾಲಿಕರು ನೀಡಿದ್ದರೂ ಗೇಣಿದಾರ ಮತ್ತು ಮಾಲಿಕರ ನಡುವಣ ಸಂಬಂಧ ಹಿತಕರವಾಗಿತ್ತು. ಮಾಲಿಕ ಮತ್ತು ಗೇಣಿದಾರನ ನಡುವೆ ಯಾವುದೇ ಭೂಸಂಬಂಧೀ ಘರ್ಷಣೆ ಅಥವಾ ತಕರಾರುಗಳು ಇದ್ದುವೆಂಬುದನ್ನು ಸೂಚಿಸುವ ಯಾವುದೇ ದಾಖಲೆಗಳು ಈ

ಜಿಲ್ಲೆಯಲ್ಲಿ ಇಲ್ಲ. ಭೂಸುಧಾರಣೆಗಳ ಅವಶ್ಯಕತೆ ಕಂಡು ಬಂದುದು ರೈತರಿಗೆ ತಮ್ಮ ಭೂಮಿಯನ್ನು ಯಾವುದೇ ಇತಿಮಿತಿ ಇಲ್ಲದೆ ವರ್ಗಾಯಿಸಲು ಇಲ್ಲವೇ ಗೇಣಿಗೆ ಕೊಡಲು ಇರುವ ಹಕ್ಕಿನಿಂದಾಗಿ ಉಂಟಾಗುವ ಗೇಣಿದಾರರ ಸಮಸ್ಯೆಗಳ ಪರಿಹಾರಕ್ಕೆ ಕಾನೂನು ಮುಖಾಂತರ ಕ್ರಮ ಕೈಕೊಳ್ಳಬೇಕೆಂಬುದು ಪ್ರಥಮ ಪಂಚವಾರ್ಷಿಕ ಯೋಜನೆಯ ಆಶಯವೇ ಆಗಿತ್ತು. ಯೋಜನಾ ಆಯೋಗದ ಶಿಫಾರಸಿನಿಂದ ಗೇಣಿದಾರನಿಗೆ (ಒಕ್ಕಲೆಬ್ಬಿಸದಂತೆ) ಭದ್ರತೆ, ಗೇಣಿಯ ಖಚಿತತೆ ಮತ್ತು ತಾನು ಸಾಗು ಮಾಡುವ ಭೂಮಿಯನ್ನು ಖರೀದಿ ಮಾಡುವ ಹಕ್ಕನ್ನು ನೀಡಲಾಗಿತ್ತು.

ಮೈಸೂರು (ಕರ್ನಾಟಕ) ರಾಜ್ಯ ಸರಕಾರವು 11-3-1957 ರಂದು ಕೊಡಗು ಗೇಣಿದಾರರ ವಿಶೇಷಾಜ್ಞೆಯನ್ನು ಜಾರಿ ಮಾಡುವವರೆಗೆ ಕೊಡಗಿನಲ್ಲಿ ಭೂ ಸುಧಾರಣೆಗೆ ಸಂಬಂಧಿಸಿ ಯಾವುದೇ ಕಾನೂನು ಇರಲಿಲ್ಲ. ಈ ವಿಶೇಷಾಜ್ಞೆ ಮತ್ತು ಮುಂದೆ ಮಂಜೂರಾದ ಕೊಡಗು ಗೇಣಿದಾರರ ಅಧಿನಿಯಮಗಳು ಮುಂದೆ ಬರಲಿರುವ ಪರಿಪೂರ್ಣ ಸ್ವರೂಪದ ಭೂ ಸುಧಾರಣ ಕಾನೂನಿನ ಜಾರಿಯ ಮೊದಲಿನ ಮಧ್ಯಂತರ ಕಾಲಾವಧಿಗಾಗಿ ಮಾಡಲಾದ ತಾತ್ಪೂರ್ತಿಕ ಕ್ರಮಗಳಾಗಿದ್ದವು. ಕೊಡಗು ಗೇಣಿ ಅಧಿನಿಯಮದಂತೆ ಗೇಣಿಯು ಭೂಮಿಯ ಉತ್ಪನ್ನದ ಮೂರನೇಯ ಒಂದಂಶವನ್ನು ಮೀರಬಾರದು ಮತ್ತು ಭೂಮಾಲಿಕರು ಗೇಣಿದಾರನ ಒಕ್ಕಲೆಬ್ಬಿಸಬಾರದು ಎಂದು ಆದೇಶ ನೀಡಲಾಯಿತು. ಗೇಣಿದಾರನ ಭೂಮಿಯನ್ನು ಬರವಣಿಗೆಯ ಮೂಲಕ ಮಾತ್ರ ತ್ಯಜಿಸಬೇಕು. ಸಾಗುವಳಿದಾರರು ತ್ಯಜಿಸಿದ ಭೂಮಿಯು ಸರಕಾರದ ನಿರ್ವಹಣೆಗೆ ಸಂದು, ಅಂಥ ಭೂಮಿಗಳನ್ನು ಸಹಕಾರಿ ಕೂಡು ಕೃಷಿ ಸಂಘಗಳು, ಕೃಷಿ ಕಾರ್ಮಿಕರು, ಭೂರಹಿತರು ಹಾಗೂ ಕೃಷಿಕರಿಗೆ ನೀಡಬೇಕಾಗಿತ್ತು.

ರಾಜ್ಯ ಪುನರ್ಘಟನೆಯ ನಂತರ ಭೂಸುಧಾರಣ ಸಮಿತಿಯೊಂದರ ನೇಮಕದ ಬಗ್ಗೆ ಒತ್ತಾಯವು ಮೇಲಿಂದ ಮೇಲೆ ಬರಲು ಮೈಸೂರು ಗೇಣಿದಾರಿಕೆ ಮತ್ತು ಕೃಷಿ ಭೂಮಿ ಕಾನೂನುಗಳ ಸಮಿತಿಯನ್ನು 10-5-1957ರಲ್ಲಿ ನೇಮಿಸಲಾಯಿತು. ಈಗಿರುವ ಗೇಣಿದಾರಿಕೆ ಮತ್ತು ಕೃಷಿ ಭೂಮಿ ಕಾನೂನುಗಳ ಪರಿಶೀಲನೆ ಮಾಡಿ ಸಮಗ್ರ ಭೂ ಸುಧಾರಣಾ ಕ್ರಮಗಳ ಬಗ್ಗೆ ಶಿಫಾರಸು ಮಾಡಲು ಈ ಸಮಿತಿಯನ್ನು ನೇಮಿಸಲಾಯಿತು. ಸಮಿತಿಯು 1957ರಲ್ಲಿ ವರದಿ ಸಲ್ಲಿಸಲು ಅದರ ಶಿಫಾರಸುಗಳನ್ನು ಗಮನಿಸಿ ಮೈಸೂರು ಭೂ ಸುಧಾರಣಾ ಮಸೂದೆಯನ್ನು 1958ರಲ್ಲಿ ವಿಧಾನಮಂಡಳದಲ್ಲಿ ಮಂಡಿಸಿ 1961ರಲ್ಲಿ ಅದನ್ನು ಸ್ವೀಕರಿಸಲಾಯಿತು. ಈ ಕಾನೂನಿನಂತೆ 27 ಪ್ರಮಾಣಿತ ಎಕರೆ ಭೂಮಿಯನ್ನು ಭೂ ಹಿಡುವಳಿಯ ಮಿತಿಯಾಗಿ ನಿರ್ಣಯಿಸಲಾಯಿತು. ಮುಂದೆ ಭೂಮಿ ಪಡೆಯುವವರ ಹಿಡುವಳಿ 18 ಪ್ರಮಾಣಿತ ಎಕರೆಗೆ ಮೀರಿರಬಾರದೆಂದು ನಿರ್ಣಯವಾಯಿತು. ಈ ಕಾನೂನಿನ ಪ್ರಕರಣ 2 (32) ರಂತೆ ಒಂದು ಪ್ರಮಾಣಿತ ಎಕರೆ ಎಂದರೆ ಒಂದನೇ ದರ್ಜೆಯ ಒಂದು ಎಕರೆ ಭೂಮಿ, ಅಥವಾ ಇದಕ್ಕೆ ಸಂಬಂಧಿಸಿದ ಅನುಸೂಚಿ (ಶೆಡ್ಯೂಲ್) ನಲ್ಲಿ ಹೇಳಲಾದ ತತ್ಸಮವಾದ ವಿವಿಧ ವರ್ಗದ ಭೂಮಿ. ಈ ಕಾನೂನಿನಲ್ಲಿ ಭೂಮಿಯ ಏಳು ವರ್ಗಗಳನ್ನು ಸೂಚಿಸಿದೆ. ತೋಟಗಾರಿಕೆ ಬೆಳೆಗಳು, ಎಂದರೆ ಕಾಫಿ, ಚಹ, ರಬ್ಬರ್, ಏಲಕ್ಕಿ ಮತ್ತು ಮೆಣಸು, ಹಣ್ಣಿನ ತೋಟಗಳು, ವಿಶಿಷ್ಟ ಫಾರ್ಮ್‌ಗಳು, ಕಬ್ಬು ಬೆಳೆಯುವ ಜಮೀನುಗಳು, ಹಾಗೂ ವ್ಯವಸ್ಥಿತವಾಗಿ ನಿರ್ವಹಿಸಲ್ಪಡುವ ಫಾರ್ಮ್‌ಗಳು ಹಿಡುವಳಿ ಮಿತಿಯಿಂದ ವಿನಾಯತಿ ಪಡೆಯುತ್ತವೆ. ಕೃಷಿಯೇತರ ಉದ್ಯೋಗಸ್ಥರಿಗೆ ಕೃಷಿ ಭೂಮಿಯನ್ನು ವರ್ಗಾಯಿಸುವುದನ್ನು ಕಾನೂನು ಪ್ರತಿಬಂಧಿಸುತ್ತದೆ. ಆದರೆ ಸರಕಾರಕ್ಕೆ, ಸಹಕಾರ ಸಂಘಗಳಿಗೆ ಹಾಗೂ ಭಾರತೀಯ ಕಾಫಿ ಬೋರ್ಡಿಗೆ ವರ್ಗಾಯಿಸುವುದನ್ನು ಪ್ರತಿಬಂಧಿಸಿಲ್ಲ. ಯಾವುದೇ ಭೂಮಿಯನ್ನು ಕೃಷಿ ನಡೆಯದಂತೆ ಇರಗೊಡಬಾರದು ಎಂದು ಕಾನೂನು ಹೇಳಿತಲ್ಲದೆ ಭೂನ್ಯಾಯಮಂಡಳಿಗಳನ್ನು ನೇಮಿಸಿ ನ್ಯಾಯಾಧಿಕಾರಿಗಳನ್ನು ಅವುಗಳಿಗೆ ನೇಮಿಸಲು ಅವಕಾಶ ಮಾಡಲಾಯಿತು. ಈ ನ್ಯಾಯಮಂಡಳಿಗಳ ಮೇಲೆ ಜಿಲ್ಲಾ ನ್ಯಾಯಾಧಿಕಾರಿಗೆ ಮೇಲ್ಮನವಿಯನ್ನು ಒಯ್ಯಬಹುದು. ರಾಜ್ಯ ಶ್ರೇಷ್ಠ ನ್ಯಾಯಾಲಯವು ಕಾನೂನಿನ ಸಮಸ್ಯೆಗಳನ್ನು ಪರಿಗಣಿಸಬಹುದು.

### ಭೂನ್ಯಾಯಮಂಡಳಿ

ಕರ್ನಾಟಕ ಭೂಸುಧಾರಣಾ (ತಿದ್ದುಪಡಿ) ಅಧಿನಿಯಮ 1973ರ ಪ್ರಕರಣ 48 ರಂತೆ ಭೂಸುಧಾರಣಾ ಕಾನೂನುಗಳ ಕಾರ್ಯಾಚರಣೆಯ ಮುಖ್ಯ ವ್ಯವಸ್ಥೆಯಾಗಿ ಭೂನ್ಯಾಯಮಂಡಳಿಗಳನ್ನು ಸ್ಥಾಪಿಸಿ, 1974 ರ ಮಾರ್ಚ್ 1 ರಂದು ಯಾವುದೇ ರೀತಿಯ ಗೇಣಿದಾರಿಕೆಗೆ ಒಳಪಟ್ಟ ಭೂಮಿಯು ಸರಕಾರದ ವಶದಲ್ಲಿದ್ದಂತೆ, ಎಂದು ಈ ಅಧಿನಿಯಮವು ಘೋಷಿಸಿತು. ಯಾವುದೇ ಭೂಮಿಯನ್ನು ಗೇಣಿಗೆ ಪಡೆದವರು ಆ ಭೂಮಿಯ ಮಾಲಿಕತ್ವದ ಹಕ್ಕನ್ನು ಪಡೆಯಲು ಮಂಡಳಿಗೆ ಮನವಿ (ಅರ್ಜಿ) ಮಾಡಿಕೊಳ್ಳಬೇಕು. ಒಂದು ತಾಲೂಕಿನ ಇಂಥ ಮಂಡಳಿಗೆ ಆ ತಾಲೂಕು ಯಾವ ಉಪ ವಿಭಾಗಕ್ಕೆ ಒಳಪಟ್ಟಿದೆಯೋ ಅದರ ಉಪ ಆಯುಕ್ತರು ಅಧ್ಯಕ್ಷರಾಗಿದ್ದು ತಹಶೀಲ್ದಾರ ಅಥವಾ ಭೂಸುಧಾರಣಾ

ವಿಶೇಷ ತಹಶೀಲ್ದಾರರು ಇದರ ಕಾರ್ಯದರ್ಶಿಗಳಾಗಿರುವರು. ಗೇಣಿದಾರನು ನಿಜವಾದ ಗೇಣಿದಾರನೇ ಎಂದು ಸಮಗ್ರ ಪರಿಶೀಲನೆ ನಡೆಸಿ ಅದರ ಮಾಲಿಕತ್ವದ ಹಕ್ಕನ್ನು ನಿರ್ಣಯಿಸುವುದು, ಹಕ್ಕುಳ್ಳ ಗೇಣಿದಾರರಿಗೆ ಮಾಲಿಕತ್ವ ನೀಡುವುದು ಹಾಗೂ ಹೆಚ್ಚುವರಿ ಭೂಮಿಯನ್ನು ದುರ್ಬಲ ವರ್ಗದವರಿಗೆ, ಭೂರಹಿತ ಕಾರ್ಮಿಕರಿಗೆ ಮತ್ತು ಭೂಮಿ ಕಳೆದುಕೊಂಡ ಗೇಣಿದಾರ ಮುಂತಾದವರಿಗೆ ನೀಡುವುದು ಇತ್ಯಾದಿ ಕಾರ್ಯಗಳನ್ನು ಮಂಡಳಿಗೆ ಒಪ್ಪಿಸಲಾಗಿತ್ತು. ಮಂಡಳಿಯ ನಿರ್ಣಯದ ವಿರುದ್ಧ ಮೇಲ್ಮನವಿ ಸ್ವೀಕರಿಸಲು ಶ್ರೇಷ್ಠ ನ್ಯಾಯಾಲಯಕ್ಕೆ ಮಾತ್ರ ಅಧಿಕಾರವಿತ್ತು.

ಆದರೆ 26.5.1986 ರಿಂದ ಭೂಸುಧಾರಣಾ ಮೇಲ್ಮನವಿ ಮಂಡಳಿಯನ್ನು ಪ್ರತೀ ಜಿಲ್ಲೆಯಲ್ಲಿ ಭೂಸುಧಾರಣಾ ಕಾನೂನಿನ ಪರಿಚ್ಛೇದ 116 (ಎ)ಯಂತೆ ಸ್ಥಾಪಿಸಲಾಯಿತು. ಇದರಲ್ಲಿ ಒಬ್ಬ ನ್ಯಾಯಾಧಿಕಾರಿ ಹಾಗೂ ಒಬ್ಬ ಕಂದಾಯ ಇಲಾಖಾ ಅಧಿಕಾರಿ, ಹೀಗೆ ಇಬ್ಬರು ಸದಸ್ಯರಿದ್ದರು. ಶ್ರೇಷ್ಠ ನ್ಯಾಯಾಲಯಕ್ಕೆ ಒಯ್ಯಲಾಗಿದ್ದು ತೀರ್ಮಾನವಾಗದೇ ಇದ್ದ ಮೇಲ್ಮನವಿಗಳೆಲ್ಲ ಈ ಆಯಾ ಜಿಲ್ಲಾ ಮಂಡಳಿಗೇ ಕಳುಹಿಸಲ್ಪಟ್ಟವು. ಕೆಲವು ಕಾಲದ ನಂತರ ಈ ಜಿಲ್ಲಾ ಮೇಲ್ಮನವಿ ನ್ಯಾಯಾಲಯಗಳನ್ನು ಮತ್ತೆ ರದ್ದು ಮಾಡಿದರು. (8–10–1990) ಶ್ರೇಷ್ಠ ನ್ಯಾಯಾಲಯವು ಮತ್ತೆ ತನ್ನ ಕಕ್ಷೆಗೆ ಬಂದ ಈ ಮೇಲ್ಮನವಿಗಳ ಕಾಗದ ಪತ್ರಗಳನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕಾದಿರಿಸಲು ಸೂಚಿಸಿದೆ.

**ಹೆಚ್ಚುವರಿ ಭೂಮಿಯ ವಿತರಣೆ**

ಭೂಹಿಡುವಳಿ ಮಿತಿಯನ್ನು ಜಾರಿಗೊಳಿಸಿದ ಮೇಲೆ ಸರಕಾರದ ವಶಕ್ಕೆ ಬಂದ ಹೆಚ್ಚುವರಿ ಭೂಮಿಯನ್ನು ಭೂನ್ಯಾಯಮಂಡಳಿಯು ಕೆಳಗಿನ ಅನುಕ್ರಮದ ಆಯ್ಕೆಯಂತೆ ವಿತರಣೆ ಮಾಡಬಹುದು : ಭೂರಹಿತ ಕೃಷಿಕರು, ಕೃಷಿ ಕಾರ್ಮಿಕರು, ಹಾಗೂ ಹಕ್ಕು ಕಳೆದುಕೊಂಡ ಗೇಣಿದಾರರು, ಇವರಿಗೆ ಮೂಲಭೂತ ಹಿಡುವಳಿಗೆ ಕಡಿಮೆಯಾಗದಂತೆ ಭೂಮಿ ಪ್ರದಾನ ಮಾಡಬೇಕು. ಮೂಲಭೂತ ಹಿಡುವಳಿ ಎಂದರೆ ಲಾಭದಾಯಕ ಕೃಷಿ ನಡೆಸಲು ಬೇಕಾಗುವ ಕನಿಷ್ಠ ವಿಸ್ತಾರದ ಭೂಮಿ. 2) ಮೂಲಭೂತ ಹಿಡುವಳಿ ಹೊಂದಿರದ ಗೇಣಿದಾರರು, ಹಕ್ಕು ಕಳೆದುಕೊಂಡ ಗೇಣಿದಾರರು ಹಾಗೂ ಮೂಲಭೂತ ಹಿಡುವಳಿಗೂ ಕಿರಿದಾದ ಭೂಮಿ ಹೊಂದಿರುವ ಭೂಮಾಲಿಕರು. 3) ಕೌಟುಂಬಿಕ ಹಿಡುವಳಿಯಷ್ಟು ಭೂಮಿ (ಇದು ಮೂಲಭೂತ ಹಿಡುವಳಿಯ ಮೂರರಷ್ಟಾಗುತ್ತದೆ) ಹೊಂದಿರದ ಗೇಣಿದಾರರು ಮತ್ತು ಹಕ್ಕು ಕಳೆದುಕೊಂಡ ಗೇಣಿದಾರರು. 4) ಸ್ವತಃ ಕೃಷಿ ಕಾರ್ಯ ಕೈಕೊಳ್ಳಲು ಸಿದ್ಧರಿರುವ ಇತರ ಕೃಷಿಕರು.

ಭೂಮಿ ಪಡೆದಾತನು ಭೂಮಿಯ ಮೌಲ್ಯವನ್ನು ಅದರ ಬಡ್ಡಿಯನ್ನು ಸರಕಾರಕ್ಕೆ 15ಕ್ಕೆ ಮೀರದ ವಾರ್ಷಿಕ ಕಂತುಗಳಲ್ಲಿ ಅಥವಾ ಒಂದೇ ಗಂಟಿನಲ್ಲಿ ಕೊಡಬಹುದು.

**ಕೊಡಗು ಜಿಲ್ಲೆಯ ಭೂನ್ಯಾಯಮಂಡಳಿಗಳ ಸಾಧನೆ.**

| ಕ್ರ. ಸಂ. | ವಿವರಗಳು | ಮಡಿಕೇರಿ ತಾ॥ | ವೀರರಾಜಪೇಟೆ ತಾ॥ | ಸೋಮವಾರಪೇಟೆ ತಾ॥ | ಒಟ್ಟು |
|---|---|---|---|---|---|
| 1 | 2 | 3 | 4 | 5 | 6 |
| 1. | ಮಂಡಳಿಗೆ ಬಂದ ಪ್ರಕರಣಗಳು | 973 | 827 | 1,960 | 3,760 |
| 2. | ತೀರ್ಮಾನವಾದ ಪ್ರಕರಣಗಳು | | | | |
| | ಅ) ಗೇಣಿದಾರರ ಪರ | 194 | 186 | 556 | 936 |
| | ಆ) ಮಾಲಿಕನ ಪರ | — | — | — | — |
| | ಇ) ತಿರಸ್ಕೃತ | 786 | 641 | 1,404 | 2,810 |

| 1 | 2 | 3 | 4 | 5 | 6 |
|---|---|---|---|---|---|
| 3. | ಶ್ರೇಷ್ಠ ನ್ಯಾಯಾಲಯಕ್ಕೆ ಹೋದ ಪ್ರಕರಣಗಳು | | | | |
| | ಅ) ನ್ಯಾಯಮಂಡಳಿಯಿಂದಲೇ | — | 38 | — | 38 |
| | ಆ) ಗೇಣಿದಾರನಿಂದ | — | 41 | 57 | 98 |
| | ಇ) ಮಾಲಿಕನಿಂದ | 11 | 97 | 47 | 155 |
| 4. | ಶ್ರೇಷ್ಠ ನ್ಯಾಯಾಲಯದಲ್ಲಿರುವ ಪ್ರಕರಣಗಳು | — | 17 | — | 17 |
| 5. | ಗೇಣಿದಾರರಿಗೆ ಸಂದ ಭೂಮಿ (ಎಕ್ರೆ–ಸೆಂಟ್ಸ್) | 525.25 | 1,019–49 | 1,706–70 | 3,247–44 |
| 6. | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸಂದ ಭೂಮಿ | — | 12–57 | 83–50 | 95–87 |
| 7. | ವಿತರಣೆಗೆ ಸಿಗಲಿರುವ ಭೂಮಿ | 1–30 | 1–65 | 10.00 | 12.95 |
| 8. | ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳಲ್ಲಿ ಭೂಮಿ ಪಡೆದವರು | — | 2- | 4/4 | 10 |

(ಮಾಹಿತಿ : ಆಸಿಸ್ಟೆಂಟ್ ಕಮಿಷನರ್, ಕೊಡಗು)

**ತುಂಡು ಹಿಡುವಳಿಗಳ ಒಗ್ಗೂಡಿಸುವಿಕೆ**

ಆಸ್ತಿ ಪಾಲುಗಾರಿಕೆ ಹಾಗೂ ಆರ್ಥಿಕ ಅವಶ್ಯಕತೆ ಮುಂತಾದ ಕಾರಣಗಳಿಂದ ಕೃಷಿ ಭೂಮಿಗಳು ಮಿತಿಮೀರಿ ವಿಭಜಿತವಾಗಿ ಕೃಷಿ ಉತ್ಪನ್ನಕ್ಕೆ ಹಾನಿಯಾಗುವುದನ್ನು ತಪ್ಪಿಸಲು ಹಾಗೂ ತುಂಡು ಹಿಡುವಳಿಗಳ ಒಗ್ಗೂಡಿಕೆಯನ್ನು ಸಾಧಿಸಲು ಮೈಸೂರಿನ ಹಿಡುವಳಿಗಳ ಖಂಡನೆ ತಡೆಯುವ ಮತ್ತು ಒಗ್ಗೂಡಿಸುವ ಅಧಿನಿಯಮ 1964 ಸ್ವೀಕೃತವಾಯಿತು. ಈ ಕಾನೂನಿನ ಫಲಿತಾಂಶವಾಗಿ ಸೂಕ್ತ ಪ್ರಮಾಣಿತ ಪ್ರದೇಶ (ಈ ಕಾನೂನಿನ ಪ್ರಕರಣ (3) ರಲ್ಲಿ ಹೇಳಿರುವಂತೆ) ಕ್ಕೂ ಕಡಿಮೆ ಗಾತ್ರದ ಹಿಡುವಳಿಯು ಲಾಭಕರವಲ್ಲವೆನಿಸದಿದ್ದಲ್ಲಿ ಅದನ್ನು ತುಂಡು ಭೂಮಿಯೆಂದು ಪರಿಗಣಿಸಲಾಗುವುದು. ಭೂಮಿಗಳ ವರ್ಗೀಕರಣಕ್ಕೆ ಅನುಗುಣವಾಗಿ ಪ್ರಮಾಣಿತ ಕನಿಷ್ಠ ಭೂಮಿ ಅರ್ಧ ಎಕ್ರೆಯಿಂದ ನಾಲ್ಕು ಎಕ್ರೆಯವರೆಗೆ ಇರುವುದು. ಕೃಷಿಯಿಂದ ಲಾಭಕರವೆನಿಸದ ಯಾವುದೇ ಭೂಮಿಯ ಘಟಕವನ್ನು ತುಂಡು ಹಿಡುವಳಿಯೆಂದು ಪರಿಗಣಿಸಲಾಗುವುದು. ಈ ಭೂಮಿಗೆ ತಗಲಿಕೊಂಡಿರುವ ಭೂಮಿಯುಳ್ಳವನಿಗೇ ವಿನಾ ಇನ್ನಾರಿಗೂ ಈ ಭೂಮಿಯನ್ನು ಇದರ ಮಾಲಿಕನು ಮಾರಲಾಗದು. ಅಲ್ಲದೆ ಈಗಿರುವ ತುಂಡು ಭೂಮಿಗಳ ಒಗ್ಗೂಡಿಸುವಿಕೆ (ಕನ್ಸಾಲಿಡೇಶನ್) ಯಲ್ಲಿ ಭೂಮಿಯನ್ನು ಬಿಟ್ಟುಕೊಡುವ ಮಾಲಿಕನಿಗೆ ಪರಿಹಾರ ನೀಡಲು ಅವಕಾಶವಿದೆ. ಇಂಥ ಭೂಮಿಯನ್ನು ಈ ಒಗ್ಗೂಡಿಸುವ ಕಾರ್ಯ ಕ್ರಮದಂತೆ ಭೂಮಿ ಪಡೆದವನು ಒಂದು ವರ್ಗಾವಣೆಯ ಪ್ರಮಾಣ ಪತ್ರವನ್ನು ಪಡೆಯುತ್ತಾನೆ. ಇದಕ್ಕೆ ನೋಂದಣಿ ವೆಚ್ಚ ಅಥವಾ ಛಾಪಾ ಕಾಗದದ ವೆಚ್ಚ (ಸ್ಟ್ಯಾಂಪ್ ಡ್ಯೂಟಿ) ಇರುವುದಿಲ್ಲ.

**ಸರಕಾರೀ ಭೂಮಿಯ ಅನಧಿಕೃತ ಅತಿಕ್ರಮಣ**

ಕೊಡಗಿನಲ್ಲಿದ್ದ ವಿವಿಧ ಭೂಹಿಡುವಳಿ ಹಕ್ಕುಗಳನ್ನು ಕೊಡಗು ಭೂಮಿ ಮತ್ತು ಕಂದಾಯ ವಿನಿಮಯ 1899ರ ನಿಯಮಗಳಿಗೆ ಒಳಪಡಿಸಲಾಗಿದ್ದು ಮುಂದೆ 1964ರ ಕರ್ನಾಟಕ ಭೂ ಕಂದಾಯ ಅಧಿನಿಯಮದ ನಿಯಮಗಳಿಗೆ ಒಳಪಡಿಸಲಾಯಿತು. ಆದರೆ ಹಿಂದೆ ಇದ್ದ ಹಕ್ಕು ಮತ್ತು ಸವಲತ್ತುಗಳನ್ನು ಹೊಸ ಕಾನೂನಿನ 202ನೇಯ ಪ್ರಕರಣ ದಂತೆ ರಕ್ಷಿಸಲಾಗಿತ್ತು. ಆದರೆ 1977ರಲ್ಲಿ ಕೆಲವೊಂದು ಇನಾಮುಗಳ ರದ್ಧತಿ ಕಾನೂನಿನಂತೆ ಜಮ್ಮ, ಜಹಗೀರು, ಉಂಬಳಿ, ಜೋಡಿ, ಭಟ್ಟಮಾನ್ಯ ಮತ್ತು ಸರ್ವಮಾನ್ಯ ಹಕ್ಕಿನ ಹಿಡುವಳಿಗಳೂ ಈ ಕಾನೂನಿನ ಪರಿಧಿಗೆ ಸೇರಿದ್ದವು. ಹೀಗಾಗಿ ಈ ಭೂಮಿಗಳನ್ನು ಕೃಷಿ ಮಾಡುವ ಅನೇಕ ರೈತರು ತಮಗೆ ಅವುಗಳ ಹಿಡುವಳಿ (ಅಕ್ಯುಪೆನ್ಸಿ) ಹಕ್ಕುಗಳನ್ನು ಕೊಡ ಬೇಕೆಂದು ಭೂನ್ಯಾಯ ಮಂಡಳಿಗಳಿಗೆ ಅರ್ಜಿ ಹಾಕಿದರು. ಕರ್ನಾಟಕ ಏಕೀಕರಣಕ್ಕೆ ಪೂರ್ವದಲ್ಲಿ ಕೊಡಗಿನಲ್ಲಿ ಇದ್ದ ಜಮ್ಮ ಮತ್ತು ಬಾಣೆ ಭೂಮಿಗಳ ಹಕ್ಕು ಆ ಕಾಲದಲ್ಲಿ ಇದ್ದ ನಿಯಮಗಳಂತೆ ಮತ್ತು ಮುಂದೆ ಸರಕಾರವು ಆಗಾಗ ಹೊರಡಿಸಿದ ಸುಧಾರಣಾ ಆದೇಶಗಳಂತೆ ಗಮನಿಸಲ್ಪಡ ಬೇಕೆಂದು ಸರಕಾರವು ಆದೇಶ ನೀಡಿತು. 1964ರ ಕರ್ನಾಟಕ ಭೂ ಕಂದಾಯ ಅಧಿನಿಯಮದ ಪ್ರಕರಣ 79 (2) ರಂತೆ ಇಂಥ ಭೂಮಿಗಳಿಗೆ ಸಂಬಂಧಿಸಿದ ಸವಲತ್ತುಗಳು ಸರಕಾರವು ಕಾಲಕಾಲಕ್ಕೆ ಹೊರಡಿಸಲಿರುವ ಸಾಮಾನ್ಯ ಮತ್ತು ವಿಶೇಷ ಆದೇಶಗಳಿಗೆ ಒಳಪಟ್ಟಂತೆ ಮುಂದುವರಿಯಬೇಕೆಂದು ಹೇಳಿತ್ತು. ಮುಂದೆ ರಾಜ್ಯ ಪುನರ್ಘಟನೆಯ ನಂತರ ಹೊರಡಿಸಿದ ಕೊಡಗಿನ ಬಗೆಗಿನ ಆಜ್ಞೆಗಳು ಸಕ್ರಮವಾಗಿಲ್ಲ ವೆಂದು ಪ್ರಕಟಿಸಿ ಹೊಸ ನಿಯಮಗಳನ್ನು ಹಿಂದೆಗೆದುಕೊಳ್ಳ ಲಾಯಿತು.

ಕುಮಕಿ ಭೂಮಿ ಹಾಗೂ ಅಂಥ ಇತರ ಭೂಮಿಗಳಿಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಸವಲತ್ತುಗಳನ್ನು ಮುಂದು ವರಿಸಬೇಕು. ಆದರೆ ಹೊಸ ನಿಯಾಮಾವಳಿಗಳ ರಚನೆ ಯಾಗುವವರೆಗೆ ಪಟ್ಟಾ ಹಕ್ಕುಗಳನ್ನು ನೀಡಬಾರದು ಎಂದು ಸರಕಾರವು ನಿರ್ಧರಿಸಿತ್ತು.

## ಇತರ ತೆರಿಗೆಗಳು

ಭೂಕಂದಾಯವೇ ಅಲ್ಲದೆ ರಾಜ್ಯ ಸರಕಾರವು ಇತರ ಹಲವು ನೇರ ಮತ್ತು ಪರೋಕ್ಷ ತೆರಿಗೆಗಳನ್ನು ವಸೂಲಿ ಮಾಡುತ್ತದೆ. ಇದರಲ್ಲಿ ಅಬ್ಕಾರಿ, ಮಾರಾಟ ತೆರಿಗೆ, ಛಾಪಾಕಾಗದ ಶುಲ್ಕ (ಸ್ಟ್ಯಾಂಪ್ ಡ್ಯೂಟಿ), ವಾಹನ ತೆರಿಗೆ ಮುಂತಾದವು ಮುಖ್ಯ. ಕಾಲಕಾಲಕ್ಕೆ ಇವುಗಳ ಆಕರಣೆಯಲ್ಲೂ ವ್ಯತ್ಯಾಸವಾಗುತ್ತದೆ.

**ಮಾರಾಟ ತೆರಿಗೆ**

ಮಾರಾಟ ತೆರಿಗೆಯು ರಾಜ್ಯಾದಾಯದ ಒಂದು ಪ್ರಮುಖ ಭಾಗವಾಗಿದ್ದು ಮಾರಾಟ ತೆರಿಗೆ ಇಲಾಖೆಯು ಈ ಕೆಳಗಿನ ಅಧಿನಿಯಮಗಳನ್ನು ಕಾರ್ಯಾಚರಣೆಗೆ ತರುತ್ತದೆ. 1) ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ 1952, 2) ಕೇಂದ್ರ ಮಾರಾಟ ತೆರಿಗೆ ಅಧಿನಿಯಮ 1956, 3) ಕರ್ನಾಟಕ ಮನರಂಜನೆ ಕಾನೂನು 1958, 4) ಕರ್ನಾಟಕ ಕೃಷಿ ಆದಾಯ ತೆರಿಗೆ ಅಧಿನಿಯಮ 1957, 5) ಕರ್ನಾ ಟಕ ನೌಕರಿ, ವ್ಯಾಪಾರ, ವೃತ್ತಿ ಮತ್ತು ಉದ್ಯೋಗಗಳ ಅಧಿ ನಿಯಮ 1976, 6) ಕರ್ನಾಟಕ ಭೋಗವಸ್ತು (ಹೋಟೆಲ್ ಮತ್ತು ವಸತಿಗೃಹ)ಗಳ ತೆರಿಗೆ ಅಧಿನಿಯಮ 1976, 7) ಕರ್ನಾಟಕ ಉಪಭೋಗ, ಬಳಕೆ ಮತ್ತು ಮಾರಾಟಕ್ಕೆ ಸ್ಥಳೀಯ ಕ್ಷೇತ್ರಗಳಿಗೆ ಸರಕಿನ ಪ್ರವೇಶ ತೆರಿಗೆ, 1979.

ಮಾರಾಟ ತೆರಿಗೆಯನ್ನು ಎರಡು ಅಧಿನಿಯಮಗಳು ನಿಯಂತ್ರಿಸುತ್ತವೆ. ಅವೆಂದರೆ, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ 1957 ಮತ್ತು ಕೇಂದ್ರ ಮಾರಾಟ ತೆರಿಗೆ ಅಧಿನಿಯಮ, 1956. ರಾಜ್ಯ ರಾಜ್ಯಗಳ ನಡುವಣ ವ್ಯಾಪಾರಕ್ಕೆ ಸಂಬಂಧಿಸಿದಂತೆ ಮಾರಾಟ ತೆರಿಗೆಯನ್ನು ಸಂಗ್ರಹಿಸಿ ಅದನ್ನು ತಾನೇ ಉಳಿಸಿಕೊಳ್ಳಲು ಎರಡನೇಯ ಕಾನೂನು ಅವಕಾಶವಿತ್ತಿದೆ. ಈಗ ಇರುವ ಮಾರಾಟ ತೆರಿಗೆಯ ವ್ಯವಸ್ಥೆಯಲ್ಲಿ ಏಕಸ್ಥಾನೀಯ ಮತ್ತು ಬಹು ಸ್ಥಾನೀಯ ವಸೂಲಾತಿಯ ವ್ಯವಸ್ಥೆ ಇದೆ. ಉತ್ಪಾದಕ, ಆಮದುದಾರರಿಂದ ಹಿಡಿದು ಅಂತಿಮವಾಗಿ ಬಳಕೆದಾರರ ವರೆಗಿನ ಯಾವುದಾದರೂ ಒಂದು ಹಂತದಲ್ಲಿ ಮಾತ್ರ ಏಕ ಸ್ಥಾನೀಯ ತೆರಿಗೆಯನ್ನು ವಸೂಲು ಮಾಡುವರು. ಬಹು ಸ್ಥಾನೀಯ ತೆರಿಗೆಯು ವಸ್ತುವು ಮಾರಾಟದ ಕಾಲಕ್ಕೆ ಕೈಬದಲಾದಾಗಲೆಲ್ಲ ಅದರ ವ್ಯಾಪಾರಿಯಿಂದ ಸಂಗ್ರಹಿಸಲ್ಪಡು ವುದು. ಏಕಸ್ಥಾನೀಯ ತೆರಿಗೆಯ ಬೆಲೆಯು ಶೇಕಡ ಒಂದ ರಿಂದ ಶೇ. 150ರ ವರೆಗೆ ಇರುವುದು. 1986 ರಿಂದ ಇದನ್ನು ಶೇ. 200ಕ್ಕೆ ಏರಿಸಿದೆ. ವ್ಯಾಪಾರದಲ್ಲಿ ವಿನಿಮಯ ಗೊಳ್ಳುವ ಸುಮಾರು 293 ಮುಖ್ಯ ವಸ್ತುಗಳಲ್ಲಿ 178 ವಸ್ತುಗಳು ಏಕಸ್ಥಾನೀಯ ತೆರಿಗೆಗೆ ಒಳಪಟ್ಟಿವೆ; ಉಳಿದವು ಬಹುಸ್ಥಾನೀಯ ತೆರಿಗೆ ಪಾವತಿಗೆ ಬದ್ಧವಾದವು. ಸಾಮಾನ್ಯ

ಬಳಕೆಯ ವಸ್ತುಗಳೆಲ್ಲವೂ ವಿಶೇಷ ಮಹತ್ವವಾದವುಗಳೆಂದು ಪರಿಗಣಿಸಿ ಶೇಕಡ 4ರ ದರದಲ್ಲಿ ಮಾರಾಟಕ್ಕೆ ಒಳಪಟ್ಟಿವೆ. ಮದ್ಯಗಳು ಅಬಕಾರಿ ಸುಂಕಕ್ಕೆ ಒಳಪಡದಿದ್ದಲ್ಲಿ ಶೇ. 200 ತೆರಿಗೆಗೆ ಬಾಧ್ಯವಾಗಿವೆ. 1979ರ ಮಾರ್ಚ್ 27 ರಿಂದ ಮಾರಾಟ ತೆರಿಗೆಯ ಮೇಲೆ ಶೇ. 10 ರಷ್ಟು ಅಧಿಕ ತೆರಿಗೆ (ಸರ್‌ಚಾರ್ಜ್)ಯನ್ನು ಜಾರಿಮಾಡಲಾಗಿದೆ. 1985 ರಿಂದ ಇದನ್ನು ಶೇ. 30 ಕ್ಕೆ ಏರಿಸಿದ್ದು ಇದರಲ್ಲಿ 1984 ರಲ್ಲಿ ಸೇರಿದ್ದ ಶೇ. 10 ಗ್ರಾಮೀಣ ಅಭಿವೃದ್ಧಿ ಸೆಸ್ ಸಹ ಸೇರಿದೆ. ರಾಜ್ಯಗಳ ನಡುವಣ ಮಾರಾಟದ ಮೇಲೆ ತೆರಿಗೆಯನ್ನು ವಸೂಲಿ ಮಾಡಲು 1956ರ ಕೇಂದ್ರ ಮಾರಾಟ ತೆರಿಗೆ ಕಾನೂನು, ರಾಜ್ಯಗಳಿಗೆ ಅಧಿಕಾರ ನೀಡಿದೆ. ಕೇಂದ್ರ ಮಾರಾಟ ತೆರಿಗೆಯು ಬಹುಸ್ಥಾನೀಯ ಹಂತದಲ್ಲಿ ವಸೂಲಾಗುತ್ತದೆ.

1984 ರಿಂದ ಜಾರಿಗೆ ಬಂದ ಅಧಿನಿಯಮದಂತೆ ಯಾವುದೇ ವ್ಯಾಪಾರಿಯ ವಾರ್ಷಿಕ ವಿಕ್ರಯವು 50,000 ರೂ. ಮತ್ತು ಅದಕ್ಕೂ ಹೆಚ್ಚಿದ್ದಲ್ಲಿ ಅವನು ತನ್ನನ್ನು ಇಲಾಖೆಯಲ್ಲಿ 200 ರೂ. ಪಾವತಿ ಮಾಡಿ ನೋಂದಣಿ ಮಾಡಿಕೊಳ್ಳಬೇಕು. ಹಾಗೂ ಆತನ ವಿಕ್ರಯವು ಒಂದು ಲಕ್ಷ ರೂ.ಗೂ ಮೀರಿದ್ದರೆ ಅವನು ಮಾರಾಟ ಕರವನ್ನು ತೆರಬೇಕು. 1985ರ ಆಗಸ್ಟ್ 1 ರಿಂದ ನೋಂದಣಿ ಮಾಡಲು ಇರಬೇಕಾದ ಮಿತಿಯನ್ನು 75,000 ರೂ.ಗೆ ಏರಿಸಿ ನೋಂದಣಿ ಶುಲ್ಕವನ್ನು ರೂ. 250ಕ್ಕೆ ಏರಿಸಿದೆ.

**ಜಿಲ್ಲೆಯಲ್ಲಿ ಮಾರಾಟ ತೆರಿಗೆ ವಸೂಲಾತಿ ವಿವರ**

| ವರ್ಷ | ತೆರಿಗೆದಾರರ ಸಂಖ್ಯೆ | | ಸಂಗ್ರಹವಾದ ತೆರಿಗೆ (ಲಕ್ಷ ರೂ.) | | | ಒಟ್ಟು |
|---|---|---|---|---|---|---|
| | ಕೆ.ಎಸ್.ಟಿ. | ಸಿ.ಎಸ್.ಟಿ. | ಕೆ.ಎಸ್.ಟಿ. | ಸಿ.ಎಸ್.ಟಿ. | ಇತರ ತೆರಿಗೆಗಳು | |
| 1985—86 | 1,244 | 458 | 55.87 | 24.51 | 9.65 | 90.30 |
| 1986—87 | 1,054 | 413 | 67.54 | 31.93 | 0.91 | 100.38 |
| 1987—88 | 1,266 | 479 | 64.84 | 74.82 | 0.70 | 140.36 |
| 1988—89 | 769 | 293 | 46.50 | 19.38 | 0.68 | 66.56 |
| 1989—90 | 971 | 284 | 70.41 | 31.49 | 1.54 | 103.44 |

### ಅಬಕಾರಿ

ರಾಜಸ್ವದಲ್ಲಿ ಗಣ್ಯವಾದ ಭಾಗವೆಂದರೆ ಅಬಕಾರಿ ವಸೂಲಿ. ಡಿಸ್ಟಿಲರಿಗಳಲ್ಲಿ ತಯಾರಾಗುವ ಮದ್ಯಗಳ ಮೇಲೆ ಸೇರಿದ ತೆರಿಗೆ, ಆಮದು ಮಾಡಿದ ಮದ್ಯಗಳ ಮೇಲಿನ ತೆರಿಗೆ, ಸಗಟು ಮತ್ತು ಚಿಲ್ಲರೆ ಮಾರಾಟಗಾರರು, ಬಾರುಗಳು, ಹೋಟೆಲುಗಳು ಇವರ ಮೇಲೆ ಹೇರಿದ ಲೈಸನ್ಸ್‌ಫೀಸು, ಅಂಗಡಿಗಳ ಬಾಡಿಗೆ, ಸೇಂದಿ ಮತ್ತು ಸಾರಾಯಿ ಅಂಗಡಿಗಳ ಗುತ್ತಿಗೆ ಹರಾಜು ಮಾಡಿದಾಗ ಬರುವ ವರಮಾನ, ಸೇಂದಿ ಮತ್ತು ಡಿನೇಚರ್ಡ್ ಸ್ಪಿರಿಟ್‌ಗಳ ಮೇಲೆ ಹೇರಿದ ಫೀಜು, ಡಿನೇಚರ್ಡ್ ಸ್ಪಿರಿಟ್ ನಿರ್ಯಾತ ಸುಂಕ, ಸೇಂದಿ ಮರದ ಮೇಲಣ ತೆರಿಗೆ ಮತ್ತು ಅದಕ್ಕಾಗಿ ಬರುವ ಬಾಡಿಗೆ ಅಲ್ಲದೆ ಕಾನೂನು ಬಾಹಿರವಾಗಿ ಉತ್ಪಾದಿಸುವ, ದಾಸ್ತಾನು ಮಾಡುವ ಹೆಂಡ ಇಳಿಸುವ, ಬಾಟಲಿಗೆ ತುಂಬಿಸಿ ಮಾರಾಟಕ್ಕೆ ಸಿದ್ಧಪಡಿಸುವ, ಸಾಗಿಸುವ, ಆಮದು ಮಾಡುವ ಮುಂತಾದ ವ್ಯವಹಾರ ಮಾಡುವವರ ಮೇಲೆ ಹೇರಿದ ದಂಡ, ಇವೆಲ್ಲ ಈ ಆದಾಯದಲ್ಲಿ ಸೇರಿವೆ. ಮದ್ಯಗಳ ಉತ್ಪಾದನೆ ಮತ್ತು ಸಾಗಣೆಗಳನ್ನು ಪರಿಣಾಮಕಾರಿಯಾಗಿ ತಡೆಯಲು ಮತ್ತು ಅಬಕಾರಿ ಆದಾಯ ವಸ್ತು ಸರಿಯಾಗಿ ವಸೂಲಿ ಮಾಡಲು ಈ ಕೆಳಗಿನ ಕಾನೂನು ಮತ್ತು ನಿಯಮಗಳು ಜಾರಿಯಲ್ಲಿವೆ : 1) 1878ರ ಅಫೀಮು ಅಧಿನಿಯಮ, 2) 1886ರ ಮದ್ರಾಸ್ ಅಬ್ಕಾರಿ ಅಧಿನಿಯಮ, 3) 1915ರ ಅಬ್ಕಾರಿ ನಿಯಮೀಕರಣದ ಅಧಿನಿಯಮ 1, 4) 1930ರ ಅಪಾಯಕಾರೀ ಔಷಧಿಗಳ ಅಧಿನಿಯಮ, 5) 1938ರ ಮದ್ರಾಸ್ ಪಾನಪ್ರತಿಬಂಧ ಅಧಿನಿಯಮ, 6) 1955ರ ಔಷಧೀಯ ಮತ್ತು ಶೃಂಗಾರ ಸಾಧನಗಳ ಅಧಿನಿಯಮ, 7) 1956 ಕೊಡಗು ಪಾನ ಪ್ರತಿಬಂಧ ಅಧಿನಿಯಮ, 8) 1959ರ ಮೈಸೂರು ಪಾನ

ಪ್ರತಿಬಂಧ ಅಧಿನಿಯಮ, 9) 1961ರ ಕರ್ನಾಟಕ ಪಾನ ಪ್ರತಿಬಂಧ ಅಧಿನಿಯಮ ಮತ್ತು 10) 1965ರ ಮೈಸೂರು ಅಬಕಾರಿ ಅಧಿನಿಯಮ.

ಪಾನಪ್ರತಿಬಂಧವು ಜಿಲ್ಲೆಯಲ್ಲಿ ಡಿಸೆಂಬರ್ 1967ರವರೆಗೆ ಜಾರಿಯಲ್ಲಿ ಇದ್ದು ಮದ್ಯವು ವೈದ್ಯಕೀಯ ಸಲಹೆಯಂತೆ ರಹದಾರಿ ಪಡೆದವರಿಗೆ ಮಾತ್ರ ಲಭ್ಯವಿತ್ತು. ಪಾನ ಪ್ರತಿಬಂಧವನ್ನು ರದ್ದು ಮಾಡಿದ ಮೇಲೆ ಸೇಂದಿ, ಭಾರತದಲ್ಲಿ ಉತ್ಪಾದಿಸಿದ ವಿದೇಶೀ ಮದ್ಯ, ಸಾರಾಯಿಯ ಉತ್ಪಾದನೆ, ಆಮದು, ರಫ್ತು, ಮಾರಾಟ ಇವುಗಳಿಗೆ ಅವಕಾಶ ನೀಡಲಾಯಿತು. 1979-80 ರಿಂದ 1981-82ರಲ್ಲಿ ಜಿಲ್ಲೆಯಲ್ಲಿ ಸೇಂದಿ ಮಾರಾಟದ ಮೇಲೆ ಪ್ರತಿಬಂಧವಿತ್ತು. 1982-83ರಲ್ಲಿ ಇದನ್ನು ರದ್ದು ಮಾಡಿದರು. 1990ರಲ್ಲಿ ಸೇಂದಿ ಉತ್ಪಾದನೆ ಮತ್ತು ಮಾರಾಟವನ್ನು ಇಡೀ ರಾಜ್ಯದಲ್ಲಿ ಪ್ರತಿಬಂಧಿಸಲಾಯಿತು (ಮುಂದೆ ದಕ್ಷಿಣ ಕನ್ನಡದಲ್ಲಿ ಮಾತ್ರ ಈ ಪ್ರತಿಬಂಧ ತೆಗೆಯಲಾಗಿದೆ). ಅಬಕಾರಿ ಸುಂಕದಿಂದ ಜಿಲ್ಲೆಯಲ್ಲಿ ಬರುವ ಇತ್ತೀಚಿನ ವರ್ಷಗಳಲ್ಲಿನ ಒಟ್ಟು ಉತ್ಪನ್ನವನ್ನು ಪ್ರತ್ಯೇಕತಖ್ತೆಯನ್ನು ಪು.575ರಲ್ಲಿ ಕೊಟ್ಟಿದೆ. 1989-90ರಲ್ಲಿ ಅಬಕಾರಿಯಿಂದ ಜಿಲ್ಲೆಯಲ್ಲಿ ಬಂದ ಒಟ್ಟು ಆದಾಯ 3.88 ಕೋಟಿ ರೂ. ಆದರೆ 1990-91ರಲ್ಲಿ 4.50 ಕೋಟಿ ರೂ. ಆಗಿತ್ತು.

ಪ್ರಮಾಣದವು. ಇದರಲ್ಲಿ ಮೌಲ್ಯ ಪ್ರಮಾಣದ ಪ್ರಕರಣಗಳಲ್ಲಿ ಕಾಯಂ ಹಸ್ತಾಂತರ ಮಾಡುವ ಅಥವಾ ಮಾರಾಟ ಮಾಡುವ ವಸ್ತುವಿಗೆ ಇರುವ ಬೆಲೆಯನ್ನು ದಸ್ತಾವೇಜಿನಲ್ಲಿ ಉಲ್ಲೇಖ ಮಾಡಿ ಅದರ ಬೆಲೆಯ ಪ್ರಮಾಣದಂತೆ ಛಾಪಾ ಕಾಗದದ ಬೆಲೆಯನ್ನು ಉಲ್ಲೇಖಿಸಲಾಗುತ್ತದೆ. ತಾತ್ಪೂರ್ತಿಕ ಹಸ್ತಾಂತರ ಅಥವಾ ತತ್ಸಮ ವ್ಯವಹಾರಗಳಲ್ಲಿ, ಉದಾ : ಬಳಕೆಗೆ ಕೊಡದೆ ಒತ್ತೆ ಹಾಕುವುದು, ಆಸ್ತಿ ವಿಭಜನೆ, ಭದ್ರತಾ ಮುಚ್ಚಳಿಕೆ ಇವುಗಳಿಗೆಲ್ಲ ಸ್ವಲ್ಪ ಕಡಿಮೆ ದರ ಇರುತ್ತದೆ. ಒಪ್ಪಂದದ ಕರಾರುಪತ್ರಗಳು, ಪ್ರಮಾಣ ಪತ್ರಗಳು (ಅಫಿಡಾವಿತ್), ದತ್ತಸ್ವೀಕಾರ ಪತ್ರಗಳು, ಇವುಗಳಿಗೆಲ್ಲ ಗೊತ್ತು ಮಾಡಿದ ಮಿತ ದರ ಇರುತ್ತದೆ. ಇದಲ್ಲದೆ ನ್ಯಾಯಾಲಯ ಸಂಬಂಧಿ ಮತ್ತು ನ್ಯಾಯಾಂಗೇತರ ಪತ್ರಗಳೆಂಬ ಗುಂಪೂ ಇದೆ. 1958ರ ಕರ್ನಾಟಕ ನ್ಯಾಯಾಲಯ ಶುಲ್ಕ ಮತ್ತು ಮೊಕದ್ದಮೆಗಳ ಅಧಿನಿಯಮದಂತೆ ನ್ಯಾಯಾಂಗ ಸಂಬಂಧಿ ಮನವಿಗಳಿಗೆ ಲಗತ್ತಿಸಬೇಕಾದ ಮುದ್ರಾಂಕ ಶುಲ್ಕ ವಸೂಲಾಗುತ್ತದೆ. ಭಾರತೀಯ ಮುದ್ರಾಂಕ ಅಧಿನಿಯಮ ಮತ್ತು ಕರ್ನಾಟಕ ಮುದ್ರಾಂಕ ಅಧಿನಿಯಮ 1958 ಇವುಗಳ ಕಕ್ಷೆಯಲ್ಲಿ ಬರುವ ಕಾಗದ ಪತ್ರಗಳು, ಕಾನೂನು ತಿಳಿಸಿರುವ ನ್ಯಾಯಾಂಗೇತರ ಛಾಪಾಕಾಗದದಲ್ಲಿ ಬರೆಯಲ್ಪಟ್ಟಿರಬೇಕೆಂದು ನಿಯಮವಿದೆ.

### ಛಾಪಾಕಾಗದ ಮತ್ತು ನೋಂದಣಿ

ಭಾರತೀಯ ಮುದ್ರಾಂಕ ಅಧಿನಿಯಮದಂತೆ ವಿನಿಮಯ ಪತ್ರಗಳು, ಚೆಕ್‌ಗಳು, ಪ್ರಾಮಿಸರಿ ನೋಟ್‌ಗಳು, ಸಾಲ ಪತ್ರಗಳು, ಜೀವವಿಮಾ ಪಾಲಿಸಿ ಇವೆಲ್ಲವೂ ಈ ಅಧಿನಿಯಮಕ್ಕೆ ಒಳಪಡಬೇಕು. ಕರ್ನಾಟಕ ಮುದ್ರಾಂಕ ಅಧಿನಿಯಮ (ಸ್ಟ್ಯಾಂಪ್ ಆ್ಯಕ್ಟ್) ಮೇಲೆ ಹೇಳಿದ ಕಾಗದ ಪತ್ರಗಳಿಗೆ ಹೊರತುಪಡಿಸಿ ಇತರ ಕಾಗದ ಪತ್ರಗಳಿಗೆ ಅನ್ವಯಿಸುತ್ತದೆ. ಈ ರಾಜ್ಯ ಅಧಿನಿಯಮದಂತೆ ಬರುವ ಆದಾಯವು ರಾಜ್ಯದ ಬೊಕ್ಕಸಕ್ಕೇ ಸಲ್ಲುವುದಾದರೂ ಈ ಕಾನೂನಿನಂತೆ ಇಂಥ ನಿಯಮವನ್ನು ಜಾರಿ ಮಾಡುವ ಹಾಗೂ ಅದರ ದರವನ್ನು ಗೊತ್ತು ಮಾಡುವ ಅಧಿಕಾರವು ಕೇಂದ್ರದ್ದೇ ಆಗಿದೆ.

ಕರ್ನಾಟಕ ಮುದ್ರಾಂಕ ಅಧಿನಿಯಮದಂತೆ 55 ಬೇರೆ ಬೇರೆ ವಿವಿಧ ದಸ್ತಾವೇಜುಗಳು ಮುದ್ರಾಂಕದ ಕಕ್ಷೆಯಲ್ಲಿ ಬರುತ್ತವೆ. ಈ ದಸ್ತಾವೇಜುಗಳನ್ನು ತೀರ ಸ್ಥೂಲವಾಗಿ ಹೀಗೆ ವರ್ಗೀಕರಿಸಬಹುದು : ಸ್ಥಿರ ತೆರಿಗೆಯವು ಮತ್ತು ದಸ್ತಾವೇಜು ದಾಖಲು ಮಾಡುವ ದಸ್ತುವಿನ ಮೌಲ್ಯದ

ಜಿಲ್ಲೆಯಲ್ಲಿ ಮೂರು ನೋಂದಣಿ ಕಚೇರಿಗಳಿವೆ. ಇವುಗಳ ಮುಖ್ಯ ಉದ್ದೇಶ ತಮ್ಮ ತಮ್ಮ ವ್ಯಾಪ್ತಿಯಲ್ಲಿ ಬರುವ ಸ್ಥಿರ ಆಸ್ತಿಯ ಮಾರಾಟದ ದಸ್ತಾವೇಜುಗಳ ನೋಂದಣಿ ಹಾಗೂ ಇಂಥ ನೋಂದಣಿಯಾದ ದಾಖಲೆಗಳ ಪ್ರತಿಯನ್ನು ಕಾದಿಡುವುದು. ಈ ಖಾತೆಯಿಂದ ಬರುವ ಉತ್ಪನ್ನವು ವರ್ಷಂಪ್ರತಿ ಹೆಚ್ಚುತ್ತ ಸಾಗಿದೆ. ಇದಕ್ಕೆ ಸ್ಟ್ಯಾಂಪ್ ಮತ್ತು ನ್ಯಾಯಾಲಯಕ್ಕೆ ಸಲ್ಲಿಸುವ ಮನವಿಗಳ ಶುಲ್ಕ ಹೆಚ್ಚಿರುವುದೇ ಕಾರಣ. ಜಿಲ್ಲೆಯಲ್ಲಿರುವ ಪ್ರತೀ ಸಬ್ ರಿಜಿಸ್ಟ್ರಾರರ ಕಚೇರಿಯು ಈ ಕೆಳಗಿನ ಅಧಿನಿಯಮ ಮತ್ತು ನಿಯಮಗಳನ್ನು ಅನುಸರಿಸುತ್ತದೆ : (1) 1908ರ ನೋಂದಣಿ ಅಧಿನಿಯಮ (2) 1965ರ ಕರ್ನಾಟಕ ನೋಂದಣಿ ನಿಯಮ, (3) 1967ರ ಕರ್ನಾಟಕ ಮುದ್ರಾಂಕ ಅಧಿನಿಯಮ ಮತ್ತು ಅದರ ಅಡಿಯ ನಿಯಮಗಳು, (4) 1958ರ ಕರ್ನಾಟಕ ನ್ಯಾಯಾಲಯ ಶುಲ್ಕ ಮತ್ತು ಮೊಕದ್ದಮೆಗಳ ಮೌಲ್ಯೀಕರಣ ಅಧಿನಿಯಮ ಮತ್ತು ಅದರ ಅಡಿಯ ನಿಯಮಗಳು, ಹಾಗೂ (5) 1932ರ ಭಾರತೀಯ ಪಾಲುಗಾರಿಕೆ ಅಧಿನಿಯಮ.

ಹೋದ ಕೆಲವು ವರ್ಷಗಳಲ್ಲಿ ಜಿಲ್ಲೆಯಲ್ಲಿ ಅಬಕಾರಿ ಆದಾಯ (ಲಕ್ಷ ರೂ.ಗಳಲ್ಲಿ)

| | | 1985–86 | 1986–87 | 1987–88 | 1988–89 | 1989–90 | 1990–91 |
|---|---|---|---|---|---|---|---|
| 1. | ಸಾರಾಯಿ ಮೇಲೆ ಸುಂಕ | 25.06 | 28.60 | 22.62 | 38.17 | 44.43 | 59.17 |
| 2. | ಸಾರಾಯಿಯು ಬೆಲೆಯಿಂದ | 11.78 | 14.34 | 10.14 | — | — | — |
| 3. | ಸಾರಾಯಿ ಅಂಗಡಿ ಬಾಡಿಗೆಯಿಂದ | 150.69 | 198.39 | 176.79 | 233.93 | 280.25 | 324.07 |
| 4. | ಬೀರ್ ಮೇಲೆ ಸುಂಕ | 267 | 305 | 414 | 358 | 467 | 3.00 |
| 5. | ವಿದೇಶೀ ಮದ್ಯಗಳ ಲೈಸನ್ಸ್ ಸುಂಕ | 12.95 | 18.30 | 12.14 | 22.62 | 18.42 | 23.77 |
| 6. | ಭಾರತದಲ್ಲಿ ತಯಾರಾದ ವಿದೇಶೀ ಮದ್ಯದ ಸುಂಕ | 11.24 | 12.86 | 13.22 | 9.71 | 1.92 | — |
| 7. | ಸೇವಾಶುಲ್ಕ | 0.36 | 0.32 | 0.18 | 0.64 | — | — |
| | ಬಾಕಿ ಮೊತ್ತದ ಬಡ್ಡಿ | 1.62 | 3.99 | 4.42 | 7.01 | 9.77 | 7.66 |

ರೆಕ್ಟಿಫೈಡ್ ಸ್ಪಿರಿಟ್‌ನ ಮಾರಾಟದಿಂದ 1989–90ರಲ್ಲಿ ಜಿಲ್ಲೆಯಲ್ಲಿ 2,642 ರೂ. ಆದಾಯ ಬಂದಿದ್ದು ಮರುವರ್ಷ ಇದು 2,390 ರೂ. ಆಗಿತ್ತು. ಔಷಧೀಯ ದ್ರಾಕ್ಷಾಮದ್ಯದಿಂದ ಈ ವರ್ಷಗಳಲ್ಲಿ ಕ್ರಮವಾಗಿ ರೂ. 483 ಮತ್ತು ರೂ. 180 ಆದಾಯ ಬಂದಿತ್ತು. ಡಿನೇಚರ್ಡ್ ಸ್ಪಿರಿಟ್‌ನಿಂದ ಬಂದ ಆದಾಯ ಇದೇ ವರ್ಷಗಳಲ್ಲಿ ಅನುಕ್ರಮವಾಗಿ ರೂ. 100 ಮತ್ತು ರೂ. 150. ದಂಡ ಮತ್ತು ಜಪ್ತಿಗಳಿಂದ ಇದೇ ವರ್ಷಗಳಲ್ಲಿ ಅನುಕ್ರಮವಾಗಿ 41,440 ರೂ. ಮತ್ತು 71,161 ರೂ. ಸಂಗ್ರಹವಾಗಿತ್ತು.

ಉಪನೋಂದಣಿ ಅಧಿಕಾರಿ (ಸಬ್ ರಿಜಿಸ್ಟ್ರಾರರು) ಸ್ಥಿರ ಆಸ್ತಿಗಳಿಗೆ ಸಂಬಂಧಿಸಿದ ಕಾಗದಪತ್ರಗಳನ್ನು ನೋಂದಣಿ ಮಾಡುವುದರ ಜೊತೆಗೆ ಜಿಲ್ಲೆಯಲ್ಲಿ ಜಾರಿಯಲ್ಲಿರುವ ವಿವಾಹ ನೋಂದಣಿ ಕಾನೂನುಗಳಿಗೆ ಅನುಗುಣವಾಗಿ ಮದುವೆಗಳನ್ನು ನೋಂದಣಿ ಮಾಡುವ ಅಧಿಕಾರಿಗಳೂ ಆಗಿದ್ದಾರೆ. ಜಿಲ್ಲೆಯಲ್ಲಿನ ನೋಂದಣಿ ಕಚೇರಿಗಳಿಗೆ ಸಂಬಂಧಿಸಿದ ಇತ್ತೀಚಿಗಿನ ವರ್ಷಗಳ ಅಂಕೆಸಂಖ್ಯೆಗಳ ಪಟ್ಟಿಗೆ ಪುಟ 577ನ್ನು ನೋಡಿರಿ.

## ಕೃಷಿ ಆದಾಯ ತೆರಿಗೆ

1951ರ ಕೊಡಗು ಕೃಷಿ ಆದಾಯ ತೆರಿಗೆ ಅಧಿನಿಯಮವು ವನ್ನು ಕೊಡಗು ಒಂದು ಪ್ರತ್ಯೇಕ ರಾಜ್ಯವಾಗಿದ್ದಾಗಲೇ ಜಾರಿಮಾಡಲಾಯಿತು. ಕೃಷಿ ಪ್ರಧಾನ ಪ್ರದೇಶವಾದ ಕೊಡಗಿನ ರಾಜಸ್ವವು ಕೃಷಿವಲಯದಿಂದಲೇ ಬರಬೇಕಾದದ್ದು ಸಹಜವಾಗಿತ್ತು. 1951 ರಿಂದಲೇ ಇಂಥ ತೆರಿಗೆಯನ್ನು ಜಾರಿ ಮಾಡುವ ಕಲ್ಪನೆ ಮೂಡಿತು. ಸರಕಾರವು ಕಾಫಿ, ಏಲಕ್ಕಿ, ಕಿತ್ತಳೆ ಮತ್ತು ಮೆಣಸಿನಿಂದ ಬರುವ ಉತ್ಪನ್ನದ ಹೆಚ್ಚಳವನ್ನು ಗಮನಿಸಿ ಆ ಮೂಲದಿಂದ ರಾಜಾದಾಯವನ್ನು ಹೆಚ್ಚಿಸಿಕೊಳ್ಳಲು ಯತ್ನಿಸಿತು. ಕೊಡಗು ಕೃಷಿ ಆದಾಯ ತೆರಿಗೆ ಅಧಿನಿಯಮ (1951ರ ಅಧಿನಿಯಮ 1) 13.5.1951ರಿಂದ ಜಾರಿಗೆ ಬಂದಿತು. ಅದು 1922ರ ಭಾರತೀಯ ಆದಾಯ ತೆರಿಗೆ ಅಧಿನಿಯಮವನ್ನು ಆಧರಿಸಿತ್ತು ಇದರಂತೆ ತೆರಿಗೆದಾರರನ್ನು ಆರು ಗುಂಪುಗಳಾಗಿ ವಿಭಜಿಸಿದೆ. ಹಿಂದೂ ಅವಿಭಕ್ತ ಕುಟುಂಬಗಳ ವಿನಾ ಇನ್ನೆಲ್ಲ ಕೃಷಿಕರು ತಮ್ಮ ವಾರ್ಷಿಕ ಆದಾಯ ರೂ. 3,500ಕ್ಕೂ ಮಿಕ್ಕಿದ್ದರೆ ತೆರಿಗೆ ತೆರಲು ಬದ್ಧರು. ಹಿಂದೂ ಅವಿಭಕ್ತ ಕುಟುಂಬಕ್ಕೆ ಮಾತ್ರ ಕನಿಷ್ಠ ಮಿತಿಯು 7,000 ರೂ. ಆಗಿತ್ತು. ತೆರಿಗೆಯ ದರಗಳ ಹಂತಗಳನ್ನು ಈ ಅಧಿನಿಯಮದಲ್ಲಿ ಸ್ಪಷ್ಟೀಕರಿಸಲಾಗಿತ್ತು. ಕೊಡಗು ಹೊಸರಾಜ್ಯದಲ್ಲಿ ವಿಲೀನವಾದಾಗ 1957ರ ಮೈಸೂರು ಕೃಷಿ ಆದಾಯ ತೆರಿಗೆ ಅಧಿನಿಯಮದಂತೆ ಈ ತೆರಿಗೆಯ ವಸೂಲಿ ಆರಂಭಿಸಿದರು. ಹಣದ (ಅಹಾರೇತರ) ಬೆಳೆಗಳನ್ನು ಬೆಳೆಯುವ ಕೃಷಿಕರ ಕುಟುಂಬದಲ್ಲಿ ಹಿಂದೂ ಅವಿಭಕ್ತ ಕುಟುಂಬವಾದಲ್ಲಿ ವಾರ್ಷಿಕ 7,000 ರೂ. ಸಾದಾ ಕುಟುಂಬವಾದರೆ 3,500 ರೂ. ಕನಿಷ್ಠ ಆದಾಯವನ್ನು ಮೀರಿದವರಿಂದ ಈ ತೆರಿಗೆ ವಸೂಲಿಯಾಗುತ್ತಿತ್ತು. ಆದರೆ ಏಳು ತೋಟಗಾರಿಕೆ ಬೆಳೆಗಳಿಗೆ ಕನಿಷ್ಠ ವರಮಾನ ಮಿತಿ ಇರಲಿಲ್ಲ. ಇತರ 24 ಹಣದ ಬೆಳೆಗಳನ್ನು ಎಂಟು ಗುಂಪುಗಳಲ್ಲಿ ವರ್ಗೀಕರಿಸಿ ತೆರಿಗೆ ಆಕರಣೆಯ ಸೂತ್ರಗಳನ್ನು ನಿರೂಪಿಸಿದ್ದರು. ಆಕರಣೆಗೆ ಪಾತ್ರವಾದ ಮೊತ್ತದಲ್ಲಿ ಭೂ ಕಂದಾಯ ಹಾಗೂ ತತ್ಸಂಬಂಧವಾದ ಉಪ ತೆರಿಗೆಗಳು, ಪುರಸಭಾ ತೆರಿಗೆ, ಕೃಷಿ ಉತ್ಪನ್ನಗಳ ಮೇಲಣ ಅಬಕಾರಿ ಸುಂಕ, ಗೇಣಿ, ಭೂಸಾರ ರಕ್ಷಣೆ ಮತ್ತು ನೀರಾವರಿಗೆ ಸಂಬಂಧಿಸಿ ಮಾಡಿದ ವೆಚ್ಚ (ನೀರಾವರಿ ವ್ಯವಸ್ಥೆಯ ದುರಸ್ತಿ ಸಹಿತ)ಇವೆಲ್ಲವುಗಳನ್ನು ಕಳೆಯಲು ಅವಕಾಶವಿತ್ತು. ಇದರಂತೆ 1950–51ರಲ್ಲಿ ರೂ. 3.09 ಲಕ್ಷ, 1955–56ರಲ್ಲಿ ರೂ. 24.21 ಲಕ್ಷ ಹಾಗೂ 1960–61ರಲ್ಲಿ ರೂ. 43.81 ಲಕ್ಷ ತೆರಿಗೆ ವಸೂಲಾಗಿತ್ತು.

1976-77ರ ಆರ್ಥಿಕ ವರ್ಷದಿಂದ 1976ರ ಕರ್ನಾಟಕ ಕೃಷಿ ಆದಾಯ ತೆರಿಗೆ ತಿದ್ದುಪಡಿ ಅಧಿನಿಯಮದಂತೆ ಎಲ್ಲ ಕೃಷಿ ಆದಾಯವೂ ತೆರಿಗೆ ತೆರಲು ಬದ್ಧವಾಗಿದ್ದು ಕನಿಷ್ಠ ಮಿತಿಯನ್ನು 8,000 ರೂ.ಗೆ ಏರಿಸಲಾಯಿತು. ಹೊಸದಾಗಿ ಆರಂಭಿಸಿದ ತೋಟಗಾರಿಕೆ ಬೆಳೆಗಳ ಪ್ರಕರಣದಲ್ಲಿ ರಿಯಾಯತಿಯ ಮಿತಿಯನ್ನು ಹಿಡುವಳಿಯ ಗಾತ್ರದಂತೆ ನಿರ್ಣಯಿಸಲಾಯಿತು. 1957ರ ಅಧಿನಿಯಮವನ್ನು ತಿದ್ದುಪಡಿ ಮಾಡಿ 1983ರ ಕರ್ನಾಟಕ ಕೃಷಿ ಆದಾಯ ತೆರಿಗೆ (ತಿದ್ದುಪಡಿ) ಅಧಿನಿಯಮವನ್ನು ಜಾರಿ ಮಾಡಿ ಬದಲಾಯಿಸಲಾಯಿತು. ಮತ್ತು ಇದರಂತೆ ತೋಟಗಳಿಗೆ ಸಂಬಂಧಿಸಿದಂತೆ 1981–82ರ ವರ್ಷದಿಂದಲೇ ಈ ಹೊಸ ದರದಂತೆ ವಸೂಲಿಯನ್ನು ಆರಂಭಿಸಲಾಯಿತು. ವಿನಾಯತಿಯ ಮಿತಿಯನ್ನು ವಾರ್ಷಿಕ 14,000ಕ್ಕೆ ಹೆಚ್ಚಿಸಲಾಯಿತು. ಕೃಷಿ ಆದಾಯ ತೆರಿಗೆ ಕಾನೂನಿನ ಕಾರ್ಯಾಚರಣೆಯನ್ನು ಮಾಡುವ ಜವಾಬ್ದಾರಿ ವಾಣಿಜ್ಯ ತೆರಿಗೆ ಇಲಾಖೆಯದೇ ಆಗಿತ್ತು ಈ ಮೂಲದಿಂದ ಕೊಡಗಿನಲ್ಲಿ ಸಂಗ್ರಹವಾದ ತೆರಿಗೆ ಮತ್ತು ತೆರಿಗೆದಾರರ ಸಂಖ್ಯೆ (ಕಂಸದಲ್ಲಿ ಕೊಟ್ಟಿದೆ) ಇತ್ತೀಚಿಗಿನ ವರ್ಷಗಳಲ್ಲಿ ಹೀಗಿದೆ : 1985–86 (1,322) ರೂ. 65.17 ಲಕ್ಷ, 1985–86 (1,131) ರೂ. 132. 32 ಲಕ್ಷ, 1987–88 (753) ರೂ. 157.85 ಲಕ್ಷ, 1988-89 (783) ರೂ. 138.61 ಲಕ್ಷ, 1989–90 (845) ರೂ. 229.18 ಲಕ್ಷ.

## ವೃತ್ತಿ ತೆರಿಗೆ

ಪ್ರತಿಯೊಬ್ಬ ಉದ್ಯೋಗಿ ಅಥವಾ ವೃತ್ತಿದಾರನ ಆದಾಯದ ಆಧಾರದ ಮೇಲೆ ವೃತ್ತಿ ತೆರಿಗೆಯನ್ನು ಆಕರಿಸಲಾಗುತ್ತಿದೆ. 1906ರ ಒಂದು ಕಾನೂನಿನಂತೆ ಪುರಸಭೆಗೆ ವೃತ್ತಿತೆರಿಗೆ ವಸೂಲಿಗೆ ಅವಕಾಶವಿತ್ತು. ತೆರಿಗೆದಾರರನ್ನು

ಕೊಡಗು ಜಿಲ್ಲೆಯ ನೋಂದಣಿ ಕಚೇರಿಗಳಿಗೆ ಸಂಬಂಧಿಸಿದ ಇತ್ತೀಚಿಗಿನ ವರ್ಷಗಳ ಅಂಕಿಸಂಖ್ಯೆಯ ಪಟ್ಟಿ

| ವಿವರ | 1984–85 | 1985–86 | 1986–87 | 1987–88 | 1988–89 | 1989–90 | 1990–91 |
|---|---|---|---|---|---|---|---|
| ನೋಂದಣಿ ಪ್ರಕರಣಗಳ ಸಂಖ್ಯೆ | 4,559 | 5,395 | 4,339 | 3,983 | 3,859 | 3,887 | 2,849 |
| ಸ್ಥಿರ ಆಸ್ತಿ | 4,467 | 5,278 | 4,229 | 3,850 | 3,750 | 3,778 | 2,490 |
| ಚರ ಆಸ್ತಿ | 92 | 117 | 110 | 133 | 109 | 109 | 104 |
| ಆಸ್ತಿಗಳ ಒಟ್ಟು ಮೌಲ್ಯ (ಕೋಟಿ ರೂ.ಗಳಲ್ಲಿ) | 6.53 | 7.63 | 7.46 | 6.70 | 5.10 | 13.58 | 9.58 |
| ಒಟ್ಟು ಆದಾಯ(ಲಕ್ಷ ರೂ.ಗಳಲ್ಲಿ) | 6.22 | 9.91 | 13.47 | 15.79 | 18.87 | 23.71 | 86.56 |
| ಒಟ್ಟು ವೆಚ್ಚ (ಲಕ್ಷ ರೂ.ಗಳಲ್ಲಿ) | 2.62 | 2.24 | 2.18 | 5.27 | 23.71 | 26.18 | 5.30 |

ಅವರ ಮಾಸಿಕ ಆದಾಯಕ್ಕೆ ಅನುಗುಣವಾಗಿ ಒಂಬತ್ತು ಗುಂಪುಗಳಾಗಿ ವರ್ಗೀಕರಿಸಿತ್ತು. ಇದರಲ್ಲಿ ರೂ. 2,000 ಕ್ಕೂ ಹೆಚ್ಚು ಮಾಸಿಕ ವೇತನವಿರುವ ವ್ಯಕ್ತಿಯು ಮೇಲಣ ಗುಂಪಿನವನಾಗಿದ್ದು ಅತ್ಯಂತ ಕೆಳಗಿನ ಗುಂಪಿನಲ್ಲಿ ರೂ. 30 ಮತ್ತು ಮೇಲ್ಪಟ್ಟು ಮಾಸಿಕ ಆದಾಯ ಉಳ್ಳವರು ಸೇರುತ್ತಿದ್ದರು. 1964ರ ಮೈಸೂರು ಪುರಸಭೆಗಳ ಕಾನೂನು ಈ ತೆರಿಗೆದಾರರನ್ನು ಆದಾಯಕ್ಕೆ ಅನುಗುಣವಾಗಿ ಒಂಬತ್ತು ಗುಂಪುಗಳಾಗಿ ವರ್ಗೀಕರಿಸಿತ್ತು. ತೆರಿಗೆ ವಿಚಾರಣಾ ಸಮಿತಿಯು 1954ರಲ್ಲಿ ನೀಡಿದ ವರದಿಯಲ್ಲಿ ಒಂದು ಕನಿಷ್ಠ ಮಟ್ಟದಲ್ಲಿ ಈ ತೆರಿಗೆಯನ್ನು ಕಡ್ಡಾಯವಾಗಿ ಹೇರುವುದು ಸರಕಾರದ ಒಂದು ಆದಾಯ ಮೂಲವಾಗಿ ಸೂಕ್ತವಾದದ್ದು, ಎಂದು ಶಿಫಾರಸು ಮಾಡಿತ್ತು.

1976ರ ವರೆಗೆ ಉದ್ಯೋಗಸ್ಥರು, ವ್ಯಾಪಾರಿಗಳು, ವೃತ್ತಿದಾರರು ಇವರೆಲ್ಲರಿಂದ ಸ್ಥಳೀಯ ಸಂಸ್ಥೆಗಳು ತೆರಿಗೆಗಳನ್ನು ಸಂಗ್ರಹಿಸುತ್ತಿದ್ದು 1976 ಕರ್ನಾಟಕ ಉದ್ಯೋಗ, ವಾಣಿಜ್ಯ ವೃತ್ತಿ ಮತ್ತು ನೌಕರಿಗಳ ಮೇಲಣ ತೆರಿಗೆ ಅಧಿನಿಯಮದಂತೆ ರಾಜ್ಯ ಸರಕಾರವೇ ಈ ತೆರಿಗೆಯ ಸಂಗ್ರಹಣದ ಅಧಿಕಾರವನ್ನು ಗ್ರಹಿಸಿತು. ಇದರಲ್ಲಿ ನೌಕರಿಯಲ್ಲಿ ಇರುವವರ ಮೇಲಣ ತೆರಿಗೆ ದರವು ವೇತನದ ಮಟ್ಟದಂತೆ ನಿರ್ಣಯವಾದರೆ ಇತರ ವೃತ್ತಿ ಅಥವಾ ಉದ್ಯೋಗ ಮಾಡುವವರ ತೆರಿಗೆಯ ದರವು ವೃತ್ತಿಯಲ್ಲಿ ಅವರಿಗಿರುವ ಸ್ಥಾನಮಾನ, ವ್ಯಾಪಾರದ ವಿಕ್ರಯದ ಮೊತ್ತ, ಸಂಸ್ಥೆಯಲ್ಲಿರುವ ನೌಕರರ ಸಂಖ್ಯೆ ಇವುಗಳೆಲ್ಲದರ ಮೇಲೆ ಅವಲಂಬಿಸಿದೆ. ವೇತನಕ್ಕಾಗಿ ಕೆಲಸ ಮಾಡುವ ಎಲ್ಲ ವ್ಯಕ್ತಿಗಳೂ ತಮ್ಮ ವೇತನವು ತಿಂಗಳಿಗೆ 2,000 ರೂ.ಗೂ ಹೆಚ್ಚಾಗಿದ್ದಲ್ಲಿ ಅವರ ವೃತ್ತಿ ತೆರಿಗೆಯನ್ನು ವೇತನ ಕೊಡುವಲ್ಲಿಯೇ ಕಂತಿನಲ್ಲಿ ವಸೂಲು ಮಾಡಲಾಗುವುದು. ಸ್ವಉದ್ಯೋಗ ಅಥವಾ ಸ್ವಂತ ವೃತ್ತಿಯಲ್ಲಿ ನಿರತರು 1976ರ ಕಾನೂನಿನಂತೆ ತಮ್ಮನ್ನು ನೋಂದಾಯಿಸಿಕೊಂಡು ಸೆಪ್ಟಂಬರ್ 30ಕ್ಕೆ ಮೊದಲೇ ಗೊತ್ತು ಮಾಡಲಾದ ತೆರಿಗೆಯನ್ನು ಪಾವತಿ ಮಾಡಬೇಕು. ಜಿಲ್ಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ತೆರಿಗೆದಾರರು (ಇವರ ಸಂಖ್ಯೆಯನ್ನು ಕಂಸದಲ್ಲಿ ಕೊಟ್ಟಿದೆ) ಮತ್ತು ವಸೂಲಾತಿಗಳ ವಿವರ ಹೀಗೆ ಇವೆ: 1986–87 (229) ರೂ. 18,146; 1987–88 (613) ರೂ. 75,638; 1988–89 (713) ರೂ. 1,70,640; 1989 – 90 (820) ರೂ. 2,27,078.

### ವಾಹನ ತೆರಿಗೆ

ಮೋಟಾರು ವಾಹನಗಳ ಮೇಲೆ 1957ರ ಮೈಸೂರು ಮೋಟಾರು ವಾಹನಗಳ ಅಧಿನಿಯಮದಂತೆ ತೆರಿಗೆ ಹೇರಲಾಗಿದ್ದು ಅಶ್ವಶಕ್ತಿಯ ಆಧಾರದ ಮೇಲೆ ಮೋಟಾರು ಸೈಕಲ್‌ಗಳ ಮೇಲೆ, ಸರಕುರಹಿತ ವಾಹನವಾಗಿ ಮೋಟಾರು ಕಾರುಗಳ ಮೇಲೆ, ಸರಕು ಸಹಿತವೆಂಬ ಮಾನದಿಂದ ಸರಕು ಸಾಗಣೆ ವಾಹನಗಳ ಮೇಲೆ ಹಾಗೂ ಪ್ರಯಾಣಿಕರ ಸಾರಿಗೆ ವಾಹನಗಳ ಮೇಲೆ ಪ್ರಯಾಣಿಕರ ಸಂಖ್ಯೆಯನ್ನು ಆಧರಿಸಿ ತೆರಿಗೆ ವಿಧಿಸುತ್ತಿದ್ದರು. ಈಗ ಇಲಾಖೆಯು ಈ ಕೆಳಗಿನ ಕಾನೂನು ಮತ್ತು ನಿಯಮಗಳನ್ನು ಕಾರ್ಯಾಚರಣೆಗೆ ತಂದಿದೆ: 1) 1939 ರ ಕೇಂದ್ರ ಅಧಿನಿಯಮ, 2) 1957ರ ಕರ್ನಾಟಕ ಮೋಟಾರ್ ವಾಹನಗಳ ತೆರಿಗೆ ಅಧಿನಿಯಮ, 3) 1963ರ ಮೋಟಾರ್ ವಾಹನಗಳ ತೆರಿಗೆ ನಿಯಮ, 4) 1957ರ ಕರ್ನಾಟಕ ವಾಹನಗಳ ತೆರಿಗೆ ನಿಯಮ. 1963ಕ್ಕೂ ಮೊದಲು ಈ ತೆರಿಗೆ ವಸೂಲಿಯನ್ನು ಭಾಗಶಃ ಪೋಲೀಸ್ ಇಲಾಖೆ ಹಾಗೂ ಭಾಗಶಃ ಕಂದಾಯ ಇಲಾಖೆಯವರು ಮಾಡುತ್ತಿದ್ದರು. 1963ರಿಂದ ಮೋಟಾರು ವಾಹನಗಳ ಇಲಾಖೆಯನ್ನು ಸ್ಥಾಪಿಸಲಾಯಿತು. ಈ ತೆರಿಗೆಯಿಂದ ಜಿಲ್ಲೆಯಲ್ಲಿ ಸಂಗ್ರಹವಾದ ವರಮಾನದ ವಿವರ ಇತ್ತೀಚಿನ ವರ್ಷಗಳಲ್ಲಿ ಹೀಗಿದೆ: 1983–84 ರೂ. 97.11 ಲಕ್ಷ; 1984–85 ರೂ. 102.12 ಲಕ್ಷ; 1985–86 ರೂ. 105.14 ಲಕ್ಷ; 1986–87 ರೂ. 116.44 ಲಕ್ಷ; 1987–88 ರೂ. 114.38 ಲಕ್ಷ; 1988–89 ರೂ. 116.20 ಲಕ್ಷ; 1989–90 ರೂ. 127.89 ಲಕ್ಷ; ಮತ್ತು 1990–91 ರೂ. 151.57 ಲಕ್ಷ.

### ವಿದ್ಯುತ್ ತೆರಿಗೆ

ವಿದ್ಯುತ್ತಿನ ಬಳಕೆಗೆ ವಿಧಿಸುವ ಸೇವಾ ಮೌಲ್ಯದ ಮೇಲೆ ಶೇಕಡಾ 10ರಷ್ಟು ತೆರಿಗೆಯನ್ನು ಈ ಕೆಳಗಿನ ವಿದ್ಯುತ್ ಸ್ಥಾವರಗಳ ಮೇಲೆ 1950ರ ಜೂನ್‌ನಿಂದ ವಿಧಿಸಲು ಆರಂಭಿಸಲಾಯಿತು: 1) ನಗರಗಳು, ಪುರಸಭೆಗಳು ಮತ್ತು ಗ್ರಾಮ ಪಂಚಾಯತಿಗಳಲ್ಲಿನ ಬೀದಿ ದೀಪಗಳು. 2) ಹಿಟ್ಟಿನ ಗಿರಣಿಗಳು, ಛಾಯಚಿತ್ರ ಗ್ರಾಹಕ ಸ್ಟುಡಿಯೋಗಳು ಮತ್ತು ಇತರ ಕೈಗಾರಿಕೆಗಳು. 3) ಚಲನಚಿತ್ರ ಮಂದಿರಗಳು. 4) ಹತ್ತಿಗಿರಣಿಗಳು ಮತ್ತು ಇಂಥ ಇತರ ಕೈಗಾರಿಕೆಗಳು– ಇಲ್ಲಿ ರಾತ್ರಿ ಮತ್ತು ಹಗಲಿನ ಬಳಕೆಗೆ ಪ್ರತ್ಯೇಕ ದರಗಳಿವೆ. 5) ದೊಡ್ಡ ಕೈಗಾರಿಕೆಗಳಿಗೆ ವಿಶೇಷ ಒಪ್ಪಂದದಂತೆ ಪೂರೈಸಿದ

ವಿದ್ಯುತ್ತು. ಈ ತೆರಿಗೆಯನ್ನು 1954ರ ಏಪ್ರಿಲ್ 1 ರಿಂದ ಶೇ. 20ಕ್ಕೆ ಏರಿಸಲಾಯಿತು; ಆದರೆ ಇದರ ಪ್ರತಿ ಯೂನಿಟ್‌ಗೆ ನಾಲ್ಕು ಪೈಸೆಗಿಂತ ಮೀರಬಾರದೆಂದು ಮಿತಿ ಹಾಕಲಾಯಿತು. ಇದು ಮೈಸೂರಿನಲ್ಲಿ ಇದ್ದ ವ್ಯವಸ್ಥೆ ಯಾದರೆ ಕೊಡಗಿನಲ್ಲಿ ಏಕೀಕರಣಕ್ಕೆ ಮೊದಲು ಯೂನಿಟ್‌ನ ದರದ ಮೇಲೆ ಶೇ. 25 ರಿಂದ 50ರ ವರೆಗೆ ಸರ್‌ಚಾರ್ಜ್ ವಿಧಿಸುತ್ತಿದ್ದರು. 1959ರ ಮೈಸೂರು ವಿದ್ಯುತ್ (ತೆರಿಗೆ ಮತ್ತು ಬಳಕೆ) ಅಧಿನಿಯಮದಂತೆ ಇಡೀ ರಾಜ್ಯದಲ್ಲಿ ಸಮಾನ ವಿದ್ಯುತ್ ತೆರಿಗೆಯನ್ನು ಜಾರಿ ಮಾಡಲಾಯಿತು. ಇದರಂತೆ ಪ್ರತೀಯೊಂದು ಬಳಕೆದಾರನ ಮೀಟರ್‌ನಲ್ಲಿ ಕಂಡ ಬಳಕೆ ಅಂಕೆಯ ಮೇಲೆ ವಿವಿಧ ವರ್ಗಗಳ ಬಗ್ಗೆ ಮೊದಲೇ ನಿರ್ಧರಿಸಿದ್ದ ಸೂತ್ರದ ದರದಂತೆ ಬೇರೆ ಬೇರೆ ಸರ್‌ಚಾರ್ಜ್ ದರಗಳನ್ನು ಅಲ್ಲದೆ ಕೆಲವರಿಗೆ ಖಚಿತ ಒಂದೇ ದರವನ್ನೂ ವಿಧಿಸುವಂತಾಯಿತು. ಈ ತೆರಿಗೆಯನ್ನು ವಿದ್ಯುತ್ ಮಂಡಳಿಯು ತಮ್ಮ ವಿದ್ಯುತ್ ಪೂರೈಕೆಯ ಬೆಲೆ ಜೊತೆಗೇ ವಸೂಲಿ ಮಾಡಿ ಸರಕಾರಕ್ಕೆ ಜಮಾ ಮಾಡುತ್ತಿದೆ. ಈ ರೀತಿ ಸಂಗ್ರಹವಾದ ತೆರಿಗೆ ಇತ್ತೀಚಿನ ಕೆಲವು ವರ್ಷಗಳಲ್ಲಿ ಹೀಗಿದೆ : 1986–87 : ರೂ. 14.80 ಲಕ್ಷ. ; 1987–88 : ರೂ. 15.63 ಲಕ್ಷ ; 1988–89 : ರೂ. 15.45 ಲಕ್ಷ ; 1989-90 : ರೂ. 16.35 ಲಕ್ಷ; 1990-91 : ರೂ. 16.70 ಲಕ್ಷ ; 1990–91ರಲ್ಲಿ ಸಬ್ ಡಿವಿಜನ್ ವಾರು ಸಂಗ್ರಹ (ಚಿಲ್ಲರೆ ಅಂಕೆಗಳನ್ನು ಬಿಟ್ಟು) ಮಡಿಕೇರಿ ಸಬ್ ಡಿವಿಜನ್ ರೂ. 4.27 ಲಕ್ಷ ; ಗೋಣಿಕೊಪ್ಪಲು ಸಬ್ ಡಿವಿಜನ್ ರೂ. 5.76 ಲಕ್ಷ ; ಕುಶಾಲನಗರ ಸಬ್ ಡಿವಿಜನ್ ರೂ. 6.31 ಲಕ್ಷ.

## ಅರಣ್ಯ ಅಭಿವೃದ್ಧಿ ತೆರಿಗೆ

ಕರ್ನಾಟಕ ಅರಣ್ಯಗಳ ಅಧಿನಿಯಮದಂತೆ ಅರಣ್ಯ ಅಭಿವೃದ್ಧಿ ತೆರಿಗೆಯನ್ನು ವಸೂಲು ಮಾಡಲಾಗುತ್ತದೆ. ಆರಂಭದಲ್ಲಿ ಈ ತೆರಿಗೆ ಶೇ. 5 ಇದ್ದುದು ಮುಂದೆ ದಿನಾಂಕ 1.4.1980 ರಿಂದ ಶೇ. 8ಕ್ಕೆ ಏರಿಸಲ್ಪಟ್ಟಿತು. ಅರಣ್ಯ ಇಲಾಖೆಯು ನೇರ ಇಲ್ಲವೇ ಇನ್ನಾವುದೇ ವಿಧಾನದಿಂದ ಮಾರಾಟ ಮಾಡಿದ ಅರಣ್ಯೋತ್ಪನ್ನಗಳ ಮಾರಾಟದ ಬೆಲೆಯ ಮೇಲೆ ಈ ತೆರಿಗೆಯನ್ನು ಹೇರಲಾಗುತ್ತದೆ. ಸೌದೆ, ಇದ್ದಿಲು ಮುಂತಾದ ಬಡ ಮತ್ತು ಮಧ್ಯಮ ವರ್ಗಗಳ ಜನ ಬಳಸುವ ಇಂಧನ ಹಾಗೂ ಸಣ್ಣ ಪ್ರಮಾಣದ ಮತ್ತು ಗುಡಿ ಕೈಗಾರಿಕೆಗಳು ಬಳಸುವ ಕಚ್ಚಾ ಪದಾರ್ಥಗಳ ಮೇಲೆ ಒಟ್ಟು ಶೇ. 8 ತೆರಿಗೆ ದರವಿದೆ. ಗಂಧದೆಣ್ಣೆ ಕಾರ್ಖಾನೆ ಇಲ್ಲವೇ ಈ ಗಂಧದ ಮರದಲ್ಲಿ ಕುಶಲಕರ್ಮ ಮಾಡುವವರಿಗೆ ಶ್ರೀಗಂಧದ ಮರವನ್ನು ಮಾರುವಾಗ ಶೇ. 8ರ ತೆರಿಗೆ ದರ ವಿಧಿಸುತ್ತಾರೆ. ಭಾರೀ ಕೈಗಾರಿಕೆಯವರು ಬಳಸುವ ಮರಮಟ್ಟು, ಬಿದಿರು ಮುಂತಾದವುಗಳ ಮೇಲೆ ಶೇ. 12 ತೆರಿಗೆ ವಿಧಿಸುತ್ತಾರೆ. ಮರಮಟ್ಟಿನಲ್ಲಿ ಶೇ. 90ರಷ್ಟನ್ನು ಇಲಾಖೆಯವರೇ ಕಡಿದು ಮಾರಾಟ ಮಾಡುತ್ತಾರೆ. ಶೇ. 10ರಷ್ಟು ಬೆಳೆದು ನಿಂತ ಮರಗಳನ್ನು ಹರಾಜು ಹಾಕುತ್ತಾರೆ. ಈ ತೆರಿಗೆಯಿಂದ ಜಿಲ್ಲೆಯಲ್ಲಿ ಇತ್ತೀಚಿಗಿನ ವರ್ಷಗಳಲ್ಲಿ ಬಂದ ಉತ್ಪನ್ನ ಹೀಗಿದೆ : 1985–86 : 5.38 ಕೋಟಿ ರೂ.; 1986–87 : 5.20 ಕೋಟಿ ರೂ.; 1987–88 : 3.00 ಕೋಟಿ ರೂ.; 1988–89 : 1.00 ಕೋಟಿ ರೂ.; 1989–90 : 1.95 ಕೋಟಿ ರೂ.; 1990-91 ರಲ್ಲಿ 2.58 ಕೋಟಿ ರೂ. ಇದಲ್ಲದೆ ಅರಣ್ಯ ಉತ್ಪನ್ನಗಳ ಮಾರಾಟದಿಂದ (ದಿಮ್ಮಿ, ಸೌದೆ, ಇದ್ದಿಲು, ಬಿದಿರು, ಹುಲ್ಲು, ಶ್ರೀಗಂಧ ಹಾಗೂ ನೇಡುತೋಪುಗಳಿಂದ) ಇಲಾಖೆಗೆ 1.67 ಕೋಟಿ ರೂ. ಉತ್ಪನ್ನ 1990–91ರಲ್ಲಿ ಬಂದಿದೆ.

## ಭೋಗ ಸೌಕರ್ಯ ತೆರಿಗೆ

1979ರ ಕರ್ನಾಟಕ ಭೋಗ ಸೌಕರ್ಯ (ಹೋಟೆಲ್ ಮತ್ತು ವಸತಿಗೃಹ) ಅಧಿನಿಯಮವು 1-6-1979 ರಿಂದ ಜಾರಿಗೆ ಬಂದಿದ್ದು ದಿನಕ್ಕೆ ಒಬ್ಬನಿಗೆ ವಸತಿಗಾಗಿ ರೂ. 30 ಮತ್ತು ಅದಕ್ಕೂ ಹೆಚ್ಚು ಬಾಡಿಗೆ ವಸೂಲಿ ಮಾಡುವ ಹೋಟೆಲ್ ಮತ್ತು ವಸತಿಗೃಹಗಳಿಗೆ ಬೇರೆ ಬೇರೆ ಬಾಡಿಗೆ ದರಗಳ ಹಂತಗಳಂತೆ ಹೆಚ್ಚುತ್ತ ಹೋಗುವ ದರದ ತೆರಿಗೆ ಇದಾಗಿದೆ. ದಿನಕ್ಕೆ 50 ರೂ.ಗೂ ಕಡಿಮೆ ಬಾಡಿಗೆಯಾದರೆ ಶೇ. 5, 50 ರಿಂದ 100 ರೂ.ಗೆ ಶೇ. $7\frac{1}{2}$, ರೂ. 100 ಕ್ಕಿಂತ ಹೆಚ್ಚಾದರೆ ಶೇ. 10, ಹೀಗೆ ತೆರಿಗೆ ದರಗಳಿವೆ. 1988–89ರಲ್ಲಿ ಜಿಲ್ಲೆಯಲ್ಲಿ ವಸೂಲಾದ ಈ ತೆರಿಗೆಯ ಮೊತ್ತ ರೂ. 33,000 ಹಾಗೂ 1989-90 ರಲ್ಲಿ ರೂ. 76,000 ಇರುತ್ತದೆ.

## ಮನರಂಜನೆ ತರಿಗೆ

1958ರ ಡಿಸೆಂಬರ್ ವರೆಗೆ ಮೈಸೂರು ವಿನೋದಗಳ ತೆರಿಗೆ ಅಧಿನಿಯಮ ಮತ್ತು ಮೈಸೂರು ಚಲನಚಿತ್ರ ಪ್ರದರ್ಶನ ಅಧಿನಿಯಮಗಳನ್ನು ಅನುಕ್ರಮವಾಗಿ ಕಂದಾಯ ಮತ್ತು ಪೋಲೀಸ್ ಇಲಾಖೆಗಳು ಕಾರ್ಯಾಚರಣೆ ಮಾಡುತ್ತಿದ್ದವು. 1959ರ ಜನವರಿ 1 ರಿಂದ ಇಡೀ ರಾಜ್ಯದಲ್ಲಿ ಆಚರಣೆಗೆ ಬರುವಂತೆ ಒಂದು ಸಮಗ್ರ ಮನರಂಜನೆ ತೆರಿಗೆ ಅಧಿನಿಯಮ ಜಾರಿಗೆ ಬಂತು. ಚಲನಚಿತ್ರ ಪ್ರದರ್ಶನ ಮತ್ತು ಕುದುರೆ ಜೂಜುಗಳಿಗೆ ಪ್ರವೇಶದ ಟಿಕೆಟ್‌ನ ದರವನ್ನು ಆಧರಿಸಿ ತೆರಿಗೆ

ಯನ್ನು ಹೇರಲಾಗುತ್ತದೆ. ನಾಟಕ, ಸಂಗೀತ ಹಾಗೂ ಇತರ ಪ್ರದರ್ಶನಗಳಿಗೆ ಈ ತೆರಿಗೆ ಇಲ್ಲ. ಮನರಂಜನೆ ತೆರಿಗೆ ಮತ್ತು ಪ್ರದರ್ಶನ ತೆರಿಗೆಗಳ ಮೇಲೆ ಶೇ. 25ರಂತೆ ಹೆಚ್ಚಿನ ಕರ (ಸರ್‌ಚಾರ್ಜ್) ವನ್ನು 1962ರಲ್ಲಿ ಜಾರಿ ಮಾಡಲಾಯಿತು. 1966ರಲ್ಲಿ ಈ ಸರ್‌ಚಾರ್ಜ್ ಅನ್ನು ರಾಜ್ಯದಲ್ಲೇ ತಯಾರಾದ ಚಿತ್ರಗಳಿಗೆ ಸಹಾಯ ಧನ ನೀಡುವ ಉದ್ದೇಶದಿಂದ ಶೇ. 10ರಷ್ಟು ಹೆಚ್ಚಿಸಲಾಯಿತು. ಪ್ರದರ್ಶನ ತೆರಿಗೆಯ ಮೇಲಣ ಸರ್‌ಚಾರ್ಜ್‌ನ್ನು ತೆರಿಗೆಯ ಜೊತೆಗೇ 1966ರಲ್ಲಿ ಸೇರಿಸಲಾಯಿತು. ಈ ಹೆಚ್ಚಿನ ಕರವನ್ನು 1971ರಲ್ಲಿ ಮತ್ತೆ ಶೇ. 60ಕ್ಕೆ ಏರಿಸಲಾಯಿತು. 1974ರ ಏಪ್ರಿಲ್ ಒಂದರಿಂದ ಇದು ಶೇ. 100 ಆಯಿತು. ಸಂಗ್ರಹವಾದ ಈ ತೆರಿಗೆಯಲ್ಲಿ ಪ್ರದರ್ಶನ (ತೆರಿಗೆ ಮತ್ತು ಹೆಚ್ಚಿನ ತೆರಿಗೆಯನ್ನು ಹೊರತುಪಡಿಸಿ) ಶೇ. 10ನ್ನು ರಾಜ್ಯ ಸರಕಾರವು ತಾನೇ ಸಂಗ್ರಹಣಾ ವೆಚ್ಚವೆಂದು ಉಳಿಸಿಕೊಂಡು ಮನರಂಜನಾ ತೆರಿಗೆಯ ಉಳಿದ (ಶೇ. 90 ಭಾಗವನ್ನು) ಆಯಾ ಸ್ಥಳದ ಸ್ಥಳೀಯ ಸಂಸ್ಥೆಗಳಿಗೆ ನೀಡುತ್ತದೆ. ಜಿಲ್ಲೆಯ ಇತ್ತೀಚಿಗಿನ ವರ್ಷಗಳಲ್ಲಿ ವಸೂಲಾದ ಮನರಂಜನೆ ತೆರಿಗೆ ವಿವರವನ್ನು ಕೆಳಗೆ ಕೊಟ್ಟಿದೆ.

(ಮೊತ್ತ ಲಕ್ಷ ರೂ.ಗಳಲ್ಲಿ)

| ವರ್ಷ | ಕಾಯಂ ಚಲನ ಚಿತ್ರಮಂದಿರಗಳು | ಟೂರಿಂಗ್ ಟಾಕೀಸ್‌ಗಳು | ಮನರಂಜನ ತೆರಿಗೆ | ಪ್ರದರ್ಶನ ತೆರಿಗೆ | ಒಟ್ಟು |
|---|---|---|---|---|---|
| 1985–86 | 9 | 9 | 13.19 | 2.81 | 16.00 |
| 1986–87 | 9 | 9 | 13.79 | 2.66 | 16.46 |
| 1987–88 | 10 | 7 | 14.10 | 3.35 | 17.46 |
| 1988–89 | 10 | 8 | 15.02 | 1.05 | 11.07 |
| 1989–90 | 10 | 9 | 15.61 | 1.08 | 16.89 |

**ಪ್ರವೇಶ ತೆರಿಗೆ**

ಅಕ್ಟ್ರಾಯ್ ಅಥವಾ ಪ್ರವೇಶ ಸುಂಕವು ಪಾರಂಪರಿಕವಾಗಿ ಬಂದ ಒಂದು ಸ್ಥಳೀಯ ಸಂಸ್ಥೆಗಳ ಆದಾಯ ಮೂಲವಾಗಿದ್ದ ಪ್ರತೀಯೊಂದು ಪುರಸಭೆ ಮತ್ತು ಪಟ್ಟಣ ಪಂಚಾಯತುಗಳು ತಮ್ಮ ಊರಿಗೇ ಬಳಕೆಗಾಗಿ ಇಲ್ಲವೇ ಮಾರಾಟಕ್ಕಾಗಿ ಬರುವ ವಸ್ತುಗಳ ಮಾರಾಟ ತೆರಿಗೆ ಜೊತೆಗೆ ಒಂದು ಅಧಿಕ ತೆರಿಗೆ (ಸರ್‌ಚಾರ್ಜ್) ರೂಪದಲ್ಲಿ ಅದನ್ನು ಸಂಗ್ರಹಿಸುತ್ತಿದ್ದರು. ಈ ತೆರಿಗೆಯನ್ನು 1979ರಲ್ಲಿ ತೆಗೆದುಹಾಕಿ, ಸ್ಥಳೀಯ ಪ್ರದೇಶಗಳಿಗೆ ಉಪಭೋಗ, ಬಳಕೆ ಅಥವಾ ಮಾರಾಟಕ್ಕೆ ಬರುವ ಸರಕುಗಳ ಪ್ರವೇಶ ತೆರಿಗೆ ಅಧಿನಿಯಮವನ್ನು 1979 ರಲ್ಲಿ ಜಾರಿಗೆ ತಂದರು. ಇದನ್ನು ಅಕ್ಟ್ರಾಯ್ ರದ್ದತಿಯಿಂದ ಆದ ನಷ್ಟವನ್ನು ತುಂಬಲು ಜಾರಿಮಾಡಲಾಗಿತ್ತು. ಕರ್ನಾಟಕ ಮಾರಾಟ ತೆರಿಗೆಯ ಮೇಲೆ ಶೇ. 10ರ ದರದಲ್ಲಿ ಸರ್‌ಚಾರ್ಜ್ ರೂಪದಲ್ಲಿ ಇದನ್ನು ಸಂಗ್ರಹಿಸಲಾಗುತ್ತಿದೆ. ಬಟ್ಟೆ, ತಂಬಾಕು ಮತ್ತು ಸಕ್ಕರೆ ಮುಂತಾದ ಮಾರಾಟ ತೆರಿಗೆಗೆ ಒಳಪಡದ ವಸ್ತುಗಳ ಮೇಲೂ ತೆರಿಗೆಯನ್ನು ಆಕರಿಸಲಾಗಿದೆ ; ಈ ಆಕರಣೆ ದರ ಶೇ. 1 ರಿಂದ 2. ಈ ಅಧಿನಿಯಮವನ್ನು 1-6-1979 ರಿಂದ ಜಾರಿಗೊಳಿಸಬೇಕೆಂದಿದ್ದು, ಮುಂದೆ 1-10-1980 ರಿಂದ ವಾಸ್ತವವಾಗಿ ಜಾರಿಗೆ ತರಲಾಯಿತು. 1982-83 ರಿಂದ ಈ ತೆರಿಗೆಗೆ ಒಳಪಡತಕ್ಕ ವಸ್ತುಗಳ ಸಂಖ್ಯೆಯನ್ನು 13ಕ್ಕೆ ವಿಸ್ತರಿಸಿ ಸಕ್ಕರೆ, ತಂಬಾಕು ಮತ್ತು ಅವುಗಳ ಉತ್ಪನ್ನಗಳ ಮೇಲಣ ತೆರಿಗೆಯ ದರವನ್ನು ಹೆಚ್ಚಿಸಲಾಯಿತು. ಇತ್ತೀಚಿಗಿನ ವರ್ಷಗಳಲ್ಲಿ ಈ ಜಿಲ್ಲೆಯಲ್ಲಿ ಪ್ರವೇಶತೆರಿಗೆ ತೆರುವವರ ಸಂಖ್ಯೆ (ಕಂಸದಲ್ಲಿ ಕೊಟ್ಟಿದೆ) ಮತ್ತು ಸಂಗ್ರಹವಾದ ಮೊತ್ತವು ಈ ರೀತಿ ಇದೆ : 1985-86 (423) 6.83 ಲಕ್ಷ ರೂ ; 1956-87 (251) 9.18 ಲಕ್ಷ ರೂ ; 1987-88 (271) 10.54 ಲಕ್ಷ ರೂ; 1988-89 (276) 3.65 ಲಕ್ಷ ರೂ ; 1989-90 (276) 3.70 ಲಕ್ಷ ರೂ.

## ಕೇಂದ್ರ ಸರಕಾರದ ತೆರಿಗೆಗಳು

**ಕೇಂದ್ರ ಅಬಕಾರಿ ಶುಲ್ಕ**

ಅಬಕಾರಿ ಶುಲ್ಕವನ್ನು ವಸೂಲಿ ಮಾಡುವ ಪದ್ಧತಿಯು ಅರಳೆ ನೂಲಿನ ಮೇಲೆ ಹೇರಿದ ಸುಂಕದಿಂದ 1894 ರಿಂದ

ಆರಂಭವಾಯಿತು ; 1895 ರಿಂದ ಇದನ್ನು ಉಚ್ಚ ಜಾತಿಯ ಅರಳೆಯ ಮೇಲೂ ಆಕರಿಸಿದರು. ಮುಂದೆ 1917 ರಿಂದು ವಾಹನದ ಇಂಧನದ ಮೇಲೂ ಈ ಶುಲ್ಕವನ್ನು ಹೇರಿದ್ದರು. ಮುಂದೆ ಸೀಮೆಎಣ್ಣೆ (1922), ಬೆಳ್ಳಿ (1930), ಸಕ್ಕರೆ, ಬೆಂಕಿಪೆಟ್ಟಿಗೆ, ಉಕ್ಕು ಇತ್ಯಾದಿಗಳ ಮೇಲೆ (1934) ಕೂಡ ಈ ತೆರಿಗೆ ಬಂದು ಈಗ ಕೇಂದ್ರ ಅಬಕಾರಿಸುಂಕವನ್ನು 136 ವಸ್ತುಗಳ ಮೇಲೆ ಹೇರಲಾಗುತ್ತಿದ್ದು ಅದು ಕೇಂದ್ರ ಸರಕಾರದ ಆದಾಯದಲ್ಲಿ ಮೂರನೇಯ ಎರಡಂಶವಾಗುತ್ತಿದೆ. ವಾಹನ ಇಂಧನ (ಪೆಟ್ರೋಲ್) ಮೇಲೆ ಇದನ್ನು ಇತ್ತೀಚೆಗೆ ಹೆಚ್ಚಾಗಿ ಆಕರಿಸಿದೆ. 1944ರ ಕೇಂದ್ರ ಅಬಕಾರಿ ಮತ್ತು ಉಪ್ಪು ಅಧಿನಿಯಮ ಮತ್ತು ನಿಯಮಗಳಂತೆ ಇದನ್ನು ಸಂಗ್ರಹಿಸಲಾಗುತ್ತಿದ್ದು ಮೂಲ ಅಬಕಾರಿ ಸುಂಕ, ವಿಶೇಷ ಅಬಕಾರಿ ಸುಂಕ, ಹೆಚ್ಚುವರಿ ಅಬಕಾರಿ ಸುಂಕ, ಕೈಮಗ್ಗದ ಸೆಸ್, ಕಾಗದ, ಅರಳೆ, ಖಾದ್ಯತೈಲಗಳು, ಕೊಬ್ಬರಿ, ಸೆಣಬು ಮತ್ತು ಅದರಿಂದ ತಯಾರಾದ ವಸ್ತುಗಳು, ದೇಶೀಯ ಸಂಸ್ಕರಿಸದ ಇಂಧನ ತೈಲ, ಬೀಡಿ, ಸಕ್ಕರೆ ಇವುಗಳ ಮೇಲಿನ ಸೆಸ್‌ಗಳಿಂದಲೂ ಈ ಆದಾಯ ಬರುತ್ತಿದೆ. ಇತ್ತೀಚೆಗಿನ ಐದು ವರ್ಷಗಳಲ್ಲಿ ಜಿಲ್ಲೆಯಲ್ಲಿ ಕೆಲವೊಂದು ವಸ್ತುಗಳಿಂದ ವಸೂಲಾದ ಸುಂಕವನ್ನು ಈ ಕೆಳಗೆ ಕೊಟ್ಟಿದೆ. 1985-86 : ಕಾಫಿ–33.15 ಲಕ್ಷ ರೂ ; ಚಹಾ–2.95 ಲಕ್ಷ ರೂ ; 1986-87 : ಕಾಫಿ-56.91 ಲಕ್ಷ ರೂ ; ಚಹ 2.83 ಲಕ್ಷ ರೂ ; 1987-88 : ಕಾಫಿ–40.48 ಲಕ್ಷ ರೂ ; ಚಹ–2.93 ಲಕ್ಷ ರೂ ; 1988–89 : ಕಾಫಿ–58.55 ಲಕ್ಷ ರೂ ; ಚಹ–2.41 ಲಕ್ಷ ರೂ ; 1989–90 : ಕಾಫಿ 76.97 ಲಕ್ಷ ರೂ ; ಚಹ–3.36 ಲಕ್ಷ ರೂ.

**ವರಮಾನಕರ**

ಕೊಡಗು ಜಿಲ್ಲೆಯಲ್ಲಿ ವರಮಾನಕರ ಇಲಾಖೆಯು 1955 ರಿಂದ ಕಾರ್ಯ ಪ್ರವೃತ್ತವಾಗಿದೆ. ಕೊಡಗು ಒಂದು 'ಸಿ' ವರ್ಗದ ರಾಜ್ಯವಾಗಿದ್ದಾಗ ಕೃಷಿ ವರಮಾನ ತೆರಿಗೆ ಮತ್ತು ಕೇಂದ್ರ ಸರಕಾರದ ವರಮಾನ ತೆರಿಗೆ ವಸೂಲಾತಿಗಾಗಿ ಒಂದು ಕಚೇರಿ ಕೊಡಗಿನಲ್ಲಿ ಇತ್ತು. ಆದರೆ ಕೊಡಗಿನಲ್ಲಿ ಈ ಕಚೇರಿಗೆ ಕೆಲಸ ಇರದ್ದರಿಂದ ಈ ಕಚೇರಿಯನ್ನು 1958ರಲ್ಲಿ ಮೈಸೂರಿಗೆ ವರ್ಗಾಯಿಸಿ ಮುಂದೆ 1959 ರಲ್ಲಿ ಕೊಡಗಿಗೇ ಮತ್ತೆ ವರ್ಗಾಯಿಸಿದರು. ಇಡೀ ಕೊಡಗು ಜಿಲ್ಲೆಯ ಮೇಲೆ ಈ ವರಮಾನಕರ ಇಲಾಖೆಯು ವ್ಯಾಪ್ತಿ ಇದೆ. 1961ರ ವರಮಾನಕರ ಅಧಿನಿಯಮದಂತೆ ಕಾಫಿ ತೋಟಗಳಿಂದ ಬರುವ ಆದಾಯವು ಕೃಷಿ ಮೂಲದ್ದಾಗಿ ಈ ತೆರಿಗೆಯ ವ್ಯಾಪ್ತಿಗೆ ಸೇರುವುದಿಲ್ಲ. ಕೃಷಿಮೂಲದ ಆದಾಯವು ಸಂಪತ್ತಿನ ತೆರಿಗೆಯ ವ್ಯಾಪ್ತಿಯಲ್ಲಿ 1970-71 ರಿಂದ ತರಲ್ಪಟ್ಟದ್ದರಿಂದ ಈ ತೆರಿಗೆ ಒಳಪಟ್ಟವರ ಸಂಖ್ಯೆ ಕೊಡಗಿನಲ್ಲಿ 4,000ಕ್ಕೆ ಏರಿ, ಮಡಿಕೇರಿಯ ಇದಕ್ಕಾಗಿಯೇ ಇನ್ಸ್‌ಪೆಕ್ಟರ್ ಅಧಿಕಾರಿಯನ್ನು ನೇಮಿಸಿದರು. ಕೃಷಿ ಭೂಮಿಯ ಮೇಲೆ ಸಂಪತ್ತಿನ ತೆರಿಗೆ ಹೇರುವುದನ್ನು 1982-83 ರಲ್ಲಿ ಹಿಂತೆಗೆದುದರಿಂದ ಈ ಹೆಚ್ಚುವರಿ ಅಧಿಕಾರಿಯನ್ನು ಜಿಲ್ಲೆಯಿಂದ ಹಿಂತೆಗೆಯಲಾಯಿತು.

1961ರ ವರಮಾನಕರ ಅಧಿನಿಯಮ, 1956ರ ಸಂಪತ್ತು ತೆರಿಗೆ ಅಧಿನಿಯಮ, 1958ರ ಕಾಣಿಕೆ ತೆರಿಗೆಯ ಅಧಿನಿಯಮ ಇದನ್ನು ವರಮಾನ ತೆರಿಗೆ ಇಲಾಖೆಯು 1955 ರಿಂದ ವಸೂಲಾತಿ ಮಾಡುತ್ತಿದ್ದು, ವರಮಾನಕರ ಇಲಾಖೆಯು ವೇತನ, ವಾಣಿಜ್ಯ, ಮೂಲಧನ ಆದಾಯ (ಕ್ಯಾಪಿಟಲ್ ಗೇನ್ಸ್) ಮತ್ತು ಇತರ ಮೂಲಗಳಿಂದ ಬರುವ ಆದಾಯವನ್ನು 1961 ರ ಅಧಿನಿಯಮದಂತೆ ವಸೂಲು ಮಾಡುತ್ತಿದ್ದರೆ ಆಸ್ತಿ ತೆರಿಗೆಯು ಚರ ಅಥವಾ ಸ್ಥಿರ ಆಸ್ತಿಗೆ ಅದರ ಮೌಲ್ಯಮಾಪನ ಮಾಡಿದ ಕಾಲಕ್ಕೆ 1957ರ ಅಧಿನಿಯಮದಂತೆ ಸಂಪತ್ತು ತೆರಿಗೆಯನ್ನು ವಸೂಲು ಮಾಡಲಾಗುತ್ತದೆ. ಕಾಣಿಕೆ ತೆರಿಗೆಯು ಕಾಣಿಕೆ ನೀಡಿದ ಪ್ರಸಂಗಗಳಲ್ಲಿ ತೆರಿಗೆ ಮಾಡುತ್ತಿದ್ದು ಎಸ್ಟೇಟ್ ಡ್ಯೂಟಿ (ಉತ್ತರಾಧಿಕಾರ) ಯನ್ನು ಬೆಂಗಳೂರಲ್ಲಿ ಇರುವ ಉಪನಿಯಂತ್ರಕರು ವಸೂಲಾತಿ ಮಾಡುತ್ತಾರೆ. ಜಿಲ್ಲೆಯಲ್ಲಿ ಕಳೆದ ಐದು ವರ್ಷಗಳಲ್ಲಿ ವಸೂಲಾದ ಆದಾಯಕರ, ಕಾಣಿಕೆ ತೆರಿಗೆ (ಗಿಫ್ಟ್ ಟ್ಯಾಕ್ಸ್) ಮತ್ತು ಸಂಪತ್ತು ತೆರಿಗೆ (ವೆಲ್ತ್ ಟ್ಯಾಕ್ಸ್)ಯು ವಿವರಗಳು ಹೀಗಿವೆ.

ವರಮಾನ ತೆರಿಗೆ (ಲಕ್ಷ ರೂ.ಗಳಲ್ಲಿ)

| ವರ್ಷ | ತೆರುವ ವ್ಯಾಪಾರಿಗಳ (ಸಂಖ್ಯೆ) | ತೆರುವ ವೇತನದಾರರ (ಸಂಖ್ಯೆ) | ಒಟ್ಟು | ಸಂಗ್ರಹವಾದ ಮೊತ್ತ |
|---|---|---|---|---|
| 1987—88 | 1,803 | 280 | 2,083 | 85.32 |
| 1988—89 | 2,042 | 320 | 2,362 | 98.41 |
| 1989—90 | 2,111 | 420 | 2,531 | 143.20 |
| 1990—91 | 2,244 | 476 | 2,720 | 142.21 |
| 1991—92 | 2,550 | 484 | 3,034 | 110.57 |

ಕಾಣಿಕೆ ತೆರಿಗೆ

| ವರ್ಷ | ತೆರಿಗೆದಾರರು | ಸಂಗ್ರಹವಾದ ಮೊತ್ತ ಸಾವಿರ ರೂ.ಗಳಲ್ಲಿ |
|---|---|---|
| 1987–88 | 37 | 80 |
| 1988–89 | 39 | 137 |
| 1989–90 | 6 | 12 |
| 1990–91 | 9 | 70 |
| 1991–92 | 5 | 30 |

ಸಂಪತ್ತು ತೆರಿಗೆ

| ವರ್ಷ | ತೆರಿಗೆದಾರರು | ಸಂಗ್ರಹವಾದ ಮೊತ್ತ (ಸಾವಿರ ರೂ.ಗಳಲ್ಲಿ) |
|---|---|---|
| 1987–88 | 562 | 1,922 |
| 1988–89 | 579 | 2,072 |
| 1989–90 | 583 | 2,502 |
| 1990–91 | 587 | 3,070 |
| 1991–92 | 574 | 2,775 |